ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಡಿಸೆಂಬರ್ 22 ಸೋಮವಾರ 2025

46

ಸಂಪುಟ: 46 | ಸಂಚಿಕೆ: 244 | ಪುಟಗಳು: 12

₹4

ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

'ಸೀಸನಲ್ ಫ್ಲೂ' ರಾಜ್ಯದಲ್ಲಿ ಹೆಚ್ಚಳ

ಆರೋಗ್ಯ ಇಲಾಖೆಯಿಂದ ಮಾರ್ಗಸೂಚಿ ಬಿಡುಗಡೆ

ಬೆಂಗಳೂರು: ರಾಜ್ಯದಲ್ಲಿ ಸೀಸನಲ್ ಫ್ಲೂ ಹೆಚ್ಚಳ ಆಗುತ್ತಿರುವ ಹಿನ್ನೆಲೆಯಲ್ಲಿ ಆರೋಗ್ಯ ಇಲಾಖೆಯಿಂದ ಮಾರ್ಗಸೂಚಿ ಬಿಡುಗಡೆ ಮಾಡಲಾಗಿದೆ.

ಡಿಸೆಂಬರ್, ಜನವರಿಯಿಂದ ಮಾರ್ಚ್‌ತನಕ ಸೀಸನಲ್ ಫ್ಲೂ ಹೆಚ್ಚಳದ ಭೀತಿ ಇರುವ ಹಿನ್ನೆಲೆಯಲ್ಲಿ ಕ್ರಮ ಕೈಗೊಳ್ಳಲು ಆಸ್ಪತ್ರೆಗಳಿಗೆ ಆರೋಗ್ಯ ಇಲಾಖೆ ಸೂಚನೆ ನೀಡಿದೆ. ಸೋಂಕಿತರ ಎಂಜಿಲಿನಿಂದ ಹರಡುವ ಸೋಂಕು ಇದಾಗಿದ್ದು ಮುನ್ನೆಚ್ಚರಿಕೆ ವಹಿಸುವಂತೆ ಮಾರ್ಗಸೂಚಿಯಲ್ಲಿ ಉಲ್ಲೇಖಿಸಲಾಗಿದೆ. ಮಕ್ಕಳು, ಹಿರಿಯರು, ಗರ್ಭಿಣಿಯರು, ಕೋಮಾರ್ಬಿಟೀಸ್ ಪೇಶೆಂಟ್‌ಗಳಿಗೆ ಹೆಚ್ಚಿನ ಅಪಾಯ ಉಂಟಾಗುವ ಸಾಧ್ಯತೆಯಿದ್ದು, ಜ್ವರ, ಕೆಮ್ಮು, ಕೆಂಪು ಗುಳ್ಳೆ, ಹಸಿವು ಆಗದಿರುವುದು, ■ 6ನೇ ಪುಟಕ್ಕೆ

ಮುಂದಿನ ವಾರ ಫಲಾನುಭವಿಗಳ ಖಾತೆಗೆ 'ಗೃಹಲಕ್ಷ್ಮಿ' ಹಣ

ಬೆಳಗಾವಿ: ಫೆಬ್ರವರಿ–ಮಾರ್ಚ್ ತಿಂಗಳ ಗೃಹಲಕ್ಷ್ಮಿ ಖಾತೆ ಹಣವನ್ನು ಫಲಾನುಭವಿಗಳ ಖಾತೆಗೆ ಸರ್ಕಾರ ಹಾಕಿಲ್ಲ ಎಂದು ಬೆಳಗಾವಿ ಅಧಿವೇಶನದಲ್ಲಿ ಆಡಳಿತ ಮತ್ತು ವಿಪಕ್ಷಗಳ ಮಧ್ಯೆ ತೀವ್ರ ಚರ್ಚೆಯಾಗಿತ್ತು.

ವರ್ಷಾಂತ್ಯದಲ್ಲಿ ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್ ಸಿಹಿಸುದ್ದಿ ಕೊಟ್ಟಿದ್ದಾರೆ. ನಾಳೆ ಸೋಮವಾರದಿಂದ ಶನಿವಾರದ ಒಳಗಡೆ 24ನೇ ಕಂತು ಬಿಡುಗಡೆ ಆಗುತ್ತದೆ ಎಂದು ತಿಳಿಸಿದ್ದಾರೆ. ಬೆಳಗಾವಿಯಲ್ಲಿ ಇಂದು ಸುದ್ದಿಗಾರರ ಜೊತೆ ಮಾತನಾಡಿದ ಅವರು, ಈಗಾಗಲೇ 24ನೇ ■ 6ನೇ ಪುಟಕ್ಕೆ

ಸುತ್ತೂರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತ್ಯೋತ್ಸವ ಸಮಾರೋಪ

ಆರ್ಥಿಕ ಶಕ್ತಿಯಿಂದಷ್ಟೇ ಜಾತಿ ಅವನತಿ

- ಮುಖ್ಯಮಂತ್ರಿ ಸಿದ್ದರಾಮಯ್ಯ ಪ್ರತಿಪಾದನೆ
- ವಿದ್ಯಾವಂತರೇ ಮೌಢ್ಯಕ್ಕೆ ಶರಣು; ವಿಷಾದ


ಸಮಾರೋಪ ಸಮಾರಂಭದಲ್ಲಿ ಮಾತನಾಡುತ್ತಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ.

> ಸಾವಿರಾರು ವರ್ಷಗಳಿಂದ ಋಷಿಮುನಿಗಳು, ಸಾಧು ಸಂತರು, ಸೂಫಿಗಳು, ಸಮಾಜ ಸುಧಾರಕರು ಸಮಾಜ ಬದಲಾವಣೆಗೆ ಶ್ರಮಿಸಿದ್ದಾರೆ. ಈ ನಿಟ್ಟಿನಲ್ಲಿ ಸುತ್ತೂರಿನ ಶಿವರಾತ್ರಿ ಶಿವಯೋಗಿಗಳೂ ಮುಖ್ಯ ಪಂಕ್ತಿಯಲ್ಲಿ ಬರುತ್ತಾರೆ. ಸುತ್ತೂರು ಮಠ ಆರೋಗ್ಯ, ಶಿಕ್ಷಣ, ದಾಸೋಹವನ್ನು ಎಲ್ಲಾ ಸಮಾಜಕ್ಕೂ ನೀಡುತ್ತಾ ಬಂದಿದೆ. ಈ ಮೂಲಕ ಮನುಷ್ಯರ ಕಷ್ಟ–ಸುಖಗಳಿಗೆ ಸ್ಪಂದಿಸುತ್ತಾ ಬಂದಿದೆ. ಆದಿಜಗದ್ಗುರು ಶ್ರೀ ಶಿವರಾತ್ರೀ ಶ್ವರ ಶಿವಯೋಗಿಗಳ ಜಯಂತ್ಯೋತ್ಸವ ಪ್ರತಿ ವರ್ಷವೂ ಅದ್ಧೂರಿಯಾಗಿ ನಡೆಯಬೇಕು. ಈ ವರ್ಷ ಯಶಸ್ವಿಯಾಗುವಲ್ಲಿ ಕ್ಷೇತ್ರದ ಶಾಸಕ ನರೇಂದ್ರಸ್ವಾಮಿ ಎಲ್ಲಾ ರೀತಿಯ ಸಹಕಾರ ನೀಡಿದ್ದು, ಇವರಿಗೆ ಸದಾ ಶ್ರೀಗಳ ಆಶೀರ್ವಾದವಿರಲಿ.
> -ಮುಖ್ಯಮಂತ್ರಿ ಸಿದ್ದರಾಮಯ್ಯ

ಮಳವಳ್ಳಿ, ಡಿ.21(ಮೋಹನ್‌ರಾಜ್)– ಆರ್ಥಿಕ ಹಾಗೂ ಸಾಮಾಜಿಕ ಶಕ್ತಿಯಿಂದ ಮಾತ್ರ ಜಾತಿ ವ್ಯವಸ್ಥೆ ಅಳಿಯಲು ಸಾಧ್ಯ ಎಂದು ಮುಖ್ಯಮಂತ್ರಿ ಸಿದ್ದರಾಮಯ್ಯ ಹೇಳಿದರು.

ಪಟ್ಟಣದ ಶಾಂತಿ ಕಾಲೇಜು ಎದುರಿನ ಮೈದಾನದಲ್ಲಿ ಆಯೋಜಿಸಿದ್ದ ಸುತ್ತೂರು ಜಗದ್ಗುರು ಶ್ರೀಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತ್ಯೋತ್ಸವದ ಸಮಾರೋಪ ಸಮಾರಂಭದಲ್ಲಿ ಪಾಲ್ಗೊಂಡು ಮಾತನಾಡಿದ ಅವರು, ಜಾತಿ ವ್ಯವಸ್ಥೆ ಜಢತ್ವದಿಂದ ಕೂಡಿದೆ. ಆರ್ಥಿಕ, ಸಾಮಾಜಿಕ ಶಕ್ತಿ ದೊರೆತಾಗ ಮಾತ್ರ ಚಲನೆ ಸಿಗುತ್ತದೆ. ಇಲ್ಲವಾದರೆ ಹಾಗೆಯೇ ಉಳಿದುಬಿಡುತ್ತದೆ ಎಂದರು.

ಬಸವಣ್ಣನವರು ಸಮಾನತೆ ಸಾರಿ ಎರಡೂವರೆ ಸಾವಿರ ವರ್ಷಗಳಾಗಿದ್ದು, ಇನ್ನೂ ಜಾತಿ ವ್ಯವಸ್ಥೆ ಅಳಿದಿಲ್ಲ. ಎಷ್ಟು ಹೋರಾಟ ಮಾಡಿದರೂ ಜನರಲ್ಲಿ ಮೌಢ್ಯ ಪಾಲನೆ ಈಗಲೂ ಹಾಗೆ ಇದೆ. ಮನುಷ್ಯ ಸಮಾಜ ನಿರ್ಮಾಣವಾಗಬೇಕು, ಎಲ್ಲರೂ ಸಮಾನ ಅವಕಾಶದೊಂದಿಗೆ ಬದುಕಬೇಕೆಂದು ಬಸವಾದಿ ಶರಣರು ಆಶಿಸಿ, ಆ ನಿಟ್ಟಿನಲ್ಲಿ ಶ್ರಮಿಸಿದರು. ಆದರೂ ಸಮಾಜದಲ್ಲಿ ಜಾತಿ ವ್ಯವಸ್ಥೆ ಉಳಿದಿದೆ. ನಾವು ಬಸವಣ್ಣರ ವಿಚಾರಗಳನ್ನು ಪಾಲನೆ ಮಾಡುತ್ತಿಲ್ಲ ಎಂದು ವಿಷಾಧಿಸಿದರು.

ಸಮಾಜದಲ್ಲಿ ಅನೇಕ ಜಾತಿಗಳು, ಧರ್ಮಗಳಿವೆ. ಅಸಮಾನತೆ ಹೋಗದೇ ಸಮಾಜದಲ್ಲಿ ಶಾಂತಿ ನೆಲೆಸಲು ಸಾಧ್ಯವಿಲ್ಲ. ಆದ್ದರಿಂದಲೇ ಅಸಮಾನತೆ ಹೋಗಲಾಡಿಸಲು ಬಹಳಷ್ಟು ಸಮಾಜ ಸುಧಾರಕರು, ಋಷಿಮುನಿಗಳು ಪ್ರಯತ್ನಿಸಿದ್ದಾರೆ. ಯಾವ ಧರ್ಮದಲ್ಲೂ ಪ್ರೀತಿ, ಕರುಣೆ ಹೊರತು ಮನುಷ್ಯ ಮನುಷ್ಯನ ನಡುವೆ ದ್ವೇಷ ಬೋಧಿಸುವುದಿಲ್ಲ. ನಾವು ಮನುಷ್ಯ ಸಮಾಜ ನಿರ್ಮಾಣಕ್ಕೆ ಪ್ರಯತ್ನಿಸಬೇಕು. ಆದರೆ, ಮನುಷ್ಯ ಪ್ರಾಣಿಗಳನ್ನು ಪ್ರೀತಿಸುವಂತೆ ಮನುಷ್ಯನನ್ನು ಪ್ರೀತಿಸುವುದಿಲ್ಲ ಎಂದು ಬೇಸರ ವ್ಯಕ್ತಪಡಿಸಿದರು.

ಜಾತೀಯತೆ ಮನಃಸ್ಥಿತಿ ಬದಲಾಗಬಾರದು, ಸಮ ಸಮಾಜ ನಿರ್ಮಾಣವಾಗಬಾರದು ಎಂದು ಮನುಷ್ಯರ ನಡುವೆ ದ್ವೇಷ ಬಿತ್ತುವ ಹಲವು ಶಕ್ತಿಗಳಿವೆ. ಅಂತಹ ಶಕ್ತಿಗಳ ವಿರುದ್ಧ ಹೋರಾಡಬೇಕಿರುವುದು ನಮ್ಮ ಕರ್ತವ್ಯ. ಅಸಮಾನತೆ ಇರುವ ಸಮಾಜದಲ್ಲಿ ಮನುಷ್ಯತ್ವ ಕಾಣಲು ಸಾಧ್ಯವಿಲ್ಲ. ವೈದ್ಯರು, ಪಿ.ಹೆಚ್‌ಡಿ, ಇಂಜಿನಿಯರ್, ವಿಜ್ಞಾನಿಗಳು, ಪ್ರಾಂಶುಪಾಲರು ಸೇರಿದಂತೆ ವಿದ್ಯಾವಂತರೇ ಮೌಢ್ಯ, ಕಂದಾಚಾರ ನಂಬುವುದನ್ನು ನಾವು ಕಾಣುತ್ತಿದ್ದೇವೆ. ಏಕೆ ಹೀಗಿದ್ದೀಯಾ ಎಂದು ಕೇಳಿದರೆ ನಾನು ಹಿಂದಿನ ಜನ್ಮದಲ್ಲಿ ಪಾಪ ಮಾಡಿದ್ದೆ. ಅದಕ್ಕೋಸ್ಕರ ಈ ರೀತಿ ಹುಟ್ಟಿದ್ದೇನೆ ಎನ್ನುವವರಿದ್ದಾರೆ. ಇಂತಹವರಿಗೆ ನೀವು ತಿಳಿದಿರುವುದು ತಪ್ಪು ಎಂದು ಅರ್ಥೈಸಬೇಕು. ಹಿಂದಿನ ಜನ್ಮ ಇದೆಯೋ ಇಲ್ಲವೋ ಗೊತ್ತಿಲ್ಲ. ಆದರೆ ಹುಟ್ಟಿದವರಿಗೆ ಸಾವು ಗ್ಯಾರಂಟಿ. ಆವರೆಗೆ ಸಾರ್ಥಕ ಜೀವನ ನಡೆಸಬೇಕಷ್ಟೇ ಎಂದರು. ■ 6ನೇ ಪುಟಕ್ಕೆ

ಡಿ.26ರಿಂದ ರೈಲ್ವೆ ಪ್ರಯಾಣ ದರ ಏರಿಕೆ



500 ಕಿ.ಮೀವರೆಗಿನ ಪ್ರಯಾಣಕ್ಕೆ ನಾನ್ ಎಸಿ ರೈಲುಗಳಲ್ಲಿ 10 ರೂ. ಹೆಚ್ಚಳ

ನವದೆಹಲಿ: ಡಿಸೆಂಬರ್ 26 ರಿಂದ ಭಾರತೀಯ ರೈಲ್ವೆ ತನ್ನ ಟಿಕೆಟ್ ಬೆಲೆಗಳನ್ನು ಹೆಚ್ಚಿಸಲಿದೆ. ಪರಿಷ್ಕೃತ ವ್ಯವಸ್ಥೆಯಡಿಯಲ್ಲಿ, ನಾನ್ ಎಸಿ (ಸಾಮಾನ್ಯ, ಸ್ಲೀಪರ್, ಇತ್ಯಾದಿ) ಕೋಚ್‌ಗಳಲ್ಲಿ 500 ಕಿ.ಮೀ ವರೆಗಿನ ಪ್ರಯಾಣಕ್ಕೆ ಪ್ರಯಾಣಿಕರು ಹೆಚ್ಚುವರಿಯಾಗಿ ರೂ. 10 ಪಾವತಿಸಬೇಕಾಗುತ್ತದೆ.

ಆದಾಗ್ಯೂ, ದರ ಪರಿಷ್ಕರಣೆಯು ಉಪನಗರ (ಸ್ಥಳೀಯ) ರೈಲು ಸೇವೆಗಳು ಅಥವಾ ಮಾಸಿಕ ಸೀಸನ್ ಟಿಕೆಟ್‌ಗಳಿಗೆ ಅನ್ವಯಿಸುವುದಿಲ್ಲ. ಸಾಮಾನ್ಯ ವರ್ಗದ 215 ಕಿ.ಮೀವರೆಗಿನ ಪ್ರಯಾಣದ ಮೇಲೂ ಯಾವುದೇ ಪರಿಣಾಮ ಬೀರುವುದಿಲ್ಲ.

ಬೆಲೆ ಏರಿಕೆಯ ಭಾಗವಾಗಿ, ಭಾರತೀಯ ರೈಲ್ವೆ ಪ್ರಯಾಣದ ದೂರವನ್ನು ಆಧರಿಸಿ ಟಿಕೆಟ್ ಬೆಲೆಗಳನ್ನು ಹೆಚ್ಚಿಸಿದೆ. ನಾನ್ ಎಸಿ ವರ್ಗಗಳಲ್ಲಿನ ಮೇಲ್ ಮತ್ತು ಎಕ್ಸ್‌ಪ್ರೆಸ್ ರೈಲುಗಳಲ್ಲಿ ಪ್ರತಿ ಕಿಲೋಮೀಟರಿಗೆ 2 ಪೈಸೆ ಹೆಚ್ಚಿಸಲಾಗಿದೆ

ರೈಲ್ವೆಯ ಪ್ರಕಾರ, ಪರಿಷ್ಕೃತ ದರವು ಪ್ರಸಕ್ತ ವರ್ಷದಲ್ಲಿ ಸುಮಾರು 600 ಕೋಟಿ ಹೆಚ್ಚುವರಿ ಆದಾಯವನ್ನು ಗಳಿಸುವ ನಿರೀಕ್ಷೆಯಿದೆ. ಕಳೆದ ಹತ್ತು ವರ್ಷಗಳಲ್ಲಿ, ದೇಶದ ದೂರದ ಪ್ರದೇಶಗಳು ಸೇರಿದಂತೆ ಭಾರತೀಯ ರೈಲ್ವೆ ತನ್ನ ಜಾಲ ಮತ್ತು ಸೇವೆಗಳನ್ನು ಗಮನಾರ್ಹವಾಗಿ ವಿಸ್ತರಿಸಿದ್ದು, ಈ ವಿಸ್ತರಣೆ ಮತ್ತು ಸುರಕ್ಷತೆಗೆ ಬಲವಾದ ಒತ್ತು ನೀಡಿರುವುದರಿಂದ, ಹೆಚ್ಚಿನ ಮಾನವಶಕ್ತಿ ಅಗತ್ಯವಿದೆ ಎಂದು ಹೇಳಿಕೆಯಲ್ಲಿ ತಿಳಿಸಿದೆ. ಮಾನವಶಕ್ತಿ ವೆಚ್ಚವು 1.15 ಲಕ್ಷ ಕೋಟಿ ರೂ.ಗಳಿಗೆ ಏರಿದೆ. ಜೊತೆಗೆ ಪಿಂಚಣಿ ವೆಚ್ಚವು 60,000 ಕೋಟಿ ರೂ.ಗಳಿಗೆ ಏರಿದೆ. 2024–25ರಲ್ಲಿ ಕಾರ್ಯಾಚರಣೆಯ ಒಟ್ಟು ವೆಚ್ಚವು 2.63 ಲಕ್ಷ ಕೋಟಿ ■ 6ನೇ ಪುಟಕ್ಕೆ

ರಾಜಣ್ಣ ಭೇಟಿ; ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಸಮರ್ಥನೆ

ಬೆಂಗಳೂರು: ನನಗೆ ಕಾಂಗ್ರೆಸ್‌ನ ಯಾವುದೇ ನಾಯಕರ ಜತೆ ಭಿನ್ನಾಭಿಪ್ರಾಯಗಳಿಲ್ಲ. ನಾನು, ಸಿಎಂ ಒಟ್ಟಿಗೆ ಸಹೋದರರಂತೆ ಕೆಲಸ ಮಾಡುತ್ತಿಲ್ಲವೇ ಎಂದು ಡಿಸಿಎಂ ಡಿ.ಕೆ. ಶಿವಕುಮಾರ್ ಹೇಳಿದ್ದಾರೆ.

ಸದಾಶಿವನಗರದ ತಮ್ಮ ನಿವಾಸದ ಬಳಿ ಮಾಧ್ಯಮಗಳಿಗೆ ಭಾನುವಾರ ಪ್ರತಿಕ್ರಿಯೆ ನೀಡಿದ ಅವರು, ಮುಖ್ಯಮಂತ್ರಿಯವರ ಆಪ್ತ ಬಳಗದವರನ್ನು ಕೆ.ಎನ್. ರಾಜಣ್ಣ ಭೇಟಿ ಮಾಡಿದ್ದೀರಿ ಎಂದು ಕೇಳಿದಾಗ, ಅವರಿಗೆ ಸಿಎಂ ಆಪ್ತರೇನು, ಅವರು ನನಗೂ ಆಪ್ತರೇ. ಅವರು ಯಾರಿಗೆ ಆಪ್ತರಿಲ್ಲ ಹೇಳಿ. ನಾನೂ ಸಿಎಂ ಆಪ್ತರಲ್ಲವೇ, ರಾಜಣ್ಣ ಅವರು ಜನತಾದಳದಲ್ಲಿದ್ದರು. ನಾನು ಕಾಂಗ್ರೆಸ್‌ನವನು. ಅಂದು ಎಸ್.ಎಂ. ಕೃಷ್ಣ ಅವರ ಅವಧಿಯಲ್ಲಿ ರಾಜಣ್ಣ ಅವರನ್ನು ಅಪೆಕ್ಸ್ ಬ್ಯಾಂಕ್ ಅಧ್ಯಕ್ಷನನ್ನಾಗಿ ಮಾಡಿದ್ದು ನಾನು. ಹೋಗಿ ಬೇಕಾದರೆ ಅವರನ್ನೇ ಕೇಳಿ. ಸಿಎಂಗೂ ಇದಕ್ಕೂ ಸಂಬಂಧವೇ ಇಲ್ಲ ಎಂದರು.

ರಾಜಕೀಯ ಬೆಂಬಲಕ್ಕೆ ಕೆ.ಎನ್. ರಾಜಣ್ಣ ಹಾಗೂ ನೀವು ಭೇಟಿ ಮಾಡಿದ್ದೀರಿ ಎಂದಾಗ, ನಾವು ಸಹೋದ್ಯೋಗಿಗಳು. ಅವರು ನಮ್ಮ ಜತೆ ಕೆಲಸ ಮಾಡಿರುವವರು. ನನಗೆ ಯಾರ ಜತೆಯೂ ಭಿನ್ನಾಭಿಪ್ರಾಯಗಳಿಲ್ಲ. ಕಳೆದ 16 ವರ್ಷಗಳಿಂದ, ಅವರು ನಮ್ಮ ಪಕ್ಷಕ್ಕೆ ಬಂದ ದಿನದಿಂದ ನನಗೂ ಮುಖ್ಯಮಂತ್ರಿಯವರಿಗೂ ಭಿನ್ನಾಭಿಪ್ರಾಯಗಳು ■ 6ನೇ ಪುಟಕ್ಕೆ



ಮೈಸೂರು ಅರಮನೆ ಅಂಗಳದಲ್ಲಿ ಮಾಗಿ ಉತ್ಸವ

ಫಲ–ಪುಷ್ಪ ಪ್ರದರ್ಶನಕ್ಕೆ ವಿದ್ಯುಕ್ತ ಚಾಲನೆ

- ಕ್ರಿಸ್‌ಮಸ್, ಹೊಸವರ್ಷ ಸಂಭ್ರಮ ಇಮ್ಮಡಿ
- ಲಕ್ಷಾಂತರ ಹೂಗಳಿಂದ ಮಾಡಿರುವ ಚಿತ್ತಾಕರ್ಷಕ ಆಕೃತಿಗಳು
- ಶೃಂಗೇರಿ ದೇಗುಲ, ಸಾಲುಮರದ ತಿಮ್ಮಕ್ಕ ಪ್ರತಿಕೃತಿ ಅದ್ಭುತ


ಮೈಸೂರು ಅರಮನೆ ಆವರಣದಲ್ಲಿ ಮೈದಳೆದಿರುವ ಅತ್ಯಾಕರ್ಷಕ 'ಫಲಪುಷ್ಪ ಪ್ರದರ್ಶನ'ದ ವಿಹಂಗಮ ನೋಟ.


ಫಲಪುಷ್ಪ ಪ್ರದರ್ಶನವನ್ನು ಉದ್ಘಾಟಿಸಿದ ಬಳಿಕ ಸುತ್ತು ಹಾಕಿದ ಗಣ್ಯರು, ಸಾಲುಮರದ ತಿಮ್ಮಕ್ಕರ ಪ್ರತಿಕೃತಿ ವೀಕ್ಷಿಸುತ್ತಿರುವುದು.

ಮೈಸೂರು, ಡಿ.21(ಎಸ್‌ಬಿಡಿ)– ವರ್ಣಮಯ ಪುಷ್ಪರಾಶಿಯೊಂದಿಗೆ ಪ್ರಸಕ್ತ ವರ್ಷವನ್ನು ಬೀಳ್ಕೊಡುವುದರ ಜೊತೆಗೆ ಹೊಸವರ್ಷವನ್ನು ಸಂಭ್ರಮದಿಂದ ಸ್ವಾಗತಿಸುವ ಉದ್ದೇಶದಿಂದ ಮೈಸೂರು ಅರಮನೆ ಅಂಗಳದಲ್ಲಿ ಆಯೋಜಿಸಿರುವ ಮಾಗಿ ಉತ್ಸವದ 'ಫಲ–ಪುಷ್ಪ ಪ್ರದರ್ಶನ'ಕ್ಕೆ ಭಾನುವಾರ ವಿದ್ಯುಕ್ತ ಚಾಲನೆ ದೊರಕಿತು.


ಅರಮನೆ ಮಂಡಳಿ ವತಿಯಿಂದ ಕ್ರಿಸ್‌ಮಸ್ ಹಾಗೂ ಹೊಸ ವರ್ಷದ ಪ್ರಯುಕ್ತ ಇಂದಿನಿಂದ ಡಿ.31 ರವರೆಗೆ ಹತ್ತು ದಿನಗಳ ಕಾಲ ಆಯೋಜಿಸಿರುವ ಅತ್ಯಾಕರ್ಷಕ ಫಲ–ಪುಷ್ಪ ಪ್ರದರ್ಶನವನ್ನು ಶಾಸಕರಾದ ತನ್ವೀರ್ ಸೇಠ್, ಶ್ರೀವತ್ಸ, ಡಾ.ಡಿ.ತಿಮ್ಮಯ್ಯ ಇನ್ನಿತರ ಗಣ್ಯರು ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿ, ಪುಷ್ಪಕಾಶಿಯಲ್ಲಿ ಸುತ್ತುಹಾಕಿ ವಿವಿಧ ಆಕೃತಿಗಳನ್ನು ಕಣ್ತುಂಬಿಕೊಂಡರು.

ಈ ಬಾರಿ ವಿಶೇಷ: ಶೃಂಗೇರಿಯ ಶ್ರೀ ಆದಿಶಂಕರಾಚಾರ್ಯರು ಸ್ಥಾಪಿಸಿದ ನಾಲ್ಕು ಮಠಗಳಲ್ಲಿ ಒಂದಾದ ಶೃಂಗೇರಿಯ ಶ್ರೀ ವಿದ್ಯಾಶಂಕರ ದೇವಾಲಯದ ಮಾದರಿ ಈ ಬಾರಿಯ ವಿಶೇಷವಾಗಿದೆ. ಐತಿಹಾಸಿಕ ಪರಂಪರೆಯ ವೈಭವ ಹಾಗೂ ಗುರುಭಕ್ತಿಯ ಸಂಕೇತದ ಮಹಾಧ್ಯೋತಕವಾಗಿರುವ ಈ ದೇವಾಲಯದ ಪ್ರತಿರೂಪ ಬಣ್ಣ ಬಣ್ಣದ ಪುಷ್ಪಗಳಿಂದ ಪಡಿಮೂಡಿದೆ. ಸುಮಾರು 50 ಅಡಿ ಅಗಲ, 16 ಅಡಿ ಉದ್ದ ಹಾಗೂ 25 ಅಡಿ ಎತ್ತರವಿರುವ ಈ ದೇವಾಲಯದ ಮಾದರಿಯನ್ನು ಸುಂದರವಾಗಿ ನಿರ್ಮಿಸಲಾಗಿದೆ. ದೇವಾಲಯದ ಸಮೀಪದಲ್ಲೇ ರಾಧಾ–ಕೃಷ್ಣ ಹೂವಿನ ಉಯ್ಯಾಲೆಯಲ್ಲಿ ಕುಳಿತಿರುವ ಪ್ರತಿಕೃತಿ ಕಣ್ಮನ ಸೆಳೆಯುವಂತಿದ್ದು, ಒಟ್ಟಾರೆ ಈ ಸ್ಥಳದಲ್ಲಿ ಆಸ್ತಿಕರಿಗೆ ವಿಶೇಷ ಸಂಚಲನ ಉಂಟಾಗುತ್ತದೆ.

ವೃಕ್ಷಮಾತೆ ಪ್ರತಿರೂಪ: ಹಸಿರಿಗೆ ಮತ್ತೊಂದು ಹೆಸರಾಗಿದ್ದ ವೃಕ್ಷಮಾತೆ ಸಾಲುಮರದ ತಿಮ್ಮಕ್ಕ ಅವರನ್ನು ಫಲಪುಷ್ಪ ಪ್ರದರ್ಶನದಲ್ಲಿ ವಿಶೇಷವಾಗಿ ಸ್ಮರಿಸಿಕೊಳ್ಳಲಾಗಿದೆ. 8 ಸಾವಿರಕ್ಕೂ ಹೆಚ್ಚು ಮರಗಳನ್ನು ಮಕ್ಕಳಂತೆ ಸಲಹಿ, 114ನೇ ವಯಸ್ಸಿನಲ್ಲಿ ಅಗಲಿದ ವೃಕ್ಷಮಾತೆಯ ಪ್ರತಿಕೃತಿಯನ್ನು ಸಿರಿಧಾನ್ಯಗಳಿಂದ ನಿರ್ಮಿಸಿರುವುದು ಅತ್ಯಾಕರ್ಷಣೀಯವಾಗಿದೆ. ಗಿಡ ನೆಟ್ಟು ನೀರೆರೆಯುತ್ತಿರುವ ಪ್ರತಿಕೃತಿಯನ್ನು ನೋಡಿದಾಕ್ಷಣ, ಕೈಮುಗಿದು ನಮಿಸಬೇಕೆಂಬ ಭಾವ ಜಾಗೃತವಾಗುತ್ತದೆ.

ಸಾಧಕರಿಗೆ ಸಲಾಂ: ಭಾರತದ ಸಂವಿಧಾನ ಪೀಠಿಕೆ, ವೀರ ಸೇನಾನಿಗಳನ್ನು ಗೌರವಿಸುವುದರ ಜೊತೆಗೆ ವಿವಿಧ ಕ್ರೀಡೆ ಮೂಲಕ ದೇಶದ ಕೀರ್ತಿ ಮೆರೆದಿರುವ ಸಾಧಕರಿಗೆ ಅಭಿನಂದನೆ ಸಲ್ಲಿಸಲಾಗಿದೆ. ರಾಷ್ಟ್ರಪ್ರೇಮ ಬಿಂಬಿಸುವ ಆಪರೇಷನ್ ■ 6ನೇ ಪುಟಕ್ಕೆ

ಡಿ.31ರವರೆಗೆ ಆಯೋಜನೆ



ಡಿ.31ರವರೆಗೆ ಬೆಳಗ್ಗೆ 10 ರಿಂದ ರಾತ್ರಿ 9ರವರೆಗೆ ಫಲಪುಷ್ಪ ಪ್ರದರ್ಶನದೊಂದಿಗೆ ಸಂಜೆ 7 ರಿಂದ ರಾತ್ರಿ 9ರವರೆಗೆ ಅರಮನೆ ವಿದ್ಯುತ್ ದೀಪಾಲಂಕಾರ ಸವಿಯಬಹುದು. ಡಿ.25ರವರೆಗೆ ಸಂಜೆ 5ರಿಂದ ರಾತ್ರಿ 9.30 ರವರೆಗೆ ಹೆಸರಾಂತ ಕಲಾವಿದರು ಸಂಗೀತ ಕಾರ್ಯಕ್ರಮ ನಡೆಸಿಕೊಡಲಿದ್ದಾರೆ. ಡಿ.31ರಂದು ರಾತ್ರಿ 11ರಿಂದ 12ರವರೆಗೆ ಪೊಲೀಸ್ ಬ್ಯಾಂಡ್ ಪ್ರದರ್ಶನ ನಂತರ ಹಸಿರು ಪಟಾಕಿ ಸಿಡಿಸಿ, ಹೊಸವರ್ಷವನ್ನು ಸ್ವಾಗತಿಸಲಾಗುವುದು.

ವಕೀಲರ ದುಬಾರಿ ಶುಲ್ಕ ನೆನೆದು ಜನ ಕೋರ್ಟ್ ಮೆಟ್ಟಿಲೇರಲು ಹೆದರ್‍ತಾರೆ!

ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧೀಕ್ಷಕ ನವೀನ್ ಅಭಿಮತ



ಮಾನವ ಹಕ್ಕುಗಳ ಸೇವಾ ಸಮಿತಿಯ 9ನೇ ವಾರ್ಷಿಕೋತ್ಸವ ಸಮಾರಂಭದಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು.

ಮೈಸೂರು, ಡಿ.21(ಜಿಎಲ್‌ಐ)– ನಾಗರಿಕರು ಉಚಿತ ಕಾನೂನು ನೆರವು ಸೇವಾ ಸೌಲಭ್ಯವನ್ನು ಪಡೆದುಕೊಳ್ಳಬೇಕು ಎಂದು ಮೈಸೂರು ಜಿಲ್ಲಾ ಕಾನೂನು ಸೇವಾ ಪ್ರಾಧಿಕಾರದ ಅಧೀಕ್ಷಕ ನವೀನ್ ಸಲಹೆ ನೀಡಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯ ರೋಟರಿ ಸಭಾಂಗಣದಲ್ಲಿ ಇಂದು ಮಾನವ ಹಕ್ಕುಗಳ ಸೇವಾ ಸಮಿತಿ ಆಯೋಜಿಸಿದ್ದ ಕಾನೂನು ಅರಿವು–ನೆರವು ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮೈಸೂರಿನ ಕೆ.ಜಿ.ಕೊಪ್ಪಲ್ ಸಮೀಪದ ಮಳಲವಾಡಿ ನ್ಯಾಯಾಲಯದ ಸಂಕೀರ್ಣದಲ್ಲಿ ಉಚಿತವಾಗಿ ಕಾನೂನು ಸಲಹೆ ನೀಡುವ ಕಚೇರಿ ಇದ್ದು, ಇದರ ಸದುಪಯೋಗ ಪಡಿಸಿಕೊಳ್ಳಬಹುದು ಎಂದು ಹೇಳಿದರು.

ನ್ಯಾಯಾಲಯದಲ್ಲಿ ಕೆಲವು ಪ್ರಕರಣ ದಾಖಲಾದ ಸಂದರ್ಭದಲ್ಲಿ ಬಹಳಷ್ಟು ಜನರು ಹೆದರುತ್ತಾರೆ. ವಕೀಲರಿಗೆ ದುಬಾರಿ ಶುಲ್ಕ ಕೊಡಬೇಕಲ್ಲ ಎಂದು ತಲೆ ಮೇಲೆ ಕೈ ಹೊತ್ತು ಚಿಂತಿಸುತ್ತಾರೆ. ಇಂತಹ ಸಂದರ್ಭದಲ್ಲಿ ಜನರು ಉಚಿತ ಕಾನೂನು ಸೇವಾ ಸೌಲಭ್ಯವನ್ನು ಪಡೆದುಕೊಳ್ಳಬಹುದು ಎಂದು ಹೇಳಿದರು.

ಇಂದಿನ ಕಾರ್ಯಕ್ರಮದಲ್ಲಿ ವೀರ ಯೋಧರು ಹಾಗೂ ಪ್ರಗತಿಪರ ರೈತರನ್ನು ಸನ್ಮಾನಿಸಲಾಗುತ್ತಿದೆ. ದೇಶದ ಆರ್ಥಿಕ ಬೆಳವಣಿಗೆಗೆ ಹಾಗೂ ದೇಶದ ಸಂರಕ್ಷಣೆಗೆ ರೈತರು ಹಾಗೂ ಯೋಧರ ಕೊಡುಗೆ ಅಪಾರವಾಗಿದ್ದು, ಇಂದು ಅವರನ್ನು ಸನ್ಮಾನಿಸುತ್ತಿರುವುದು ಒಳ್ಳೆಯ ಬೆಳವಣಿಗೆ ಎಂದು ನವೀನ್ ಅಭಿಪ್ರಾಯಪಟ್ಟರು.

ಇದೇ ವೇಳೆ ಮಾತನಾಡಿದ ಕರ್ನಾಟಕ ಸುಗಮ ಸಂಗೀತ ಪರಿಷತ್ ಅಧ್ಯಕ್ಷ ಡಾ.ನಾಗರಾಜ್ ವಿ.ಬೈರಿ ಅವರು, ಬಹಳಷ್ಟು ಜನರಿಗೆ ಕಾನೂನಿನ ಬಗ್ಗೆ ಅರಿವು ಇಲ್ಲ. ತಮ್ಮ ಸಂಕಷ್ಟ ಪರಿಸ್ಥಿತಿಯಲ್ಲಿ ಕಾನೂನು ನಮಗೆ ರಕ್ಷಣೆ ನೀಡುತ್ತದೆ ಹಾಗೂ ನಮ್ಮ ಪರವಾಗಿದೆ ಎಂಬ ಮಾಹಿತಿ ಇಲ್ಲ ಎಂದರು.

ವಿಶ್ವದಲ್ಲಿ ಕೊರೊನಾ ಬಂದ ಸಂದರ್ಭದಲ್ಲಿ ಭಾರತ 20 ವರ್ಷ ಹಿಂದಕ್ಕೆ ಹೋಗುತ್ತದೆ. ಆರ್ಥಿಕ ಸಂಕಷ್ಟದ ಪರಿಸ್ಥಿತಿ ಎದುರಿಸುತ್ತದೆ ಎಂದು ವಿದೇಶಿಗರು ಭವಿಷ್ಯ ನುಡಿದಿದ್ದರು. ಆದರೆ ಕೊರೊನಾ ನಂತರದ ನಾಲ್ಕೈದು ತಿಂಗಳಲ್ಲಿ ಭಾರತ ಸಹಜ ಸ್ಥಿತಿಗೆ ಮರಳಿತು. ಇದು ನಮ್ಮ ದೇಶದ ಶಕ್ತಿ ಎಂದು ಹೇಳಿದರು.

ಉಚಿತ ಕಾನೂನು ಸೇವಾ ಸೌಲಭ್ಯ ನೀಡುವ ಘಟಕ ಮೈಸೂರಿನಲ್ಲಿ ಇದ್ದು, ಜನರು ಇದರ ಉಪಯೋಗ ಪಡೆದುಕೊಳ್ಳಬೇಕು ಎಂದು ಸಲಹೆ ನೀಡಿದರು.

ಮೈಸೂರು ಚೇಂಬರ್ಸ್ ಆಫ್ ಕಾಮರ್ಸ್ ಅಂಡ್ ಇಂಡಸ್ಟ್ರಿ ಅಧ್ಯಕ್ಷ ಕೆ.ಬಿ.ಲಿಂಗರಾಜು, ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಕೊಡಗು ಜಿಲ್ಲಾ ಗ್ರಾಹಕರ ವ್ಯಾಜ್ಯಗಳ ಪರಿಹಾರ ಆಯೋಗದ ಅಧ್ಯಕ್ಷೆ ಸಿ.ರೇಣುಕಾಂಬ, ರಾಜ್ಯ ಮಕ್ಕಳ ಸಾಹಿತ್ಯ ಪರಿಷತ್ ಅಧ್ಯಕ್ಷ ಎಂ.ಸಿ.ಚೋಂದಮ್ಮ ಪೊನ್ನಪ್ಪ, ಸಮಾಜ ಸೇವಕರಾದ ಸತ್ಯ ಪ್ರಕಾಶ್, ಹೆಚ್.ಟಿ. ಪಾರ್ವತಿ ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಪ್ರತಿ ಮನೆಯಲ್ಲಿ ಭಗವದ್ಗೀತೆಯೊಂದಿಗೆ ಯೋಗ ಶಾಸ್ತ್ರದ ಪುಸ್ತಕ ಇರಲೇಬೇಕು

ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿ ರಜತ ಮಹೋತ್ಸವದಲ್ಲಿ ತ್ರಿನೇತ್ರ ಮಹಾಂತ ಸ್ವಾಮೀಜಿ ಕರೆ



ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ದಿನದರ್ಶಿಕೆ ಬಿಡುಗಡೆಗೊಳಿಸಲಾಯಿತು.

ಮೈಸೂರು, ಡಿ.21(ಜಿಎ)–ಪೋಷಕರು ತಮ್ಮ ಮಕ್ಕಳನ್ನು ಕೇವಲ ಅಂಕಕ್ಕೆ ಸೀಮಿತ ಗೊಳಿಸಿದ್ದಾರೆ. ಇಂತಹ ಒತ್ತಡ ನಿವಾರಣೆಗೆ ಯೋಗ ಅವಶ್ಯ ಎಂದು ಶ್ರೀರಂಗಪಟ್ಟಣದ ಚಂದ್ರವನ ಆಶ್ರಮದ ತ್ರಿನೇತ್ರ ಮಹಾಂತ ಸ್ವಾಮೀಜಿ ತಿಳಿಸಿದರು.

ಮೈಸೂರಿನ ಶಾರದಾವಿಲಾಸ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ಶ್ರೀ ಪತಂಜಲಿ ಯೋಗ ಶಿಕ್ಷಣ ಸಮಿತಿಯ ರಜತ ಮಹೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಪ್ರತಿಯೊಬ್ಬ ಮನುಷ್ಯನಿಗೆ ಅರಿವು ನೀಡುವ, ದೇಹ ಬಲಿಷ್ಠಗೊಳಿಸುವ, ವ್ಯಕ್ತಿತ್ವ ಬೆಳೆಸುವ, ಬದುಕಿನಲ್ಲಿ ಸಾಧನೆ ಮಾಡಲು ಪೂರಕವಾಗಿರುವ ಜಗತ್ತಿನೊಳಗಿನ ಏಕೈಕ ಶಾಸ್ತ್ರ ಯೋಗ. ಪ್ರತಿ ಮನೆಯಲ್ಲಿಯೂ ಭಗವದ್ಗೀತೆ ಜೊತೆಗೆ ಯೋಗ ಶಾಸ್ತ್ರದ ಪುಸ್ತಕ ಇರಬೇಕು ಎಂದರು.

ಯೋಗಕ್ಕೆ ತನ್ನದೆಯಾದ ಇತಿಹಾಸ, ಆಯಾಮ, ಬದ್ಧತೆ ಇದೆ. ಯೋಗದ ಮೂಲಕ ಯಾವುದೇ ರೋಗ ಗುಣಪಡಿಸುವ ಶಕ್ತಿಯಿದ್ದು, ಎಲ್ಲ ಭಯ ಹೋಗಲಾಡಿಸುತ್ತದೆ. ಆಸನ ಅಹಂಕಾರದಿಂದಲ್ಲ ಆಯಾಸದಿಂದ ಮಾಡಬೇಕು. ಇದು ಆನಂದ ಒದಗಿಸುತ್ತದೆ. ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಯೋಗ ಶಾಸ್ತ್ರದ ವಿಷಯವನ್ನು ಪಠ್ಯದಲ್ಲಿ ಸೇರಿಸಬೇಕು. ಇದಕ್ಕಾಗಿ ಎಲ್ಲರೂ ಒಗ್ಗೂಡಿ ಪ್ರಧಾನಿ ನರೇಂದ್ರ ಮೋದಿಯವರಿಗೆ ಮನವಿ ಸಲ್ಲಿಸೋಣ ಎಂದು ಕರೆ ನೀಡಿದರು.

ಯೋಗವನ್ನು ಬದುಕಿನ ಬುನಾದಿಯಾಗಿ ತೆಗೆದುಕೊಳ್ಳಬೇಕು. ಇಂದು ಹೇಗೆ ಬೇಕು ಹಾಗೇ ಯೋಗ ಮಾಡಿ ಪ್ರಚಾರ ಮಾಡುತ್ತಿದ್ದಾರೆ. ಇದು ವ್ಯಾಪಾರೀಕರಣವಲ್ಲ. ಇತ್ತೀಚಿನ ದಿನಗಳಲ್ಲಿ ಮಕ್ಕಳು ಒತ್ತಡಕ್ಕೆ ಒಳಗಾಗಿ ಆತ್ಮಹತ್ಯೆ ಮಾಡಿಕೊಳ್ಳುತ್ತಿದ್ದಾರೆ. ಪೋಷಕರು ಮಕ್ಕಳನ್ನು ವಿದ್ಯಾವಂತರನ್ನಾಗಿ ಮಾಡುತ್ತಿದ್ದಾರೆ ಹೊರತು, ಸಂಸ್ಕಾರ, ಸಂಸ್ಕೃತಿ ಕಲಿಸುತ್ತಿಲ್ಲ. ಅವರಿಗೆ ಯೋಗ ಕಲಿಸಬೇಕು. ಯೋಗದಿಂದ ಸಂಸ್ಕಾರ, ಸಂಸ್ಕೃತಿ ಲಭಿಸುತ್ತಿದೆ. ಈ ಕುರಿತು ಪ್ರತಿಯೊಬ್ಬರು ಆತ್ಮಾವಲೋಕನ ಮಾಡಿಕೊಳ್ಳಬೇಕು ಎಂದು ಸಲಹೆ ನೀಡಿದರು.

ಕರ್ನಾಟಕ ಸಂಸ್ಕೃತ ವಿಶ್ವವಿದ್ಯಾಲಯ ಉಪ ಕುಲಪತಿ ಎಸ್.ಅಹಲ್ಯ ಮಾತನಾಡಿ, ಬದುಕಿನ ಉನ್ನತ ಶಿಕ್ಷಣವೇ ಯೋಗ. ಎಲ್ಲಾ ಕಾಲಕ್ಕೂ ಸಲ್ಲುವ ಜ್ಞಾನವಾಗಿದೆ. ಮನಸ್ಸಿಗೆ ನೆಮ್ಮದಿ ನೀಡುವ ಮೂಲಕ ಆರೋಗ್ಯ ಸುಧಾರಿಸುತ್ತದೆ. ಹೀಗಾಗಿ ಬದುಕಿಗೆ ಯೋಗ ಮತ್ತು ಧ್ಯಾನ ಎರಡೂ ಅವಶ್ಯ ಎಂದರು.

ಭಾರತೀ ಯೋಗಧಾಮದ ಸಂಸ್ಥಾಪಕ ಕೆ.ಎಲ್.ಶಂಕರನಾರಾಯಣ ಜೋಯಿಸ್ ಮಾತನಾಡಿ, ಯೋಗದ ಮೌಲಿಕ ಚಿಂತನೆ ಎಲ್ಲರೂ ಅರಿಯಬೇಕು. ಭಾರತೀಯ ಸಂಸ್ಕೃತಿಯ ಉಸಿರು ಯೋಗ. ಯೋಗವನ್ನು ಅದೇ ರೂಪದಲ್ಲಿ ಉಪಾಸನೆ ಮಾಡಬೇಕು. ಪ್ರತಿ ಹೆಜ್ಜೆಯಲ್ಲೂ ಸ್ಥೂಲವಾಗಿ ಅಳವಡಿಸಿಕೊಳ್ಳಬೇಕು ಎಂದರು.

ಕಾರ್ಯಕ್ರಮದಲ್ಲಿ ದಿನದರ್ಶಿಕೆ ಬಿಡುಗಡೆಗೊಳಿಸಲಾಯಿತು. ಈ ಸಂದರ್ಭದಲ್ಲಿ ಯೋಗ ನರಸಿಂಹಸ್ವಾಮಿ ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಸಮಿತಿ ಕೋಶಾಧ್ಯಕ್ಷ ಎನ್.ಎಸ್.ಮಹೇಶ್, ಸಮಿತಿಯ ಪ್ರಾಂತ ವಿಸ್ತಾರ ಪ್ರಮುಖರಾದ ಎಂ.ರೆಡ್ಡಯ್ಯ ರಾಜು, ಸಮಿತಿಯ ಮಾರ್ಗದರ್ಶಕ ಕೆ.ಎಸ್.ಗೋಪಾಲಕೃಷ್ಣ, ಮುಖಂಡರಾದ ಸಿದ್ದಲಿಂಗಯ್ಯ, ಸತ್ಯನಾರಾಯಣ ಇತರರು ಉಪಸ್ಥಿತರಿದ್ದರು.

ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ ನೂರರ ಸಂಭ್ರಮ

ಇಂದು ಮೈಸೂರಿಗೆ 'ಸಮತಾ ರಾಜ್ಯದ ಕನಸುಗಳೊಂದಿಗೆ ಶ್ರಮ ಶಕ್ತಿಯ ಸಂಘರ್ಷದ ಶತಮಾನದ ಪಯಣ' ಜಾಥಾ

ಮೈಸೂರು, ಡಿ.21(ಜಿಎ)–ಭಾರತ ಕಮ್ಯುನಿಸ್ಟ್ ಪಕ್ಷಕ್ಕೆ ನೂರು ವರ್ಷ ತುಂಬಿದ ಹಿನ್ನೆಲೆಯಲ್ಲಿ ಹಾಗೂ ಸರ್ಕಾರದ ಕಾರ್ಮಿಕ ವಿರೋಧಿ ಧೋರಣೆ ಖಂಡಿಸಿ ಹಮ್ಮಿಕೊಂಡಿರುವ 'ಸಮತಾ ರಾಜ್ಯದ ಕನಸುಗಳೊಂದಿಗೆ ಶ್ರಮ ಶಕ್ತಿಯ ಸಂಘರ್ಷದ ಶತಮಾನದ ಪಯಣ' ಶೀರ್ಷಿಕೆಯ ಜಾಥಾ ಡಿ.22ರಂದು ಮೈಸೂರಿಗೆ ಆಗಮಿಸಲಿದೆ ಎಂದು ಸಹ ಕಾರ್ಯದರ್ಶಿ ಕೆ.ಜಿ. ಸೋಮಶೇಖರ್ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಜಾಥಾಗೆ ಕೋಲಾರದ ಕೆಜಿಎಫ್ ನಗರದಲ್ಲಿ ಚಾಲನೆ ದೊರೆತಿದೆ. ಜಾಥಾದಲ್ಲಿ ಸುಮಾರು 100 ಬೈಕ್ ಸವಾರರು ಪಾಲ್ಗೊಂಡಿದ್ದಾರೆ. ಅಂದು ಮಧ್ಯಾಹ್ನ 3ಗಂಟೆಗೆ ಹಿನಕಲ್ ಫ್ಲೈಓವರ್ ಬಳಿ ಜಾಥಾವನ್ನು ಬರ ಮಾಡಿಕೊಳ್ಳಲಾಗುವುದು. ನಂತರ ಜೆ.ಕೆ.ಮೈದಾನ ತಲುಪಲಿದ್ದಾರೆ. ಅಲ್ಲಿಂದ ಕಾಲ್ನಡಿಗೆ ಮೂಲಕ ಗಾಂಧಿ ವೃತ್ತ ತಲುಪಿ ಅಲ್ಲಿ ಸಂಜೆ 4ಗಂಟೆಯಿಂದ 6 ರವರೆಗೆ ಬಹಿರಂಗ ಸಭೆ ನಡೆಯಲಿದೆ ಎಂದರು.

ಬ್ರಿಟಿಷ್ ಸಾಮ್ರಾಜ್ಯ ಶಾಹಿಗಳ ವಿರುದ್ಧ ಮಾತ್ರವಲ್ಲ, ಸ್ವತಂತ್ರ ಭಾರತದಲ್ಲಿಯೂ ಬಂಡವಾಳ ಶಾಹಿ, ಕಾರ್ಪೊರೇಟ್– ಕೋಮುವಾದಿ ಶಕ್ತಿಗಳ ವಿರುದ್ಧ ಜನಸಾಮಾನ್ಯರ ಧ್ವನಿಯಾಗಿ ಸಿಪಿಐ ಹೋರಾಟ ನಡೆಸುತ್ತಿದೆ. ಈಗ ನೂರು ವರ್ಷ ತುಂಬಿದ್ದು, ಅದರ ಶತಮಾನೋತ್ಸವ ಕಾರ್ಯಕ್ರಮ ಅಂಗವಾಗಿ ಈ ಜಾಥಾ ಹಮ್ಮಿಕೊಳ್ಳಲಾಗಿದೆ ಎಂದು ವಿವರಿಸಿದರು.

ಸುದ್ದಿಗೋಷ್ಠಿಯಲ್ಲಿ ಹೆಚ್.ಬಿ.ರಾಮಕೃಷ್ಣ, ಜೆ.ಶಿವಣ್ಣ, ಬಸವರಾಜು, ಶಿವಮಾದು ಉಪಸ್ಥಿತರಿದ್ದರು.

ನಾಳೆ ತಾಲೂಕು ಮಟ್ಟದ ಪತ್ರಿಭಾ ಕಾರಂಜಿ, ಕಲೋತ್ಸವ

ಮೈಸೂರು,ಡಿ.21– ಕ್ಷೇತ್ರ ಶಿಕ್ಷಣಾಧಿಕಾರಿಗಳು ಮತ್ತು ಕ್ಷೇತ್ರ ಸಂಪನ್ಮೂಲ ಸಮನ್ವಯಾಧಿಕಾರಿಗಳ ಕಛೇರಿ ಉತ್ತರ ವಲಯ, ವತಿಯಿಂದ ಡಿ.23ರಂದು ಬೆಳಗ್ಗೆ 9 ಗಂಟೆಗೆ ಸೇಂಟ್ ಮಥಾಯಿಸ್ ಶಾಲೆ (ಸೆಂಟ್ ಜೋಸೆಫ್ ಸೆಂಟ್ರಲ್ ಶಾಲೆ), ಬನ್ನಿಮಂಟಪ, ಮೈಸೂರು ಇಲ್ಲಿ ತಾಲೂಕು ಮಟ್ಟದ ಪ್ರತಿಭಾ ಕಾರಂಜಿ ಹಾಗೂ ಕಲೋತ್ಸವ ಕಾರ್ಯಕ್ರಮವನ್ನು ಆಯೋಜಿಸಲಾಗಿದೆ. 1ರಿಂದ 4 ವಿಭಾಗದ 110 ಮಕ್ಕಳು ವೈಯಕ್ತಿಕ ಸ್ಪರ್ಧೆ, 5ರಿಂದ 7 ವಿಭಾಗ 144 ಮಕ್ಕಳು ವೈಯಕ್ತಿಕ ಸ್ಪರ್ಧೆ, 8ರಿಂದ 12 ವಿಭಾಗ 140 ಮಕ್ಕಳು ವೈಯಕ್ತಿಕ ಸ್ಪರ್ಧೆ, 8ರಿಂದ 12 ವಿಭಾಗ 130 ಮಕ್ಕಳು ಸಾಮೂಹಿಕ ಸ್ಪರ್ಧೆಯನ್ನು ಏರ್ಪಡಿಸಲಾಗಿದೆ ಎಂದು ಮೈಸೂರು ಉತ್ತರ ವಲಯದ ಕ್ಷೇತ್ರ ಶಿಕ್ಷಣಾಧಿಕಾರಿ ತಿಳಿಸಿದ್ದಾರೆ.

ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್‌ನಲ್ಲಿ 'ಬ್ರೈಡ್ಸ್ ಆಫ್ ಇಂಡಿಯಾ' ಅಭಿಯಾನದ 15ನೇ ಆವೃತ್ತಿ ಅನಾವರಣ




ಮೈಸೂರು ಮಲಬಾರ್ ಗೋಲ್ಡ್ ಅಂಡ್ ಡೈಮಂಡ್ಸ್ ತನ್ನ ಪ್ರಮುಖ ಬ್ರೈಡ್ಸ್ ಆಫ್ ಇಂಡಿಯಾ ಅಭಿಯಾನದ 15ನೇ ಆವೃತ್ತಿಯನ್ನು ಅನಾವರಣಗೊಳಿಸಿದೆ. ಕಾರ್ಯಕ್ರಮಕ್ಕೆ ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಗ್ರಾಹಕರು ಹಾಗೂ ರೂಪದರ್ಶಿಗಳಾದ ಮಿಸ್ ನೇಹಾ, ಮಿಸ್ ರೇಶ್ಮಾ ತಾಜ್, ಮಿಸ್ ಇಬ್ಬನಿ, ಮಿಸ್ ಇಕ್ರಾ ಖಾನ್, ಮಿಸ್ ಪೂಜಾ ಗೌಡ, ಮಿಸ್ ಶೀರಜ್, ಅಸಿಸ್ಟೆಂಟ್ ಸ್ಟೋರ್ ಹೆಡ್ ಮಹಮ್ಮದ್ ಅನ್ಸಾಜ್, ಡಿಪ್ಯೂಟಿ ಸ್ಟೋರ್ ಹೆಡ್ ದಯಾನಂದ, ಮ್ಯಾನೇಜ್ಮೆಂಟ್ ಟೀಮ್ ಉಪಸ್ಥಿತರಿದ್ದರು.

ಕೌಟುಂಬಿಕ ಕಥಾ ಸ್ಪರ್ಧೆಗೆ ಆಹ್ವಾನ

ಮೈಸೂರು: ಹಿರಿಯ ಲೇಖಕಿ ವಾಣಿ ಸ್ಮರಣೆ ಅಂಗವಾಗಿ ಲೇಖಿಕಾ ಸಾಹಿತ್ಯ ವೇದಿಕೆಯು ವಾಣಿ ಕೌಟುಂಬಿಕ ಕಥಾ ಸ್ಪರ್ಧೆ ಏರ್ಪಡಿಸಿದೆ. ಕೌಟುಂಬಿಕ ಕಥಾ ವಸ್ತುವುಳ್ಳ, ಎಂಟರಿಂದ ಹತ್ತು ಪುಟಗಳ ಮಿತಿಯಲ್ಲಿ ಕಥೆಗಳನ್ನು ಡಿ.31ರೊಳಗೆ Deepa.shyam099 @gmail.com ಇಲ್ಲಿಗೆ ಕಳಿಸಬಹುದು. ಹೆಚ್ಚಿನ ಮಾಹಿತಿಗೆ ಶೈಲಜಾ ಸುರೇಶ್ ಅವರನ್ನು 9916378955 ಮೂಲಕ ಸಂಪರ್ಕಿಸಬಹುದು.

2026ರ ಕ್ಯಾಲೆಂಡರ್ ಬಿಡುಗಡೆ



ಮೈಸೂರಿನ ಅಗಸ್ತ್ಯ ಕ್ರೆಡಿಟ್ ಕೋ ಆಪರೇಟಿವ್ ಸೊಸೈಟಿಯ 2026ರ ಕ್ಯಾಲೆಂಡರ್ ಅನ್ನು ಸಹಕಾರ ಸಂಘಗಳ ಉಪನಿಬಂಧಕರ ಕಚೇರಿಯಲ್ಲಿ ಹಿರಿಯ ನಿರೀಕ್ಷಕ ರಾಜು ಬಿಡುಗಡೆ ಮಾಡಿದರು. ಸಂಘದ ಅಧ್ಯಕ್ಷ ಎಂ.ಡಿ.ಗೋಪಿನಾಥ್, ಉಪಾಧ್ಯಕ್ಷೆ ಎಂ.ಎನ್. ಸೌಮ್ಯ, ಖಜಾಂಚಿ ಕೆ.ನಾಗರಾಜ, ನಿರ್ದೇಶಕ ಮಂಡಲಿ ಸದಸ್ಯರಾದ ಸಿ.ವಿ.ಪಾರ್ಥಸಾರಥಿ, ಹೆಚ್.ಎಸ್.ಪ್ರಶಾಂತ್ ತಾತಾಚಾರ್ (ಕಣ್ಣ), ಹೆಚ್.ಪಿ.ಚೇತನ್, ಎನ್.ಫಣಿರಾಜ್, ವಿಕ್ರಂ ಅಯ್ಯಂಗಾರ್, ಎನ್.ನಾಗಶ್ರೀ, ಕೆ.ಎನ್.ಅರುಣ್, ಶಿವರುದ್ರಪ್ಪ, ಎಸ್.ರಾಜಮ್ಮ, ಪ್ರಭಾರ ಕಾರ್ಯದರ್ಶಿ ಎನ್.ವೀಣಾ ಹಾಗೂ ಸಿಬ್ಬಂದಿ ವರ್ಗ ಹಾಜರಿದ್ದರು.


ಕನ್ನಡ ಸೇನೆಯಿಂದ ಇಂದು ಕನ್ನಡ ಜಾಗೃತಿ ಸಮಾವೇಶ; ರಾಜ್ಯೋತ್ಸವ ಆಚರಣೆ

ಮೈಸೂರು, ಡಿ.21(ಜಿಎ)–ಕನ್ನಡ ಸೇನೆ ಕರ್ನಾಟಕ ಸಂಘಟನೆಯಿಂದ ಕಲಾಮಂದಿರದ ಆವರಣದಲ್ಲಿರುವ ಕಿರುರಂಗಮಂದಿರದಲ್ಲಿ ಡಿ.22ರಂದು ಬೆಳಿಗ್ಗೆ 9ಗಂಟೆಗೆ ಕನ್ನಡ ಜಾಗೃತಿ ಸಮಾವೇಶ, ಕನ್ನಡ ರಾಜ್ಯೋತ್ಸವ ಹಾಗೂ ಪ್ರಶಸ್ತಿ ಪ್ರದಾನ ಸಮಾರಂಭ ಹಮ್ಮಿಕೊಳ್ಳಲಾಗಿದೆ ಎಂದು ಜಿಲ್ಲಾಧ್ಯಕ್ಷೆ ಎಂ.ಯು.ಶೈಲಜಾ ತಿಳಿಸಿದರು.

ನಗರದಲ್ಲಿ ಶುಕ್ರವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಬೆಳಿಗ್ಗೆ 9 ಗಂಟೆಗೆ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪನವರ ಪುತ್ಥಳಿಗೆ ಮಾಲಾರ್ಪಣೆ ಮಾಡಲಾಗುವುದು. ನಂತರ ಜಾನಪದ ಕಲಾತಂಡಗಳೊಂದಿಗೆ ಮೆರವಣಿಗೆ ನಡೆಸಲಾಗುವುದು. 11ಗಂಟೆಗೆ ವೇದಿಕೆ ಕಾರ್ಯಕ್ರಮ ನಡೆಯಲಿದ್ದು, ಶಾಸಕರಾದ ಜಿ.ಟಿ.ದೇವೇಗೌಡ, ಕೆ.ಹರೀಶ್ ಗೌಡ ಹಾಗೂ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಕಾರ್ಯಕ್ರಮ ಉದ್ಘಾಟಿಸುವರು. ಅಧ್ಯಕ್ಷತೆಯನ್ನು ಸಂಘಟನೆ ರಾಜ್ಯಾಧ್ಯಕ್ಷ ಕೆ.ಆರ್.ಕುಮಾರ್ ವಹಿಸುವರು ಎಂದರು.

ಸಮಾರಂಭದಲ್ಲಿ ವಿವಿಧ ಕ್ಷೇತ್ರದ ಸಾಧಕರಿಗೆ 'ಕನ್ನಡ ಮಾಣಿಕ್ಯ' ಪ್ರಶಸ್ತಿ ಪ್ರದಾನ ಮಾಡಲಾಗುವುದು. ಆಟೋ ಚಾಲಕರಿಗೆ ಸನ್ಮಾನಿಸಲಾಗುವುದು. ನೂತನ ವರ್ಷದ ಕ್ಯಾಲೆಂಡರ್ ಬಿಡುಗಡೆಗೊಳಿಸಲಾಗುವುದು. ಧನ್ಯಾದೇವಿ ಅವರಿಂದ ಭರತನಾಟ್ಯ ಕಾರ್ಯಕ್ರಮ ಇರಲಿದೆ ಎಂದರು. ಸುದ್ದಿಗೋಷ್ಠಿಯಲ್ಲಿ ಕಾನೂನು ಸಲಹೆಗಾರ ಹರೀಶ್‌ಗೌಡ, ಗೌರವ ಅಧ್ಯಕ್ಷೆ ಕಮಲಾ ನಟರಾಜ್, ಜಿಲ್ಲಾ ಉಪಾಧ್ಯಕ್ಷರಾದ ಎಸ್.ಶಶಿಕಲಾ, ಎಂ.ಮಲ್ಲೇಶ್, ಸಂಘಟನೆಯ ಮೈತ್ರಿ, ಸಿದ್ದರಾಜು ಉಪಸ್ಥಿತರಿದ್ದರು.

ವಾಲಿಬಾಲ್ ಪಂದ್ಯಾವಳಿಯಲ್ಲಿ ಪ್ರಥಮ ಸ್ಥಾನ



ಎಫ್‌ಕೆ ಇರಾನಿ ವಾಲಿಬಾಲ್ ಪಂದ್ಯಾವಳಿಯಲ್ಲಿ ಮೈಸೂರು ಸರಸ್ವತಿಪುರಂನ ರೋಟರಿ ಪಶ್ಚಿಮ ಶಾಲೆ ಕ್ರೀಡಾಪಟುಗಳು ಭಾಗವಹಿಸಿ ಪ್ರಥಮ ಸ್ಥಾನ ಪಡೆದಿದ್ದಾರೆ. ವಿಜೇತ ಕ್ರೀಡಾಪುಟಗಳೊಂದಿಗೆ ಪ್ರಾಂಶುಪಾಲರಾದ ಪೂರ್ಣಿಮಾ, ಉಪಪ್ರಾಂಶುಪಾಲರಾದ ಸುಷ್ಮ ಕಿರಣ್, ದೈಹಿಕ ಶಿಕ್ಷಕ ನಾಗರಾಜ್ ಇದ್ದಾರೆ.

ಮೈಸೂರು ಹಾಗೂ ಸುತ್ತಮುತ್ತ ಇಂದು...



ಇಂದಿನ ಪಂಚಾಂಗ

22.12.2025 ಸೋಮವಾರ, ಮಳೆ ನಕ್ಷತ್ರ: ಮೂಲ, 16.12.2025ರಿಂದ 28.12.2025 ವಿಶ್ವಾವಸು ನಾಮ ಸಂವತ್ಸರ, ದಕ್ಷಿಣಾಯನ, ಹೇಮಂತ ಋತು, ಪುಷ್ಯ ಮಾಸ, ಶುಕ್ಲ ಪಕ್ಷ, ತಿಥಿ: ಬಿದಿಗೆ, ನಕ್ಷತ್ರ: ಉಷಾ, ರಾಹುಕಾಲ: ಬೆಳಗ್ಗೆ 7.30ರಿಂದ 9ರವರೆಗೆ

- **ಸದ್ವಿದ್ಯಾ ಶಿಕ್ಷಣ ಸಂಸ್ಥೆಗಳು:** ಸದ್ವಿದ್ಯಾ ಹಿರಿಯ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆ ಮತ್ತು ಸದ್ವಿದ್ಯಾ ಪ್ರೌಢಶಾಲೆ 52ನೇ ವಾರ್ಷಿಕೋತ್ಸವ ಅಂಗವಾಗಿ ಶ್ರೀ ಕೃಷ್ಣಲೀಲಾಮೃತ ಕಾರ್ಯಕ್ರಮ, ಅಧ್ಯಕ್ಷತೆ: ಶಿಕ್ಷಣ ಸಂಸ್ಥೆಯ ಗೌರವ ಅಧ್ಯಕ್ಷ ಪ್ರೊ.ಎಂ.ಎಸ್.ಕೆ.ನರಹರಿ ಬಾಬು, ಮುಖ್ಯ ಅತಿಥಿಗಳು: ಕೃತಕ ಬುದ್ಧಿ ಮತ್ತೆ ಮತ್ತು ರೊಬೋಟಿಕ್ಸ್ ವಿಭಾಗದ ಹಿರಿಯ ವಿಜ್ಞಾನಿ ಡಾ.ಸಂಜಯ ಎಸ್., ಶಿಕ್ಷಣ ಸಂಸ್ಥೆ ಗೌರವ ಕಾರ್ಯದರ್ಶಿ ಎಂ.ಡಿ.ಗೋಪಿನಾಥ್, ಸ್ಥಳ: ಕರ್ನಾಟಕ ಕಲಾಮಂದಿರ, ಬೆಳಗ್ಗೆ 9.30ರಿಂದ.
- **ವಿಶ್ವಮಾನವ ಮೈಸೂರು ವಿಶ್ವವಿದ್ಯಾನಿಲಯ ನೌಕರರ ವೇದಿಕೆ ಹಾಗೂ ನವ ವಿಶ್ವಮಾನವ ಟ್ರಸ್ಟ್ :** ಬೀಳ್ಕೊಡುಗೆ ಮತ್ತು ಅಭಿನಂದನಾ ಸಮಾರಂಭ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ. ಲೋಕನಾಥ್, ಬಹುಮಾನ ವಿತರಣೆ: ಮೈಸೂರು ವಿಭಾಗದ ಪ್ರಾದೇಶಿಕ ಆಯುಕ್ತ ನಿತೇಶ್ ಪಾಟೀಲ್, ಉಪ ಪೊಲೀಸ್ ಆಯುಕ್ತೆ (ಕಾನೂನು ಮತ್ತು ಸುವ್ಯವಸ್ಥೆ) ಆರ್.ಎನ್.ಬಿಂದುಮಣಿ, ಮುಖ್ಯ ಅತಿಥಿಗಳು: ಜಿಪಂ ಸಿಇಓ ಯುಕೇಶ್‌ಕುಮಾರ್, ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ಮೈಸೂರು ಲಲಿತಾ ಕಲಾ ಕಾಲೇಜು ಪ್ರಾಂಶುಪಾಲರಾದ ಪ್ರೊ.ಅನಿಟಾ ವಿಮಲ ಬ್ರ್ಯಾಗ್ಸ್, ಸಿಂಡಿಕೇಟ್ ಸದಸ್ಯರಾದ ಮಹದೇಶು, ಕ್ಯಾತನಹಳ್ಳಿ ನಾಗರಾಜು, ವಿಶೇಷ ಆಹ್ವಾನಿತರು: ಮೈಸೂರು ವಿವಿ ಪ್ರಾಚ್ಯ ವಿದ್ಯಾ ಸಂಶೋಧಾಲಯದ ವಿಶ್ರಾಂತ ನಿರ್ದೇಶಕ ಪ್ರೊ.ಶಿವರಾಜಪ್ಪ, ಇಎಂಆರ್‌ಸಿ ವಿಭಾಗದ ಪ್ರಾಧ್ಯಾಪಕಿ ಡಾ.ಸಪ್ನಾ ಎಂ.ಎಸ್., ಸ್ಥಳ: ಇಎಂಆರ್‌ಸಿ ಸಭಾಂಗಣ, ಮಾನಸಗಂಗೋತ್ರಿ, ಬೆಳಗ್ಗೆ 10.30ಕ್ಕೆ.
- **ಪರಂಪರೆ :** ಶ್ರೀ ಮದ್ಭಾಗವತ ಪ್ರವಚನ, ಡಾ.ವೀಣಾ ಬನ್ನಂಜೆ ಅವರಿಂದ ಭಾಗವತ ಉಪನ್ಯಾಸ, ಸ್ಥಳ: ಮೈಸೂರು ಕೆ.ವಾಸುದೇವಚಾರ್ಯ ಭವನ, (ನಾದಬ್ರಹ್ಮ) ಸಂಜೆ 6ರಿಂದ.
- **ಮೈಸೂರು ವಿಶ್ವವಿದ್ಯಾನಿಲಯ, ಪ್ರಾಚ್ಯ ವಿದ್ಯಾ ಸಂಶೋಧನಾಲಯ (ಓಆರ್‌ಐ) :** ಗುರುವಂದನಾ, ಗ್ರಂಥ ಲೋಕಾರ್ಪಣೆ, ಮುಖ್ಯ ಅತಿಥಿ: ದಕ್ಷಿಣಾಮ್ನಾಯ ಶೃಂಗೇರಿ ಶಾರದಾ ಪೀಠಾಧೀಶ್ವರರಾದ ಜಗದ್ಗುರು ಶಂಕರಾಚಾರ್ಯ ಶ್ರೀ ಶ್ರೀ ವಿಧುಶೇಖರ ಭಾರತೀ ಸ್ವಾಮೀಜಿ, ಅಧ್ಯಕ್ಷತೆ: ಮೈಸೂರು ವಿವಿ ಕುಲಪತಿ ಪ್ರೊ.ಎನ್.ಕೆ.ಲೋಕನಾಥ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್, ಮೈಸೂರು ವಿವಿ ಕುಲಸಚಿವರಾದ ಶ್ರೀಮತಿ ಸವಿತಾ ಎಂ.ಕೆ., ಸ್ಥಳ: ಪ್ರಾಚ್ಯ ವಿದ್ಯಾ ಸಂಶೋಧನಾಲಯ, ಮಾನಸಗಂಗೋತ್ರಿ, ಬೆಳಗ್ಗೆ 9.30ಕ್ಕೆ.
- **ಮೈಸೂರು ವಿಶ್ವವಿದ್ಯಾನಿಲಯದ ಮಾನವಶಾಸ್ತ್ರ ಅಧ್ಯಯನ ವಿಭಾಗ:** ನ್ಯಾಷನಲ್ ಸೆಮಿನಾರ್ ಉದ್ಘಾಟನಾ ಸಮಾರಂಭ, ಸ್ವಾಗತ: ವಿಭಾಗದ ಮುಖ್ಯಸ್ಥ ಪ್ರೊ. ಎಸ್.ಬಸವರಾಜಪ್ಪ, ಉದ್ಘಾಟನೆ: ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ, ಮುಖ್ಯ ಅತಿಥಿ: ಚಾಮರಾಜನಗರ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ. ಎಂ.ಆರ್.ಗಂಗಾಧರ್, ಸ್ಥಳ: ಮಾನವಶಾಸ್ತ್ರ ಅಧ್ಯಯನ ವಿಭಾಗದ ಸೆಮಿನಾರ್ ಹಾಲ್, ಬೆಳಗ್ಗೆ 10ಕ್ಕೆ.
- **ಶಬರಿಮಲ ಶ್ರೀ ಅಯ್ಯಪ್ಪ ಪೂಜಾ ಸಮಿತಿ :** 65ನೇ ವಾರ್ಷಿಕ ಪೂಜಾ ಮಹೋತ್ಸವ, 26ನೇ ವಾರ್ಷಿಕ ಧ್ವಜಾರೋಹಣ ಮಹೋತ್ಸವ, ಸಂಜೆ 6 ರಿಂದ ಧ್ವಜಾರೋಹಣ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಾಲಯ, ಚಾಮುಂಡಿಬೆಟ್ಟದ ಪಾದ.
- **ಶ್ರೀ ವೇಣುಗೋಪಾಲಸ್ವಾಮಿ ದೇವಸ್ಥಾನ :** ವಿದುಷಿ ಡಾ. ಕೆ.ಎಲ್. ಪ್ರಸನ್ನಾಕ್ಷಿ ಅವರಿಂದ ತಿರುಪ್ಪಾವೈ ಪ್ರವಚನ ಕಾರ್ಯಕ್ರಮ, ಸ್ಥಳ: ಶ್ರೀವೇಣುಗೋಪಾಲಸ್ವಾಮಿ ದೇವಸ್ಥಾನ, ತ್ಯಾಗರಾಜ ರಸ್ತೆ, ಸಂಜೆ 6.30ರಿಂದ.
- **ಪಾಳ್ಯಂ ಶ್ರೀ ಶಾಸ್ತಾ ಪೀಠಂ, ಅಭಯದಾಯಕ ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನಂ :** ಧನುರ್ಮಾಸದ ವಿಶೇಷ ಪೂಜಾ, ಲಕ್ಷಾರ್ಚನಾ, ವಾರ್ಷಿಕ ಕುಂಭಾಭಿಷೇಕ ಪೂಜಾ ಮಹೋತ್ಸವ, ಮಹತೋಭಾರ ಶ್ರೀ ಧರ್ಮಶಾಸ್ತಾ ಸ್ವಾಮಿಯವರಿಗೆ, ಮಹಾಭಿಷೇಕ, ಅಲಂಕಾರ ಸೇವೆ, ನಾಮಾರ್ಚನೆ, ಮಹಾನಿವೇದನೆ, ಮಂಗಳಾರತಿ, ತೀರ್ಥಪ್ರಸಾದ ವಿನಿಯೋಗ, ಸ್ಥಳ: ಶ್ರೀ ಅಯ್ಯಪ್ಪಸ್ವಾಮಿ ದೇವಸ್ಥಾನ, ರಾಘವೇಂದ್ರನಗರ.
- **ಕಾವೇರಿ ಆಯುರ್ವೇದ ಆಸ್ಪತ್ರೆ:** ಮಕ್ಕಳಲ್ಲಿ ಕಂಡು ಬರುವ ಆಟಿಸಂ, ಕುತ್ತಿಗೆ ನೋವಿಗೆ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್, ಬೆಳಗ್ಗೆ 10 ಗಂಟೆಗೆ.
- **ರಾಮ್‌ಸನ್ಸ್ ಬೊಂಬೆ ಮನೆ:** ದಸರೆಯ ಬೊಂಬೆ ಪ್ರದರ್ಶನ 21ನೇ ಅವತರಣಿಕೆ, ಸ್ಥಳ: ರಾಮ್‌ಸನ್ಸ್ ಬೊಂಬೆ ಮನೆ, ನಜರ್‌ಬಾದ್ ಮುಖ್ಯ ರಸ್ತೆ, ಬೆಳಗ್ಗೆ 10 ರಿಂದ.
- **ಕನ್ನಡ ಸೇನೆ–ಕರ್ನಾಟಕ :** ಕನ್ನಡ ಜಾಗೃತಿ ಸಮಾವೇಶ, ಕನ್ನಡ ರಾಜ್ಯೋತ್ಸವ, ಕನ್ನಡ ಮಾಣಿಕ್ಯ ಪ್ರಶಸ್ತಿ ಸಮಾರಂಭ, ಸ್ಥಳ: ಕಿರುರಂಗಮಂದಿರ ಆವರಣ, ಕಲಾಮಂದಿರ, ಬೆಳಗ್ಗೆ 9ಕ್ಕೆ.
- **ಶ್ರೀ ರಾಮಕೃಷ್ಣ ವಿದ್ಯಾಕುಲ :** ವಾರ್ಷಿಕೋತ್ಸವ, ವಿಶೇಷ ಆಹ್ವಾನಿತರು: ರಂಗಭೂಮಿ ಕಲಾವಿದ ಮೈಮ್ ರಮೇಶ್, ರಾಮನಗರದ ಅರ್ಥಶಾಸ್ತ್ರ ಮತ್ತು ಸಾಂಖ್ಯಿಕ ವಿಭಾಗದ ಅಧಿಕಾರಿ ಮಹೇಶ್, ಮಂಡ್ಯದ ಅರ್ಥಶಾಸ್ತ್ರ ಮತ್ತು ಸಾಂಖ್ಯಿಕ ವಿಭಾಗದ ಅಧಿಕಾರಿ ಚಿತ್ರಾ, ಸ್ಥಳ: ಕಲಾಮಂದಿರ, ಸಂಜೆ 4ಕ್ಕೆ.
- **ಭಾರತ ಕಮ್ಯುನಿಸ್ಟ್ ಪಕ್ಷ (ಸಿಪಿಐ), ಮೈಸೂರು ಜಿಲ್ಲಾ ಸಂಘಟನಾ ಸಮಿತಿ:** ಸಿಪಿಐ ಶತಮಾನೋತ್ಸವದ ಅಂಗವಾಗಿ ರಾಜ್ಯಾದ್ಯಂತ ಸಂಚರಿಸುತ್ತಿರುವ ಜಾಥಾ, ಮೈಸೂರಿಗೆ ಆಗಮನ, ಹಿನಕಲ್ ಫ್ಲೈ ಓವರ್ ಬಳಿ ಮಧ್ಯಾಹ್ನ 3 ಗಂಟೆಗೆ ಸ್ವಾಗತ, ನಗರಾದ್ಯಂತ ಜಾಥಾ ಸಂಚಾರ, ಸಂಜೆ 4 ಗಂಟೆಗೆ ಗಾಂಧಿ ವೃತ್ತದಲ್ಲಿ ಬಹಿರಂಗ ಸಭೆ.
- **ಕೆಎಂಪಿಕೆ ಚಾರಿಟಬಲ್ ಟ್ರಸ್ಟ್ :** ಬೆಲವತ್ತ ಗ್ರಾಮದಲ್ಲಿರುವ ಸವಿನೆನಪು ಫೌಂಡೇಶನ್ ಸೇವಾ ಆಶ್ರಮದ ವಿದ್ಯಾರ್ಥಿಗಳಿಗೆ ಸ್ವೆಟರ್ ವಿತರಣೆ, ಮಧ್ಯಾಹ್ನ 4 ಗಂಟೆಗೆ. ಮುಖ್ಯ ಅತಿಥಿಗಳು: ಹೋಟೆಲ್ ಮಾಲೀಕರ ಸಂಘದ ಅಧ್ಯಕ್ಷ ನಾರಾಯಣಗೌಡ, ಮೈಸೂರು ವಾಣಿಜ್ಯ ಮತ್ತು ಕೈಗಾರಿಕಾ ಸಂಸ್ಥೆಯ ಅಧ್ಯಕ್ಷ ಕೆ.ಬಿ.ಲಿಂಗರಾಜು, ಹಿರಿಯ ಸಮಾಜ ಸೇವಕ ಕೆ.ರಘುರಾಮ್ ವಾಜಪೇಯಿ, ಸಮಾಜ ಸೇವಕ ಶಿವಣ್ಣ, ಜೀವಧಾರ ರಕ್ತನಿಧಿ ಕೇಂದ್ರ ಗಿರೀಶ್.

ಸುತ್ತೂರಿನಲ್ಲಿ ಇಂದು

- **ಜಗದ್ಗುರು ಶ್ರೀ ವೀರಸಿಂಹಾಸನ ಮಹಾ ಸಂಸ್ಥಾನ ಮಠ:** ಧನುರ್ಮಾಸದ ವಿಶೇಷ ಪೂಜೆ, ಸ್ಥಳ: ಆದಿ ಜಗದ್ಗುರು ಶ್ರೀ ಶಿವರಾತ್ರೀಶ್ವರ ಶಿವಯೋಗಿಗಳವರ ಕರ್ತೃ ಗದ್ದುಗೆ, ಶ್ರೀ ಮಹದೇಶ್ವರ ಸನ್ನಿಧಿ, ಶ್ರೀ ವೀರಭದ್ರೇಶ್ವರ, ಶ್ರೀ ಸೋಮೇಶ್ವರ, ಶ್ರೀ ನಾರಾಯಣ ಸ್ವಾಮಿ ದೇವಸ್ಥಾನ, ಸುತ್ತೂರು ಶ್ರೀಕ್ಷೇತ್ರ, ಬೆಳಗ್ಗೆಯಿಂದ.

ಮೈಸೂರು ಆಕಾಶವಾಣಿ



ಬೆಳಗ್ಗೆ: 6.10 ಚಿಂತನ–ಡಾ.ಎ.ಎಸ್.ಬಾಲಸುಬ್ರಹ್ಮಣ್ಯಂ, 6.15 ಗೀತಾರಾಧನ, 6.35 ಮತ್ತು ಸಂಜೆ 6.10: ಸಸ್ಯ ಸಿರಿ ಮನೆಯಂಗಳದಲ್ಲಿರುವ ಔಷಧೀಯ ಸಸ್ಯಗಳು, ಪ್ರಸ್ತುತಿ: ಡಾ.ಟಿ.ಶಿವಕುಮಾರ್, 6.40 ಅರಿವಿನ ಶಿಖರ, ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ: ಜಯಂತಿ. ವಿ.ಭಟ್, ವ್ಯಾಖ್ಯಾನ–ಡಾ.ಬಿ.ವಿ.ವಸಂತಕುಮಾರ್, 6.50–ರೈತರಿಗೆ ಸಲಹೆ, 7.15 ಭಾವಗೀತೆಗಳು, 7.45 ಚಿತ್ರಗೀತೆಗಳು, 8.30 ಚಿತ್ರಗೀತೆಗಳು, 9.05 ಕ್ಯಾನ್ಸರ್ ತಪ್ಪು ತಿಳುವಳಿಕೆ ಈ ಕುರಿತ ಪ್ರಾಯೋಜಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು–ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 9.10 ನೆನಪಿನಂಗಳ (ಧ್ವನಿ ಭಂಡಾರದಿಂದ) ಖ್ಯಾತ ಛಾಯಾಚಿತ್ರ ಗ್ರಾಹಕರಾದ ಟಿ.ಎನ್.ಸತ್ಯನ್ ಅವರೊಂದಿಗೆ ಮೈಸೂರು ನಾಗರಾಜಶರ್ಮ ಅವರು ನಡೆಸಿದ್ದ ಸಂವಾದ. 10.00 ಕರ್ನಾಟಕ ಶಾಸ್ತ್ರೀಯ ಸಂಗೀತ ಎಂ.ಎಸ್.ಸುಬ್ಬಲಕ್ಷ್ಮಿ –ಹಾಡುಗಾರಿಕೆ, 10.30 ಹಿಂದಿ ಚಿತ್ರಗೀತೆಗಳು, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ –ಗೇಮ್ ಷೋ, ಪ್ರಸ್ತುತಿ: ದಿಗ್ವಿಜಯ್.ಬಿ, 12.05 ವನಿತಾ ವಿಹಾರ–ನಗು ಈ ಕುರಿತು ಮಾತನಾಡುತ್ತಾರೆ ಸ್ನೇಹ ಕುಲಕರ್ಣಿ. ಮಧ್ಯಾಹ್ನ 12.35 ದೇವರನಾಮ, 12.45 ನಮ್ಮ ಆರೋಗ್ಯ ಆಟಿಸಂ ಥೆರಪಿಯಲ್ಲಿನ ಹೊಸ ವಿಧಾನಗಳು ಮತ್ತು ಇತ್ತೀಚಿನ ಬೆಳವಣಿಗೆಗಳು ಕುರಿತು ಮೈಸೂರಿನ ಅಖಿಲ ಭಾರತ ವಾಕ್–ಶ್ರವಣ ಸಂಸ್ಥೆಯ ವಾಕ್–ಭಾಷಾ ದೋಷ ವಿಭಾಗದ ಮುಖ್ಯಸ್ಥರಾದ ಡಾ.ಜಯಶ್ರೀ ಶಾನ್ ಬಾಳ್ ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ ಬೇದ್ರೆ ಮಂಜುನಾಥ 1.00 ಪ್ರಗತಿ ಪಥ ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಸರಣಿ. ಪ್ರಧಾನಮಂತ್ರಿಗಳ ನಾಗರೀಕ ಕೇಂದ್ರಿತ ಆಡಳಿತ ಯೋಜನೆ ಕುರಿತು ಮಾತನಾಡುತ್ತಾರೆ ಬಿ.ಎಂ.ಪ್ರಭುದೇವ. 1.20 ಭಾವಗೀತೆಗಳು, ವಸುಧಾ ಶಾಸ್ತ್ರಿ, 2.30 ಪ್ರದೇಶ ಸಮಾಚಾರ, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ: ಆಲತ್ತೂರು ಸಹೋದರರ ಯುಗಳ ಹಾಡುಗಾರಿಕೆ, 4.00 ಮಹಿಳಾರಂಗ –ಕರ್ನಾಟಕದ ಯಾತ್ರಾ ಸ್ಥಳಗಳ ಕುರಿತು ಕಾರ್ಯಕ್ರಮ ವೈವಿಧ್ಯ, ಪ್ರಸ್ತುತಿ–ಮೈಸೂರಿನ ಕುವೆಂಪುನಗರದ ಶೃತಿ ಮಹಿಳಾ ಸಂಘದ ಸದಸ್ಯರು, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ–ಪ್ರಸ್ತುತಿ: ಡಾ.ಎಸ್.ಪಿ.ವಿದ್ಯಾಕುಮಾರಿ, 5.00 ಸಂದೇಶ ಆಧಾರಿತ ಶ್ರೋತೃಗಳ ಮೆಚ್ಚಿನ ಚಿತ್ರಗೀತೆಗಳ ಕಾರ್ಯಕ್ರಮ, 6.50 ಕೃಷಿರಂಗ: ಕೃಷಿ ದೀವಿಗೆ ಸಂಶೋಧನಾ ಸಂಸ್ಥೆಯೊಂದಿಗೆ ಕೃಷಿ ಕಲಿಕೆ ಕುರಿತ ಬಾನುಲಿ ಸರಣಿ ಕಾರ್ಯಕ್ರಮ. ಬೀಜೋತ್ಪಾದನೆಯ ಪ್ರಾಮುಖ್ಯತೆ ಕುರಿತು ಮಂಡ್ಯದ ವಿ.ಸಿ.ಫಾರಂ ವಲಯ ಕೃಷಿ ಸಂಶೋಧನಾ ಕೇಂದ್ರದ ಸಹಾಯಕ ಪ್ರಾಧ್ಯಾಪಕ ಡಾ.ಸಿದ್ಧಾರೂಡ ಸಿಂಗಾಡಿ ಅವರೊಂದಿಗೆ ಸಂದರ್ಶನ. ಸಂದರ್ಶಕರು–ಎನ್.ಕೇಶವಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಯುವವಾಣಿ : ಅಂತರಾಷ್ಟ್ರೀಯ ಕರಾಟೆ ಪಟು ಹಾಗೂ ತರಬೇತುದಾರರಾದ ಪ್ರಜ್ವಲ್ ಶಿವರುದ್ರಪ್ಪ, ಅವರೊಂದಿಗೆ ಮಾತುಕತೆ. ಇವರೊಂದಿಗೆ ಭಾಗವಹಿಸುತ್ತಾರೆ–ದಿಗ್ವಿಜಯ್.ಬಿ, 9.30 ಕರ್ನಾಟಕ ಶಾಸ್ತ್ರೀಯ ಸಂಗೀತ: ಎನ್.ವಿಜಯ ಶಿವ –ಹಾಡುಗಾರಿಕೆ, 10.00 ಶ್ರೀವಿದ್ಯಾ ವಿಶಾರದ ಶ್ರೀ ಜಯಚಾಮರಾಜ ಒಡೆಯರ್ ವಿರಚಿತ ದೇವಿಕೃತಿಗಳನ್ನು ಆಧರಿಸಿದ ಬಾನುಲಿ ಸರಣಿ. ಪ್ರಸ್ತುತಿ–ವಿದ್ವಾನ್.ವಿ.ನಂಜುಂಡಸ್ವಾಮಿ, 10.30 ಸವಿನೆನಪು.

ಮೈಸೂರಲ್ಲೇ ಪ್ರಪ್ರಥಮ ಪ್ರಯೋಗ

ಚೆಲುವಾಂಬ ಆಸ್ಪತ್ರೆಯಲ್ಲಿ ತಾಯಿ ಹಾಲಿನ ಬ್ಯಾಂಕ್ ಸ್ಥಾಪನೆ

ಮೈಸೂರು,ಡಿ.21(ಪಿಎಂ)– ಮೈಸೂರಿನ ಮೊಟ್ಟ ಮೊದಲ ತಾಯಿ ಹಾಲಿನ ಬ್ಯಾಂಕ್ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆ ಅಧೀನದ ಚೆಲುವಾಂಬ ಆಸ್ಪತ್ರೆಯಲ್ಲಿ ಭಾನುವಾರ ಉದ್ಘಾಟನೆಗೊಂಡಿತು.

'ಅಮೃತ ವರ್ಷಿಣಿ' ಶೀರ್ಷಿಕೆಯಡಿಯ ಈ ತಾಯಿ ಹಾಲಿನ ಬ್ಯಾಂಕ್ ಅನ್ನು ರೋಟರಿ ಕ್ಲಬ್ ಆಫ್ ಮೈಸೂರು ಮೆಟ್ರೋ ಮತ್ತು ರೋಟರಿ ಕ್ಲಬ್ ಆಫ್ ಬೆಂಗಳೂರು ಸೌತ್ ಪರೇಡ್ ಜಂಟಿ ಆಶ್ರಯದಲ್ಲಿ ಸ್ಥಾಪಿಸಿದ್ದು, ಚೆಲುವಾಂಬ ಆಸ್ಪತ್ರೆ ಸೇವೆ ಒದಗಿಸಲಿದೆ. ಈ ಎರಡೂ ರೋಟರಿ ಕ್ಲಬ್‌ಗಳು ಬ್ಯಾಂಕ್ ಸ್ಥಾಪನೆಗೆ ಅಗತ್ಯವಿರುವ ಉಪಕರಣಗಳನ್ನು ಕೊಡುಗೆಯಾಗಿ ನೀಡಿವೆ.

ರೋಟರಿ ಡಿಸ್ಟ್ರಿಕ್ ಗವರ್ನರ್‌ಗಳಾದ ಬಿ.ಆರ್.ಶ್ರೀಧರ್ (ಆರ್‌ಐ ಡಿಸ್ಟ್ರಿಕ್ 3191) ಮತ್ತು ಪಿ.ಕೆ.ರಾಮಕೃಷ್ಣ (ಆರ್‌ಐ ಡಿಸ್ಟ್ರಿಕ್ 3118) ನೂತನ ತಾಯಿ ಹಾಲಿನ ಬ್ಯಾಂಕ್ ಅನ್ನು ಉದ್ಘಾಟಿಸಿದರು. ಬಳಿಕ ಆಸ್ಪತ್ರೆಯ ಶಿಶುವೈದ್ಯಶಾಸ್ತ್ರ ವಿಭಾಗದ ಕಾವೇರಿ ಸಭಾಂಗಣದಲ್ಲಿ ನಡೆದ ಸಭಾ ಕಾರ್ಯಕ್ರಮದಲ್ಲಿ ಮಾತನಾಡಿದ ಮೈಸೂರು ವೈದ್ಯಕೀಯ ಕಾಲೇಜು ಮತ್ತು ಸಂಶೋಧನಾ ಸಂಸ್ಥೆಯ (ಎಂಎಂಸಿ ಮತ್ತು ಆರ್‌ಐ) ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ, ಎಂಎಂಸಿ ಮತ್ತು ಆರ್‌ಐ ಅನೇಕ ದೂರದೃಷ್ಟಿಯ ಯೋಜನೆಗಳನ್ನು ಹೊಂದಿದ್ದು, ಅದರಲ್ಲಿ ತಾಯಿ ಹಾಲಿನ ಬ್ಯಾಂಕ್ ಸಹ ಒಂದಾಗಿತ್ತು ಅದೀಗ ಸಾಕಾರಗೊಂಡಿದೆ ಎಂದು ಸಂತಸ ವ್ಯಕ್ತಪಡಿಸಿದರು.



ಮೈಸೂರಿನ ಚೆಲುವಾಂಬ ಆಸ್ಪತ್ರೆಯಲ್ಲಿ ಭಾನುವಾರ ತಾಯಿ ಹಾಲಿನ ಬ್ಯಾಂಕ್ ಉದ್ಘಾಟನೆಗೊಂಡಿತು. ರೋಟರಿ ಡಿಸ್ಟ್ರಿಕ್ ಗವರ್ನರ್‌ಗಳಾದ ಬಿ.ಆರ್.ಶ್ರೀಧರ್, ಪಿ.ಕೆ.ರಾಮಕೃಷ್ಣ, ಎಂಎಂಸಿ ಮತ್ತು ಆರ್‌ಐ ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಸುಧಾ ಮತ್ತಿತರರನ್ನು ಚಿತ್ರದಲ್ಲಿ ಕಾಣಬಹುದು.

ಚೆಲುವಾಂಬ ಆಸ್ಪತ್ರೆಯಲ್ಲಿ ಐವಿಎಫ್ ಕೇಂದ್ರದ ಸಿವಿಲ್ ಕಾಮಗಾರಿ ಬಹುತೇಕ ಪೂರ್ಣ

ಮೈಸೂರು,ಡಿ.21(ಪಿಎಂ)– ಚೆಲುವಾಂಬ ಆಸ್ಪತ್ರೆಯಲ್ಲಿ ಆರಂಭವಾಗುತ್ತಿರುವ ಐವಿಎಫ್ ಕೇಂದ್ರದ ಸಿವಿಲ್ ಕಾಮಗಾರಿ ಬಹುತೇಕ ಪೂರ್ಣಗೊಂಡಿದೆ ಎಂದು ಎಂಎಂಸಿ ಮತ್ತು ಆರ್‌ಐ ಡೀನ್ ಮತ್ತು ನಿರ್ದೇಶಕಿ ಡಾ.ಕೆ.ಆರ್.ದಾಕ್ಷಾಯಣಿ ಹೇಳಿದರು.

ತಾಯಿ ಹಾಲು ಬ್ಯಾಂಕ್ ಉದ್ಘಾಟನಾ ಸಮಾರಂಭದಲ್ಲಿ ಮಾತನಾಡಿದ ಅವರು, ಸಂಸ್ಥೆ ಮತ್ತೊಂದು ದೂರದೃಷ್ಟಿ ಯೋಜನೆ ಅಂದರೆ ಅದು ಐವಿಎಫ್ (ಪ್ರನಾಳ ಶಿಶು) ಕೇಂದ್ರ. ಪ್ರಸ್ತುತ ದಿನಗಳಲ್ಲಿ ಅನೇಕ ಮಹಿಳೆಯರಿಗೆ ಇಂತಹ ಒಂದು ಕೇಂದ್ರ ನಿಜಕ್ಕೂ ಅಗತ್ಯವಾಗಿದೆ. ಐವಿಎಫ್ ಸಂಬಂಧ ಬಹುತೇಕ ಸಿವಿಲ್ ಕಾಮಗಾರಿ ಪೂರ್ಣಗೊಂಡಿದೆ. ನಮ್ಮ ಆಂತರಿಕ ಸಂಪನ್ಮೂಲಗಳ ಮೂಲಕ ಇದರ ನಿರ್ಮಾಣ ಮಾಡುತ್ತಿದ್ದು, ಅಗತ್ಯ ಉಪಕರಣಗಳ ವ್ಯವಸ್ಥೆಯೂ ನಮ್ಮಲ್ಲಿಂದಲೇ ಆಗುತ್ತಿದೆ ಎಂದು ಹೇಳಿದರು.

ಹೈಟೆಕ್ ಸುಟ್ಟ ಗಾಯಗಳ ವಾರ್ಡ್: ಚರ್ಮ ಬ್ಯಾಂಕ್ ಸಹ ಸುಟ್ಟ ಗಾಯಗಳಾದವರಿಗೆ ಅವಶ್ಯಕ. ಹೈಟೆಕ್ ಸುಟ್ಟ ಗಾಯಗಳ ವಾರ್ಡ್ ನಮ್ಮಲ್ಲಿದ್ದು, ಪ್ರಸ್ತುತ 100 ಹಾಸಿಗೆಗಳ ಸೌಲಭ್ಯ ಕಲ್ಪಿಸುವಂತೆ ವಾರ್ಡ್ ಅನ್ನು ನಿರ್ಮಿಸಲಾಗಿದೆ. ಇದರ ಜೊತೆಗೆ ನಮಗೆ ಈಗ ಚರ್ಮ ಬ್ಯಾಂಕ್ ಅಗತ್ಯವಿದೆ. ಇದ'ಕ್ಕಾಗಿ ಸ್ಥಳ ಗುರುತಿಸಿದ್ದು, ಉಪಕರಣಗಳ ವ್ಯವಸ್ಥೆಯಾಗಬೇಕಿದೆ ಎಂದರು.

ಶಿಶು ಜನಿಸಿದ ಮೊದಲ ಒಂದು ಗಂಟೆ ಅತ್ಯಾಮೂಲ್ಯ ಸಮಯವಾಗಿದೆ. ಎನ್‌ಐಸಿಯುನಲ್ಲಿ ಶಿಶು ಇದ್ದರೆ, ತಾಯಿ ಹಾಲು ಉಣಿಸಲಾಗದು. ಇಂತಹ ಸಂದರ್ಭದಲ್ಲಿ ತಾಯಿ ಹಾಲು ಅಗತ್ಯ. ಅಲ್ಲದೇ ತಾಯಂದಿರಲ್ಲಿ ಹಾಲು ಬರದೇ ಇದ್ದಾಗ, ಪ್ರತಿ ಮಗುವು ಅಪೌಷ್ಟಿಕತೆಗೆ ಒಳಗಾಗದಂತೆ ಕಾಪಾಡಲು ತಾಯಿ ಹಾಲಿನ ಬ್ಯಾಂಕ್ ಅಗತ್ಯವಾಗಿತ್ತು ಎಂದು ರೋಟರಿ ಕ್ಲಬ್‌ಗಳಲಿಗೆ ಧನ್ಯವಾದ ತಿಳಿಸಿದರು.

ಬ್ಲಡ್ ಬ್ಯಾಂಕ್ ಮಾದರಿಯಲ್ಲಿ ಅನೇಕ ವಿಧದ ಬ್ಯಾಂಕ್‌ಗಳನ್ನು ಪ್ರಾರಂಭಿಸಿ ರೋಗಿಗಳಿಗೆ ಉತ್ಕೃಷ್ಟ ಮಟ್ಟದ ಸೇವೆ ಒದಗಿಸಬೇಕೆಂಬುದು ಸಂಸ್ಥೆಯ ಕನಸಾಗಿದೆ. ಮಹಾರಾಜ ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ದೂರದೃಷ್ಟಿಯಿಂದ ನಮ್ಮ ಸಂಸ್ಥೆ ಪ್ರಾರಂಭವಾಯಿತು. ಆರಂಭದಲ್ಲಿ ಕೇವಲ 20 ಹಾಸಿಗೆ ಆಸ್ಪತ್ರೆಯಾಗಿ ಪ್ರಾರಂಭವಾಗಿ ಇದೀಗ 2,395 ಹಾಸಿಗೆಗಳ ದೊಡ್ಡಾಸ್ಪತ್ರೆಯಾಗಿ ಕಾರ್ಯನಿರ್ವಹಿಸುತ್ತಿದೆ ಎಂದರು.

ವೈದ್ಯಕೀಯ ಸೇವೆ ಮಾತ್ರವಲ್ಲದೆ, ವೈದ್ಯಕೀಯ ಶಿಕ್ಷಣದಲ್ಲೂ ಸಂಸ್ಥೆ ಮಹತ್ವ ಪಾತ್ರ ವಹಿಸುತ್ತಿದೆ. ಪ್ರಸ್ತುತ 250 ಯುಜಿ ಸೀಟುಗಳು ಹಾಗೂ 190 ಪಿಜಿ ಸೀಟುಗಳಲ್ಲಿ ಶಿಕ್ಷಣ ನೀಡಲಾಗುತ್ತಿದೆ. ಜೊತೆಗೆ ಬಿಎಸ್‌ಸಿ ನರ್ಸಿಂಗ್ ಸೇರಿದಂತೆ ಮೊದಲಾದ ಕೋರ್ಸ್‌ಗಳ ಮೂಲಕವೂ ವೈದ್ಯಕೀಯ ಶಿಕ್ಷಣ ನೀಡಲಾಗುತ್ತಿದೆ ಎಂದು ತಿಳಿಸಿದರು.

ರೋಟರಿಯ ಆರ್‌ಐ ಡಿಸ್ಟ್ರಿಕ್ 3181ರ ಪಿಡಿಜಿ ಹೆಚ್.ಆರ್.ಕೇಶವ್, ಪಬ್ಲಿಕ್ ಇಮೇಜ್ ಚೇರ್ ಡಾ.ಕೆ.ಶಿವಪ್ರಸಾದ್, ಡಿಜಿಎನ್ ಯಶಸ್ವಿ ಸೋಮಶೇಖರ್, ರೋಟರಿ ಮೈಸೂರು ಮೆಟ್ರೋ ಅಧ್ಯಕ್ಷ ಎಂ.ಪಿ.ಗೋಪಾಲಕೃಷ್ಣ, ಗೌರವ ಕಾರ್ಯದರ್ಶಿ ಮೋಹನ್ ಗುರುಮೂರ್ತಿ, ರೋಟರಿ ಬೆಂಗಳೂರು ಸೌತ್ ಪರೇಡ್‌ನ ಅಧ್ಯಕ್ಷ ಸುನೀಲ್‌ಕುಮಾರ್, ಗೌರವ ಕಾರ್ಯದರ್ಶಿ ಸತೀಶ್ ಚೆಂಗಲ್, ಚೆಲುವಾಂಬ ಆಸ್ಪತ್ರೆ ವೈದ್ಯಕೀಯ ಅಧೀಕ್ಷಕಿ ಡಾ.ಸುಧಾ, ಆಸ್ಪತ್ರೆಯ ಶಿಶು ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎನ್.ಪ್ರದೀಪ್, ತಾಯಿ ಹಾಲು ಬ್ಯಾಂಕ್‌ನ ನೋಡಲ್ ಅಧಿಕಾರಿ ಡಾ.ಹಂಸ ಮತ್ತಿತರರು ಹಾಜರಿದ್ದರು.

ಜನವರಿ ಮೊದಲ ವಾರದಿಂದ ಕಾರ್ಯಾರಂಭ...

ನೂತನ ತಾಯಿ ಹಾಲು ಬ್ಯಾಂಕ್ ಘಟಕದಲ್ಲಿ ಹಾಲನ್ನು ಶೇಖರಣೆ ಮಾಡಲು ವ್ಯವಸ್ಥೆ ಇದ್ದು, ಜೊತೆಗೆ 6 ತಿಂಗಳವರೆಗೆ ಶೇಖರಿಸಲು ಅವಕಾಶವಿದೆ. ಮುಂಬರುವ ಜನವರಿ ಮೊದಲ ವಾರದಿಂದ ಈ ಬ್ಯಾಂಕ್ ಕಾರ್ಯಾಚರಣೆ ಮಾಡಲಿದೆ ಎಂದು ಚೆಲುವಾಂಬ ಆಸ್ಪತ್ರೆ ಶಿಶು ವೈದ್ಯಶಾಸ್ತ್ರ ವಿಭಾಗದ ಮುಖ್ಯಸ್ಥ ಡಾ.ಎನ್.ಪ್ರದೀಪ್ ತಿಳಿಸಿದರು.

'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಅವರು, ಹೆಚ್ಚು ಹಾಲು ಉತ್ಪತ್ತಿಯಾಗುವ ತಾಯಂದಿರು ಹಾಲನ್ನು ದಾನ ಮಾಡಬಹುದು. ಅವರು ಬ್ರೆಸ್ಟ್ ಪಂಪ್ ಸಾಧನದ ಮೂಲಕ ಹಾಲನ್ನು ಸಂಗ್ರಹಿಸಿ ಕೊಡಬಹುದು. ಈ ರೀತಿಯಲ್ಲಿ ಹಾಲನ್ನು ಶೇಖರಣೆ ಮಾಡಲಾಗುತ್ತದೆ. ನಂತರ ಅಂತಿಮ ವಾಗಿ ನಿಗದಿತ ಒಂದು ದಿನದಲ್ಲಿ ಎಲ್ಲಾ ಹಾಲನ್ನು ಮಿಶ್ರಣ ಮಾಡಲಾಗುತ್ತದೆ. ಬಳಿಕ ಹಾಲಿನ ಪಾಶ್ಚೀರೀಕರಣ, ಕಲ್ಚರ್ ಟೆಸ್ಟ್ ಸೇರಿದಂತೆ ಅಗತ್ಯ ಎಲ್ಲಾ ಪ್ರಕ್ರಿಯೆ ನಡೆಸಲಾಗುತ್ತದೆ. ನಮ್ಮ ಆಸ್ಪತ್ರೆಯಲ್ಲಿ ಅಗತ್ಯವಿರುವ ಮಕ್ಕಳಿಗೆ ಈ ರೀತಿಯ ಹಾಲು ನೀಡಲಾಗುವುದು. ಜೊತೆಗೆ ಹೊರಗಡೆಯಿಂದ ಮನವಿ ಬಂದರೂ ನೀಡಲಾಗುತ್ತದೆ. ನಮ್ಮ ಆಸ್ಪತ್ರೆಯಲ್ಲಿರುವ ತಾಯಂದಿರ ಜೊತೆಗೆ ಹೊರಗಡೆಯಿಂದಲೂ ಹೆಚ್ಚು ಹಾಲು ಉತ್ಪತ್ತಿಯಾಗುವ ತಾಯಂದಿರು ಹಾಲು ದಾನ ಮಾಡಬಹುದು. ಹೆಚ್ಚುವರಿ ಹಾಲು ಉತ್ಪತ್ತಿಯಾಗುವ ಒಬ್ಬ ತಾಯಿ 50ರಿಂದ 100 ಎಂಎಲ್‌ವರೆಗೆ ದಾನ ಮಾಡಬಹುದು. ಇನ್ನು ಹೆಚ್ಚು ಬಂದಲ್ಲಿ ಕೊಟ್ಟರೆ ಯಾವುದೇ ತೊಂದರೆ ಇಲ್ಲ. ಅಗತ್ಯವಿರುವ ಮಕ್ಕಳಿಗೆ ಬ್ಯಾಂಕ್ ಮೂಲಕ ಹಾಲು ಒದಗಿಸುವ ಸೇವೆ ಸಂಪೂರ್ಣ ಉಚಿತ. ಶಿಶು ವೈದ್ಯಶಾಸ್ತ್ರ ವಿಭಾಗದ ಅಡಿಯಲ್ಲಿ ಈ ಬ್ಯಾಂಕ್ ಕಾರ್ಯನಿರ್ವಹಿಸಲಿದೆ ಎಂದು ತಿಳಿಸಿದರು.

ಸುಮಾರು 35 ಲಕ್ಷ ವೆಚ್ಚ: ಸುಮಾರು 35 ಲಕ್ಷ ರೂ. ವೆಚ್ಚದಲ್ಲಿ ತಾಯಿ ಹಾಲಿನ ಬ್ಯಾಂಕ್ ಸ್ಥಾಪನೆಗೆ ಅಗತ್ಯವಿರುವ ಎಲ್ಲಾ ಉಪಕರಣಗಳನ್ನು ನಮ್ಮ ರೋಟರಿ ಕ್ಲಬ್‌ಗಳಿಂದ ಕೊಡುಗೆಯಾಗಿ ನೀಡಿದ್ದು, ಅಗತ್ಯ ಮಾನವ ಸಂಪನ್ಮೂಲನ ಹಾಗೂ ಸೇವೆಯನ್ನು ಚೆಲುವಾಂಬ ಆಸ್ಪತ್ರೆ ಒದಗಿಸಲಿದೆ ಎಂದು ರೋಟರಿ ಮೈಸೂರು ಮೆಟ್ರೋ ಅಧ್ಯಕ್ಷ ಎಂ.ಪಿ.ಗೋಪಾಲಕೃಷ್ಣ ಇದೇ ವೇಳೆ ತಿಳಿಸಿದರು.

ರಾಷ್ಟ್ರೀಯ 'ಪಲ್ಸ್ ಪೋಲಿಯೊ ಲಸಿಕಾ' ಅಭಿಯಾನಕ್ಕೆ ಸಿಎಂ ಸಿದ್ದರಾಮಯ್ಯ ಚಾಲನೆ



ಬೆಂಗಳೂರಿನ ಗೃಹ ಕಚೇರಿ ಕೃಷ್ಣಾದಲ್ಲಿ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಷ್ಟ್ರೀಯ ಲಸಿಕಾ ದಿನವನ್ನು ಉದ್ಘಾಟಿಸಿದರು

ಬೆಂಗಳೂರು: ಇಂದಿನಿಂದ ರಾಜ್ಯಾದ್ಯಂತ 'ರಾಷ್ಟ್ರೀಯ ಪಲ್ಸ್ ಪೋಲಿಯೋ' ಲಸಿಕಾ ಕಾರ್ಯಕ್ರಮ ನಡೆಯುತ್ತಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಅಭಿಯಾನಕ್ಕೆ ಚಾಲನೆ ನೀಡಿದರು.

ಗೃಹ ಕಚೇರಿ ಕೃಷ್ಣಾದಲ್ಲಿ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ರಾಷ್ಟ್ರೀಯ ಲಸಿಕಾ ದಿನವನ್ನು ಉದ್ಘಾಟಿಸಿದರು. ಗೃಹ ಸಚಿವ ಡಾ. ಜಿ. ಪರಮೇಶ್ವರ್, ಆರೋಗ್ಯ ಸಚಿವ ದಿನೇಶ್ ಗುಂಡೂರಾವ್ ಮತ್ತಿತರರು ಈ ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು.

ಈ ಸಂದರ್ಭದಲ್ಲಿ ಮಾತನಾಡಿದ ಮುಖ್ಯಮಂತ್ರಿ, ಪ್ರತಿಯೊಬ್ಬರೂ ತಮ್ಮ 5 ವರ್ಷದೊಳಗಿನ ಮಕ್ಕಳಿಗೆ ತಪ್ಪದೇ ಪೋಲಿಯೊ ಲಸಿಕೆ ಹಾಕಿಸುವ ಮೂಲಕ 'ಪೋಲಿಯೊ ಮುಕ್ತ ಭಾರತ'ದ ನಮ್ಮ ಅಭಿಯಾನಕ್ಕೆ ಬೆಂಬಲವಾಗಿ ನಿಲ್ಲಬೇಕು ಎಂದು ಮನವಿ ಮಾಡಿದರು.

ಇಂದು ನೀವು ಮಗುವಿಗೆ ಹಾಕಿಸುವ ಎರಡು ಹನಿ ಲಸಿಕೆ, ಅದರ ಭವಿಷ್ಯವನ್ನು ಶಾಶ್ವತ ಅಂಗವೈಕಲ್ಯದಿಂದ ರಕ್ಷಿಸಲಿದೆ ಎಂದು ತಿಳಿಸಿದರು. ನಿಮ್ಮ ಮನೆಯಲ್ಲಿ 5 ವರ್ಷದೊಳಗಿನ ಪುಟ್ಟ ಮಕ್ಕಳಿದ್ದಲ್ಲಿ ಇಂದಿನಿಂದ ಡಿಸೆಂಬರ್ 24ರ ಒಳಗಾಗಿ ತಪ್ಪದೇ ಸಮೀಪದ ಲಸಿಕಾ ಕೇಂದ್ರಕ್ಕೆ ತೆರಳಿ ಪೋಲಿಯೋ ಲಸಿಕೆ ಹಾಕಿಸಿ, ಪೋಲಿಯೋ ಮುಕ್ತ ಭಾರತ ಅಭಿಯಾನದ ಜೊತೆಯಾಗಿ ಎಂದು ಹೇಳಿದರು. ಜಿಲ್ಲಾ ಕೇಂದ್ರಗಳಲ್ಲಿಯೂ ರಾಷ್ಟ್ರೀಯ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಚಾಲನೆ ದೊರೆತಿದ್ದು, ಐದು ವರ್ಷದೊಳಗಿನ ಮಕ್ಕಳಿಗೆ ಲಸಿಕೆ ಹಾಕಿಸಲಾಗುತ್ತಿದೆ.

ವಿಶ್ವಮಟ್ಟದಲ್ಲಿ ಮೈಸೂರು ಬೆಳಗುತ್ತಿರುವ ಪ್ರಭಾವಿಗಳಿಗೆ ಇನ್ಫ್ಲುಯೆನ್ಸರ್ಸ್ ಪ್ರಶಸ್ತಿ ಪ್ರದಾನ

ಮೈಸೂರು, ಡಿ.21(ವಿವಿಹೆಚ್)– ಪ್ರಪಂಚದ ಮೂಲೆ–ಮೂಲೆಯಲ್ಲಿನ ಸಂಸ್ಕೃತಿ, ಆಚಾರ–ವಿಚಾರ, ಸಾಮಾಜಿಕ, ಆರ್ಥಿಕ ಸ್ಥಿತಿಗತಿಗಳನ್ನು ಜನರಿಗೆ ತಿಳಿಸುವ ಮೂಲಕ ವಿಶ್ವಜ್ಞಾನದೊಂದಿಗೆ ಬೌದ್ಧಿಕ ಬೆಳವಣಿಗೆಗೆ ಸಹಾಯ ಮಾಡುವ ಕೆಲಸ ಇನ್ಫ್ಲುಯೆನ್ಸರ್ಸ್ ಮಾಡುತ್ತಿದ್ದಾರೆ ಎಂದು ರಂಗಸನ್ಸ್ ಏರೋಸ್ಪೇಸ್‌ನ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ ಅಭಿಪ್ರಾಯಪಟ್ಟರು.

ಮೈಸೂರಿನ ಸದರ್ನ್ ಸ್ಟಾರ್ ಹೋಟೆಲ್‌ನಲ್ಲಿ ಭಾನುವಾರ ನಡೆದ ಎಂಪವರ್ಡ್ ಜರ್ನೀಸ್ 2025–ಡ್ರೀಮ್ಸ್ ಟು ಡೆಸ್ಟಿನೇಷನ್ ವತಿಯಿಂದ ಆಯೋಜಿಸಲಾಗಿದ್ದ ಇನ್ಫ್ಲುಯೆನ್ಸರ್ಸ್ ಅವಾರ್ಡ್–2025 ಪ್ರಶಸ್ತಿ ಪ್ರಧಾನ ಕಾರ್ಯಕ್ರಮ ಉದ್ಘಾಟಿಸಿ ಅವರು ಮಾತನಾಡಿದರು.

ಪ್ರವಾಸ, ಸೃಜನಶೀಲತೆ ಹಾಗೂ ಡಿಜಿಟಲ್ ವಿಭಾಗಗಳಲ್ಲಿ ಪರಿಣಾಮಕಾರಿಯಾಗಿ ಪ್ರಭಾವ ಬೀರುತ್ತಿರುವ ಮೈಸೂರು ಭಾಗದ ಪ್ರಭಾವಿಗಳನ್ನು (ಇನ್ಫ್ಲುಯೆನ್ಸರ್ಸ್) ಗುರುತಿಸಿ ಗೌರವಿಸುತ್ತಿರುವುದು ಹೆಮ್ಮೆಯ ಸಂಗತಿಯಾಗಿದೆ ಎಂದರು.

ಇನ್ಫ್ಲುಯೆನ್ಸರ್ಸ್ ಮುಂದಿನ ಭವಿಷ್ಯ ರೂಪಿಸುವವರು. ತಂದೆ–ತಾಯಿಯ ಮಾತನ್ನು ಕೇಳದ ಮಕ್ಕಳು ನಿಮ್ಮ ಮಾತುಗಳನ್ನು ಕೇಳುತ್ತಾರೆ. ನಿಮ್ಮನ್ನು ಹೆಚ್ಚು ಹಿಂಬಾಲಿಸುತ್ತಾರೆ. ಅದು ನಿಮಗೆ ಶಕ್ತಿ ಮಾತ್ರವಲ್ಲ, ಅದೊಂದು ದೊಡ್ಡ ಜವಾಬ್ದಾರಿಯಾಗಿದೆ. ಇದನ್ನು ಕೇವಲ ಹಿಂಬಾಲಿಸುವವರ ಸಂಖ್ಯೆ ಹೆಚ್ಚಳಕ್ಕಾಗಲಿ, ಹಣ ಸಂಪಾದನೆಗಾಗಿ ಆಗಲಿ ಬಳಸಿಕೊಳ್ಳಬೇಡಿ. ಸಮಾಜಮುಖಿ ಕೆಲಸಗಳಲ್ಲಿ ತೊಡಗಿಸಿಕೊಳ್ಳಿ, ಮುಂದಿನ ತಲೆಮಾರನ್ನು ಜಾಗೃತಗೊಳಿಸಿ ಎಂದು ಸಲಹೆ ನೀಡಿದರು.

ಮೈಸೂರು ಜಿಲ್ಲಾ ಅಪರ ಜಿಲ್ಲಾಧಿಕಾರಿ ಪಿ.ಶಿವರಾಜು ಮಾತನಾಡಿ, ಮೈಸೂರಿನ ಅಸ್ಮಿತೆ ಉಳಿಸಲಿಕ್ಕಾಗಿ, ಇಲ್ಲಿನ ಸಂಸ್ಕೃತಿಯನ್ನು ದೇಶದ ಉದ್ದಗಲಕ್ಕೂ ಪಸರಿಸುವ ಕೆಲಸ ಮಾಡುತ್ತಿರುವ ಇನ್ಫ್ಲುಯೆನ್ಸರ್ಸ್ ಗಳಿಗೆ ಪ್ರೋತ್ಸಾಹ ನೀಡುತ್ತಿರುವುದು ಉತ್ತಮ ಬೆಳವಣಿಗೆಯಾಗಿದೆ. ಮೈಸೂರು ಹೆಸರನ್ನು ಬಳಸಿಕೊಂಡು ಮೈಸೂರಿನ ಪ್ರತಿಷ್ಠೆಯನ್ನು ಅಂತಾರಾಷ್ಟ್ರೀಯ ಮಟ್ಟದಲ್ಲಿ ಬೆಳೆಸಲು ಬೇಕಾದ ಕೆಲಸಗಳನ್ನು ಮಾಡಬೇಕು. ಹೊರತಾಗಿ ಸ್ವಾರ್ಥ ಬಳಕೆ ಸಲ್ಲದು ಎಂದರು. ಸೋಷಿಯಲ್ ಮೀಡಿಯಾದಲ್ಲಿ ಪ್ರಮುಖ ಭಾಗವಾಗಿರುವ ನಿಮಗೆ ಸಾಮಾಜಿಕ ಕಳಕಳಿ, ಬದ್ಧತೆ ಇರಬೇಕು. ಹಣ ಸಂಪಾದನೆ, ಇತರೆ ವಿಚಾರಗಳ ದುಂಬಾಲಿಗೆ ಬಿದ್ದು, ನಿಮ್ಮ ವ್ಯಕ್ತಿತ್ವನ್ನು ಕಳೆದುಕೊಳ್ಳಬೇಡಿ ಎಂದು ಸಲಹೆ ನೀಡಿದರು.

ಮೈಕ್ರೋಸಾಫ್ಟ್‌ನ ಆರ್‌ಎಸ್‌ಎ ಏಷ್ಯಾ ನಾಯಕಿ ಡಾ.ಸಾಯಿ ಕವಿತಾ ಕೃಷ್ಣಯ್ಯಂಗಾರ್, ಯೋಗಗುರು ಶ್ರೀಹರಿ, ಜಯಂತಿ ಬಲ್ಲಾಳ್, ಅಕ್ಷತ್ ಚೌಧರಿ, ಸ್ಕೈಟ್‌ಸೀ ಸಂಸ್ಥಾಪಕ ಶಶಿಕುಮಾರ್, ಮೈಸೂರು ವಿವಿ ಇಎಂಆರ್‌ಸಿ ನಿರ್ದೇಶಕರಾದ ಪ್ರೊ. ಎಂ.ಎಸ್.ಸಪ್ನಾ, ವಿವೇಕ್ ಉಪಸ್ಥಿತರಿದ್ದರು.



ರಂಗಸನ್ಸ್ ಏರೋಸ್ಪೇಸ್‌ನ ವ್ಯವಸ್ಥಾಪಕ ನಿರ್ದೇಶಕ ಪವನ್ ರಂಗ ಜ್ಯೋತಿ ಬೆಳಗಿಸುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು.

ಇನ್ಫ್ಲುಯೆನ್ಸರ್ಸ್ ಅವಾರ್ಡ್–2025 ಪ್ರದಾನ ಕಾರ್ಯಕ್ರಮದಲ್ಲಿ ಟ್ರಾವೆಲ್, ಲೈಫ್‌ಸ್ಟೈಲ್, ಫ್ಯಾಷನ್ ಅಂಡ್ ಸ್ಟೈಲ್, ಫುಡ್ ಅಂಡ್ ಕ್ಯುಲಿನರಿ, ಎಮರ್ಜಿಂಗ್ ಇನ್ಫ್ಲುಯೆನ್ಸರ್, ಸಾಮಾಜಿಕ ಪರಿಣಾಮ ಹಾಗೂ ಟೆಕ್ ಇನ್ಫ್ಲುಯೆನ್ಸರ್ ಆಫ್ ದಿ ಇಯರ್ ಸೇರಿದಂತೆ ಏಳು ವಿಭಾಗಗಳಲ್ಲಿ ಪ್ರಶಸ್ತಿಗಳನ್ನು ನೀಡಲಾಯಿತು.

ಟ್ರಾವೆಲ್ ವಿಭಾಗದಲ್ಲಿ ನಮ್ರತಾ ಪಿ.ಗೌಡ, ಲೈಫ್‌ಸ್ಟೈಲ್ ವಿಭಾಗ–1 (ಅಂಜು ಚೋಂದಮ್ಮ), ವಿಭಾಗ–2 (ಮೋನಿಕಾ ಅರಸ್), ಫ್ಯಾಷನ್ ಅಂಡ್ ಸ್ಟೈಲ್ ವಿಭಾಗದಲ್ಲಿ ಆರ್.ಐಶ್ವರ್ಯ, ಫುಡ್ ಅಂಡ್ ಕ್ಯುಲಿನರಿ ವಿಭಾಗದಲ್ಲಿ ರಾಣಾ ಟಮ್ಮಿ, ಎಮರ್ಜಿಂಗ್ ಇನ್ಫ್ಲುಯೆನ್ಸರ್ ವಿಭಾಗದಲ್ಲಿ ಆದಿತ್ಯಾ ಚಿಂಟು, ಸಾಮಾಜಿಕ ಪರಿಣಾಮ(ಇಂಪ್ಯಾಕ್ಟ್) ವಿಭಾಗ–1 (ಪ್ರಶಾಂತ್), ವಿಭಾಗ–2 (ಬೀಸ್ಟ್ ನವೀನ್), ಪೀಫಲ್ ಚಾಯ್ಸ್ ವಿಭಾಗದಲ್ಲಿ ಸ್ನೇಹಾ ಕೋಮಲ ಪ್ರಶಸ್ತಿ ಪಡೆದರು.

ಬರೀ ನಗರ ಪ್ರದೇಶವನ್ನೇ ಕೇಂದ್ರೀಕರಿಸಿ; ಗ್ರಾಮೀಣ ಜನರ ಬಗ್ಗೆ ಯಾರ ಗಮನವೂ ಇಲ್ಲ

• ಹಿರಿಯ ಶಾಸಕ ತನ್ವೀರ್‌ಸೇಠ್ ಬೇಸರ • ದಸರಾ ವಸ್ತುಪ್ರದರ್ಶನದಲ್ಲಿ 'ಕಲಾ ಸಂಭ್ರಮ'ಕ್ಕೆ ಚಾಲನೆ • ಅಯೂಬ್‌ಖಾನ್ ಕಾರ್ಯಸಾಧನೆಗೆ ಪ್ರಶಂಸೆ



ದಸರಾ ವಸ್ತು ಪ್ರದರ್ಶನ–2025ರ ಅಂಗವಾಗಿ ವಿವಿಧ ಇಲಾಖೆಗಳ ಸಹಕಾರದೊಂದಿಗೆ ಏರ್ಪಡಿಸಿದ್ದ ಮೂರು ದಿನಗಳ 'ಕಲಾ ಸಂಭ್ರಮಕ್ಕೆ ಚಾಲನೆ ನೀಡಲಾಯಿತು.

ಕಲಾಸಂಭ್ರಮ ಯಶಸ್ವಿಗೆ ಹಲವರ ಶ್ರಮವಿದೆ. ಈ ಕಾರ್ಯಕ್ರಮ ಯಶಸ್ವಿಗೊಳಿಸಲು 6 ಸಮಿತಿ ರಚಿಸಿ, ಅದರ ಮೂಲಕ ಕಾರ್ಯಕ್ರಮ ಗಳನ್ನು ಅನುಷ್ಠಾನಗೊಳಿಸಲಾಗಿದೆ. ಈ ಸಮಿತಿಯಲ್ಲಿ 500ಕ್ಕೂ ಹೆಚ್ಚು ಕಾರ್ಯಕರ್ತರು ಶ್ರಮಿಸುತ್ತಿದ್ದಾರೆ. ಲಲಿತಾ ಕಲಾ ಕರಕುಶಲ ಉಪಸಮಿತಿ, ಮಹಿಳಾ ಉದ್ಯಮಿ ಉಪಸಮಿತಿ, ಕುಂದುಕೊರತೆಗಳ ಉಪಸಮಿತಿ, ಮಹಿಳಾ ಮತ್ತು ಮಕ್ಕಳ ಉಪಸಮಿತಿ ಹಾಗೂ ಸ್ವಚ್ಛತಾ ಕಾರ್ಯಕ್ರಮ ಸಮಿತಿ ರಚಿಸಿ, ಕಾರ್ಯಕ್ರಮಗಳನ್ನು ವ್ಯವಸ್ಥಿತವಾಗಿ ಅನುಷ್ಠಾನ ಗೊಳಿಸಿರುವ ಸಮಿತಿ ಸದಸ್ಯರಿಗೆ ಸಲ್ಲುತ್ತದೆ.

-ಅಯೂಬ್‌ಖಾನ್,
ಅಧ್ಯಕ್ಷರು, ರಾಜ್ಯ ವಸ್ತುಪ್ರದರ್ಶನ ಪ್ರಾಧಿಕಾರ, ಮೈಸೂರು

ಮೈಸೂರು, ಡಿ.21(ಎಸ್‌ಪಿಎನ್)– ಪ್ರಸ್ತುತ ಎಲ್ಲರೂ ನಗರ ಪ್ರದೇಶವನ್ನು ಕೇಂದ್ರವಾಗಿಸಿಕೊಂಡು ಮಾತನಾಡುತ್ತಿದ್ದೇವೆ. ಆದರೆ, ಗ್ರಾಮೀಣ ಪ್ರದೇಶದ ಜನರ ಸ್ಥಿತಿ–ಗತಿಗಳ ಬಗ್ಗೆ ಒಬ್ಬರೂ ಗಮನಿಸುತ್ತಿಲ್ಲ, ಮಾತನಾಡುತ್ತಿಲ್ಲ ಎಂದು ಮಾಜಿ ಸಚಿವರೂ ಆದ ಶಾಸಕ ತನ್ವೀರ್ ಸೇಠ್ ಬೇಸರ ವ್ಯಕ್ತಪಡಿಸಿದರು.

ಮೈಸೂರು ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ದಸರಾ ವಸ್ತು ಪ್ರದರ್ಶನ 2025ರ ಅಂಗವಾಗಿ ಲಲಿತ ಕಲೆ ಮತ್ತು ಕರಕುಶಲ ಸಮಿತಿ, ಜಯಚಾಮರಾಜೇಂದ್ರ ಸರ್ಕಾರಿ ದೃಶ್ಯ ಕಲಾ ಕಾಲೇಜು, ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆ, ಮೈಸೂರಿನ ಕಲಾ ನಿಕೇತನ ಕಾಲೇಜು, ವರ್ಚುಯಲ್ ಆರ್ಟ್ಸ್, ರವಿ ವರ್ಮಾ ಆರ್ಟ್ ಇನ್ಸ್ಟಿಟ್ಯೂಟ್ ಹಾಗೂ ವೈಜಯಂತಿ ಚಿತ್ರ ಕಲಾ ಕಾಲೇಜು ಸಹಕಾರದೊಂದಿಗೆ ಮೂರು ದಿನಗಳ 'ಕಲಾ ಸಂಭ್ರಮ'ದಲ್ಲಿ ಪಾಲ್ಗೊಂಡು ಶಾಸಕರು ಮಾತನಾಡಿದರು.

ದಸರಾ ವಸ್ತು ಪ್ರದರ್ಶನ ಇತಿಹಾಸದಲ್ಲೇ ಇಂತಹ ಕಾರ್ಯಕ್ರಮಗಳನ್ನು ಆಯೋಜಿಸಿಲ್ಲ. ಆದರೆ, ಅಯೂಬ್ ಖಾನ್, ಪ್ರಾಧಿಕಾರದ ಅಧಿಕಾರ ವಹಿಸಿಕೊಂಡ ದಿನದಿಂದ ಬಹಳ ಚಟುವಟಿಕೆಯಿಂದ ಕೆಲಸ ಮಾಡುತ್ತಿದ್ದಾರೆ. ಅಲ್ಲದೆ, ಅಯೂಬ್‌ಖಾನ್ ಅವರ ಆಲೋಚನೆ, ಶ್ರಮ ಅಡಗಿದೆ. ಹಾಗಾಗಿ ಈ ಬಾರಿಯ ದಸರಾ ಮಹೋತ್ಸವಕ್ಕೆ ದಸರಾ ವಸ್ತು ಪ್ರದರ್ಶನ ಪ್ರಾಧಿಕಾರ ಕಾರ್ಯ ಚಟುವಟಿಕೆಗಳು ಮೆರಗು ತಂದಿವೆ ಎಂದರು.



ತನ್ವೀರ್ ಸೇಠ್

ಕಲಾ ಸಂಭ್ರಮದಲ್ಲಿ ಗ್ರಾಮೀಣ ಪ್ರದೇಶದ ಮಹಿಳೆಯರಿಗೆ ಹೆಚ್ಚಿನ ಅವಕಾಶ ನೀಡಿರುವುದು ಸ್ವಾಗತಾರ್ಹ. ನಗರ ಪ್ರದೇಶದ ಜನರು, ಗ್ರಾಮೀಣ ಪ್ರದೇಶದ ಕೃಷಿ, ಕರಕುಶಲ ಸಾಮಾಗ್ರಿ ಹಾಗೂ ರೈತರೇ ತಯಾರಿಸುವ ವಸ್ತುಗಳನ್ನು ನಗರ ಜನತೆ ಹೆಚ್ಚುಹೆಚ್ಚು ಖರೀದಿಸುವ ಮೂಲಕ ಗ್ರಾಮೀಣ ಆರ್ಥಿಕತೆಗೆ ಬಲನೀಡುವಂತೆ ಸಲಹೆ ನೀಡಿದ ಶಾಸಕರು, ಪ್ರಾಧಿಕಾರದ ಅಧ್ಯಕ್ಷ ಅಯೂಬ್‌ಖಾನ್ ಅಧಿಕಾರ ಸ್ವೀಕಾರ ಮಾಡಿದ ಮೇಲೆ, ವರ್ಷಪೂರ್ತಿ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ವಸ್ತು ಪ್ರದರ್ಶನಕ್ಕೆ ಜೀವ ಕಳೆ ತಂದಿದ್ದಾರೆ ಎಂದು ಆಶಿಸಿದರು.

ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಮಾತನಾಡಿ, ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಇತಿಹಾಸದಲ್ಲಿ ಹಿಂದೆಂದೂ ಕಾಣದಂತಹ ಅಭಿವೃದ್ಧಿಯನ್ನು ಕಂಡಿದೆ. ತಮಗೆ ಸಿಕ್ಕಂತಹ ಅವಕಾಶದಲ್ಲಿ ಹೊಸ ನಾವಿನ್ಯತೆ ಮೂಲಕ ಜನಾಕರ್ಷಣೆಯ ಕೇಂದ್ರವನ್ನಾಗಿ ರೂಪಿಸಿದ್ದಾರೆ. ಹಾಗಾಗಿ ಅಯೂಬ್ ಖಾನ್ ಪರಿಶ್ರಮ ಪ್ರಶಂಸಿಸಿದರು.

ಇದಕ್ಕೂ ಮುನ್ನ ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಆವರಣದಲ್ಲಿ ಲಲಿತಕಲೆ ಮತ್ತು ಕರಕುಶಲ ಉಪಸಮಿತಿ ವತಿಯಿಂದ ಆಯೋಜಿಸಿದ್ದ ಕಲಾ ಸಂಭ್ರಮವನ್ನು ಮೈಸೂರು ಜಿಲ್ಲಾಧಿಕಾರಿ ಲಕ್ಷ್ಮಿಕಾಂತ್ ರೆಡ್ಡಿ ಟೇಪ್ ಕತ್ತರಿಸುವ ಮೂಲಕ ಉದ್ಘಾಟಿಸಿದರು.

ಈ ವೇಳೆ ಗ್ರಾಮಾಂತರ ಕಾಂಗ್ರೆಸ್ ಸಮಿತಿ ಅಧ್ಯಕ್ಷ ಡಾ.ಬಿ.ಜೆ.ವಿಜಯಕುಮಾರ್, ಜಿಪಂ ಸಿಇಓ ಯುಕೇಶ್ ಕುಮಾರ್, ಗಂಡಸಿ ಮಂಜುನಾಥ್, ಮೈಸೂರು ನಗರ ಪಾಲಿಕೆ ಮಾಜಿ ಸದಸ್ಯ ಸೈಯದ್ ಹಜರತ್, ಕಾವಾ ಆಡಳಿತಾಧಿಕಾರಿ ನಿರ್ಮಲ ಮಠಪತಿ, ವಸ್ತುಪ್ರದರ್ಶನ ಪ್ರಾಧಿಕಾರದ ಸಿಇಓ ರುದ್ರೇಶ್, ಸಮಿತಿ ಅಧ್ಯಕ್ಷರಾದ ಉಮೇಶ್, ಉಪಾಧ್ಯಕ್ಷೆ ಲತಾ ರಂಗನಾಥ್, ಚರಣ್ ರಾಜ್, ಗವಿಸಿದ್ದು, ಆರ್.ಎಚ್ ಕುಮಾರ, ಇಂದಿರಾ, ಸಿದ್ದರಾಜ ಅರಸ್, ರಶ್ಮಿ,ಪ್ರವೀಣ, ವೇದ, ಎನ್.ಆರ್ ನಾಗೇಶ್, ಡೈರಿ ವೆಂಕಟೇಶ್, ವಿಶ್ವನಾಥ್ (ವಿಶ್ವ), ರೂಪೇಶ್ ಮತ್ತಿತರರು ಉಪಸ್ಥಿತರಿದ್ದರು. ವಿವಿಧ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಶಾಸಕ ತನ್ವೀರ್ ಸೇಠ್ ನೇತೃತ್ವದಲ್ಲಿ ಬಹುಮಾನ ವಿತರಿಸಲಾಯಿತು.

ಅಪಘಾತದಲ್ಲಿ ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಕಾರು ಚಾಲಕ ದುರ್ಮರಣ

ಹುಬ್ಬಳ್ಳಿ: ಬಿಜೆಪಿ ಶಾಸಕ ಮಹೇಶ್ ಟೆಂಗಿನಕಾಯಿ ಅವರ ಕಾರು ಚಾಲಕ ಬೈಕ್ ಅಪಘಾತದಲ್ಲಿ ಸಾವನ್ನಪ್ಪಿದ್ದಾರೆ. 45 ವರ್ಷದ ಮಂಜುನಾಥ್ ಹೂಗಾರ್ ಮೃತ ಕಾರು ಚಾಲಕ. ಹುಬ್ಬಳ್ಳಿಯ ನೂಲ್ವಿ ಮೂಲದ ಮಂಜುನಾಥ್ ನಿನ್ನೆ ರಾತ್ರಿ ಬೈಕ್‌ನಲ್ಲಿ ತಮ್ಮ ಗ್ರಾಮಕ್ಕೆ ಹೋಗುತ್ತಿದರು. ಈ ವೇಳೆ ಬೈಕ್ ಸ್ಕಿಡ್ ಆಗಿ ಕೆಳಗೆ ಬಿದ್ದು ಸ್ಥಳದಲ್ಲೇ ಮಂಜುನಾಥ್ ಹೂಗಾರ್ ಮೃತಪಟ್ಟಿದ್ದಾರೆ. ಹುಬ್ಬಳ್ಳಿ ಗ್ರಾಮೀಣ ಠಾಣೆ ವ್ಯಾಪ್ತಿಯಲ್ಲಿ ಘಟನೆ ನಡೆದಿದೆ. ಇನ್ನು ತಮ್ಮ ಕಾರು ಚಾಲಕ ಮಂಜುನಾಥ್ ಸಾವಿಗೆ ಶಾಸಕ ಮಹೇಶ್ ಟೆಂಗಿನ ಕಾಯಿ ತೀವ್ರ ಸಂತಾಪ ಸೂಚಿಸಿದ್ದಾರೆ.

• ನಿಧನ •



ದಿ|| ಸಾವಿತ್ರಮ್ಮ ರವರು

ನಗರದ ಶಿಕ್ಷಕರ ಬಡಾವಣೆಯ ನಿವಾಸಿ, ಶಿಕ್ಷಕರ ಬಡಾವಣೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಲೇಟ್ ಡಿ. ಇ.ರಾಮಲಿಂಗೇಗೌಡ ರವರ ಧರ್ಮಪತ್ನಿ ಸಾವಿತ್ರಮ್ಮ (80) ಇಂದು ರಾತ್ರಿ ತಮ್ಮ ಸ್ವಗೃಹದಲ್ಲಿ ನಿಧನರಾದರು ಮೃತರು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಆರ್ ಸೋಮಣ್ಣ ಸೇರಿದಂತೆ ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಅಪಾರ ಬಂಧು ಬಳಗದವರನ್ನು ಅಗಲಿದ್ದಾರೆ. ಮೃತರ ಅಂತ್ಯ ಕ್ರಿಯೆಯನ್ನು ಇಂದು 22-12-2025 ಮಧ್ಯಾಹ್ನ 12 ಘಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನೆರವೇರಿಸಲಾಗುವುದು.

ನಕ್ಕರೆ ಅದೇ ಸ್ವರ್ಗ

ಟೀಚರ್: (ಹೊಸದಾಗಿ ತರಗತಿಗೆ ಸೇರಿದ ವಿದ್ಯಾರ್ಥಿಗೆ) ನೀನು ಯಾರ್ ಮಗ?
ವಿದ್ಯಾರ್ಥಿ: ವಿಶ್ವ ಸುಂದರಿ ಮಗ ಟೀಚರ್!
ಟೀಚರ್: ಏನೂ... ತಮಾಷೆ ಮಾಡ್ತಿದೀಯಾ?
ವಿದ್ಯಾರ್ಥಿ: ಇಲ್ಲ ಟೀಚರ್, ನನ್ನ ಅಪ್ಪನ ಹೆಸರು ವಿಶ್ವ, ಅಮ್ಮನ ಹೆಸರು ಸುಂದರಿ...!!!

ಮೈಸೂರು ಮಿತ್ರ

ಸೋಮವಾರ, 22 ಡಿಸೆಂಬರ್ 2025

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*

ಅಮೃತ ವಾಹಿನಿ.........

ಗೆದ್ದವರಷ್ಟೇ ಬದುಕಿನ ಪಾಠ ಹೇಳಬೇಕಿಲ್ಲ;
ಸೋತವರಿಂದಲೂ ಅನುಭವದ ಪಾಠ ಕಲಿಯಬಹುದು.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಕಾಣದಿದ್ದರೆ ಬೇಸರಿಕೆ, ಕಂಡರೆ ವಾಕರಿಕೆ

ನಿಮ್ಮ ಪತ್ರಗಳು

ಕೆನರಾ ಬ್ಯಾಂಕ್‌ನಲ್ಲಿ ಅಡವಿಟ್ಟ ಚಿನ್ನದ ತೂಕದಲ್ಲಿ ಗೋಲ್‌ಮಾಲ್!

ಮಾನ್ಯರೆ,

ಕೆನರಾ ಬ್ಯಾಂಕ್‌ನ ಹಿನಕಲ್ ಶಾಖೆಯಲ್ಲಿ ಬೆಳಕಿಗೆ ಬಂದಿರುವ ಗಿರವಿ ಇಟ್ಟ ಚಿನ್ನದಲ್ಲಿನ ತೂಕದ ವ್ಯತ್ಯಾಸವು, ಇದುವರೆಗೆ ವಿವಿಧ ಬ್ಯಾಂಕ್ ಹಾಗೂ ಇನ್ನಿತರೆ ಹಣಕಾಸು ಲೇವಾದೇವಿ ಸಂಸ್ಥೆಗಳಲ್ಲಿ ಚಿನ್ನಾಭರಣ ಗಿರವಿ ಇಟ್ಟು ಸಾಲ ಪಡೆದವರಲ್ಲಿ ಆತಂಕದ ಜೊತೆಗೆ ಆಘಾತ ಉಂಟು ಮಾಡಿದೆ. ಅಸಂಖ್ಯಾತ ಜನರು ಈ ರೀತಿ ಚಿನ್ನಾಭರಣ ಅಡವಿಟ್ಟು ಸಾಲ ಪಡೆದಿದ್ದಾರೆ. ಇದೆಲ್ಲಾ ನಂಬಿಕೆ ಮೇಲಿನ ವ್ಯವಹಾರ. ಇಂತಹ ನಂಬಿಕೆ ದ್ರೋಹವೆಸಗಿದರೆ, ಇಂತಹ ಹಣಕಾಸು ಸಂಸ್ಥೆಗಳು ಮುಂದೆ ಆರ್ಥಿಕ ವಹಿವಾಟು ನಡೆಸುವುದಾದರೂ ಹೇಗೆ?

ಅದರಲ್ಲೂ ರಾಷ್ಟ್ರೀಕೃತ ಬ್ಯಾಂಕ್ ಕೆನರಾ ಬ್ಯಾಂಕ್‌ನಲ್ಲೇ ಇಂತಹ ಪ್ರಕರಣ ಬೆಳಕಿಗೆ ಬಂದಿರುವುದು ಅತ್ಯಂತ ಆಘಾತಕಾರಿ ವಿಷಯ. ಕೂಡಲೇ ಬ್ಯಾಂಕ್‌ನ ಉನ್ನತ ಅಧಿಕಾರಿಗಳು ಇದರ ಬಗ್ಗೆ ತನಿಖೆ ನಡೆಸಿ, ಗ್ರಾಹಕರಿಗೆ ನ್ಯಾಯ ಕಲ್ಪಿಸಬೇಕು.

ಹಾಗೆಯೇ ಗ್ರಾಹಕರು ಸಹ ತಾವು ಅಡವಿಟ್ಟ ಚಿನ್ನದ ಗುಣಮಟ್ಟ ಹಾಗೂ ತೂಕವನ್ನು ತಕ್ಷಣವೇ ಖಾತರಿಪಡಿಸಿಕೊಳ್ಳುವುದು ಅವಶ್ಯ. ಏಕೆಂದರೆ ಚಿನ್ನದ ಬೆಲೆ ಗಗನಕ್ಕೇರುತ್ತಿದೆ. ಈಗ ಜನ ಚಿನ್ನ, ಭೂಮಿಯ ಮೇಲೆ ಹೂಡಿಕೆ ಮಾಡುವುದು ಹೆಚ್ಚಾಗಿದೆ. ಹಾಗಾಗಿ ನಮ್ಮ ಚಿನ್ನವನ್ನು ಸುರಕ್ಷಿತವಾಗಿ ಕಾಪಾಡಿಕೊಳ್ಳುವುದು ನಮ್ಮ ಕರ್ತವ್ಯವಾಗಿದೆ. ಪೊಲೀಸ್ ಇಲಾಖೆಯೂ ಕೂಡ ಇಂತಹ ಪ್ರಕರಣಗಳಲ್ಲಿ ಸಾರ್ವಜನಿಕರು ನೀಡುವ ದೂರನ್ನು ಕೂಡಲೇ ದಾಖಲಿಸಿಕೊಂಡು, ತನಿಖೆ ನಡೆಸಿ ತಪ್ಪಿತಸ್ಥರ ವಿರುದ್ಧ ಕಾನೂನು ಪ್ರಕಾರ ಕ್ರಮ ಕೈಗೊಳ್ಳಬೇಕಿದೆ.

–ನಾಗೇಂದ್ರ, ವಿಜಯನಗರ, ಮೈಸೂರು.

ಅನುಷ್ಠಾನ ಸಮಿತಿಗೇನಾಗಿದೆ?

ಮಾನ್ಯರೆ,

ಗೃಹಲಕ್ಷ್ಮಿ ಯೋಜನೆಯಡಿ ಕಳೆದ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಹಣ ಫಲಾನುಭವಿಗಳಿಗೆ ತಲುಪಿಲ್ಲ ಎಂಬುದನ್ನು ವಿಧಾನಸಭೆಯಲ್ಲಿ ಒಪ್ಪಿಕೊಂಡ ಸಚಿವೆ ಲಕ್ಷ್ಮೀ ಹೆಬ್ಬಾಳ್ಕರ್, ಈ ವಿಷಯದಲ್ಲಿ ಸದನಕ್ಕೆ ತಪ್ಪು ಮಾಹಿತಿ ನೀಡಿದ್ದಕ್ಕಾಗಿ ಕ್ಷಮೆ ಯಾಚಿಸಿದ್ದಾರೆ. ಇದು ತಪ್ಪು ಮಾಹಿತಿಯಲ್ಲ.... ಸುಳ್ಳು ಮಾಹಿತಿ! ಇದು ಕ್ಷಮಾರ್ಹವಲ್ಲ... ಅಕ್ಷಮ್ಯವೂ ಕೂಡ. ಏಕೆಂದರೆ.....

ಐದು ಗ್ಯಾರಂಟಿಗಳನ್ನು ಘೋಷಿಸುವ ಮೂಲಕ ರಾಜ್ಯದಲ್ಲಿ ಅಧಿಕಾರಕ್ಕೆ ಬಂದಿರುವ ಕಾಂಗ್ರೆಸ್ ಸರ್ಕಾರವು ಈ ಗ್ಯಾರಂಟಿ ಯೋಜನೆಗಳ ಸಮರ್ಪಕ ಅನುಷ್ಠಾನಕ್ಕಾಗಿ ಸಮಿತಿಯೊಂದನ್ನು ರಚಿಸಿದೆ. ಈ ಸಮಿತಿಗೆ ಮಾಜಿ ಸಚಿವ ಎಚ್.ಎಂ. ರೇವಣ್ಣ ಅವರನ್ನು ಕ್ಯಾಬಿನೆಟ್ ದರ್ಜೆಯ ಸ್ಥಾನಮಾನದೊಂದಿಗೆ ಅಧ್ಯಕ್ಷರನ್ನಾಗಿ ನೇಮಕ ಮಾಡಲಾಗಿದೆ. ಉಪಾಧ್ಯಕ್ಷರಾಗಿ ಮೆಹರೋಜ್ ಖಾನ್, ಡಾ.ಪುಷ್ಪಾ ಅಮರನಾಥ್, ಎಸ್.ಆರ್.ಪಾಟೀಲ್, ಸೂರಜ್ ಹೆಗ್ಡೆ ಅವರನ್ನು ನೇಮಕ ಮಾಡಲಾಗಿದೆ. ಅಲ್ಲದೆ ರಾಜ್ಯದ ಪ್ರತಿಯೊಂದು ಜಿಲ್ಲೆ, ತಾಲೂಕು, ಹೋಬಳಿ ಹಾಗೂ ಗ್ರಾಮ ಮಟ್ಟದಲ್ಲಿಯೂ ಸೈನಿಕರಂತಹ ಸಿಬ್ಬಂದಿಗಳಿದ್ದಾರೆ. ಈ ಅನುಷ್ಠಾನ ಸಮಿತಿ ನಿರ್ವಹಣೆಗೆ ವಾರ್ಷಿಕವಾಗಿ 16 ಕೋಟಿ ರೂ. ವೆಚ್ಚ ಮಾಡಲಾಗುತ್ತಿದೆ.

ಗೂಟದ ಕಾರಿನ ಈ ಘಟಾನುಘಟಿಗಳು ಸಮಿತಿಯ ಕಣ್ಣು ತಪ್ಪಿಸಿ ಗೃಹಲಕ್ಷ್ಮಿಯನ್ನು ಯಾಮಾರಿಸಲು ಹೇಗೆ ಸಾಧ್ಯವಾಯಿತು? ಈ ಅನುಷ್ಠಾನ ಸಮಿತಿಯವರ ಮೂಗುಗಳನ್ನು ಮುಚ್ಚಿ ಹಿಡಿದರೆ ಆಗಲಾದರೂ ಅವರ ಬಾಯಿ ತೆರೆಯಬಹುದು. ಇವರ ಕಿವಿ ಹಿಂಡುವವರಾರು? –ಪಿ.ಜೆ.ರಾಘವೇಂದ್ರ, ನ್ಯಾಯವಾದಿ, ಮೈಸೂರು.

ಕುಸ್ತಿಪಟುಗಳಿಗೆ ತರಬೇತಿ ಅಭಿನಂದನಾರ್ಹ

ಮಾನ್ಯರೆ,

ಚಳಿಗಾಲದ ಅಧಿವೇಶನದಲ್ಲಿ ಚುಕ್ಕಿ ಗುರುತಿನ ಪ್ರಶ್ನೆ ಮೇಲೆ ಮಾತನಾಡಿದ ಎಂಎಲ್ಸಿ ಮಂಜೇಗೌಡರು ದೇಸಿ ಕ್ರೀಡೆಯಾದ ಕುಸ್ತಿಗೆ ಸರ್ಕಾರದ ಬೆಂಬಲದ ಬಗ್ಗೆ, ಕುಸ್ತಿ ತರಬೇತಿ ಕೇಂದ್ರಗಳ ಬಗ್ಗೆ, ತರಬೇತಿದಾರರ ನೇಮಕ ಮಾಡುವುದರ ಬಗ್ಗೆ ಸರ್ಕಾರ ಕ್ರಮ ಕೈಗೊಳ್ಳಿ ಎಂದು ಕೇಳಿದ ಪ್ರಶ್ನೆಗೆ ಕ್ರೀಡಾ ಇಲಾಖೆಯನ್ನು ಹೊಂದಿರುವ ಮುಖ್ಯಮಂತ್ರಿ ಸಿದ್ದರಾಮಯ್ಯ ರಾಜ್ಯದಲ್ಲಿ 315 ಕುಸ್ತಿಪಟುಗಳಿಗೆ ಉಚಿತವಾಗಿ ನುರಿತ ಕುಸ್ತಿ ತರಬೇತಿದಾರರಿಂದ ವೈಜ್ಞಾನಿಕ ಕ್ರೀಡಾ ತರಬೇತಿ ನೀಡಲಾಗುತ್ತಿದೆ ಹಾಗೂ ರಾಜ್ಯದಲ್ಲಿ ಕ್ರೀಡಾ ಅಭಿವೃದ್ಧಿಗಾಗಿ ಏಳು ಕ್ರೀಡಾ ವಸತಿ ನಿಲಯಗಳ ಕುಸ್ತಿ ಕ್ರೀಡಾ ವಿಭಾಗಗಳನ್ನು ಆರಂಭಿಸಲಾಗುತ್ತದೆ. ಪ್ರತಿವರ್ಷ ರಾಜ್ಯಮಟ್ಟದ ಕುಸ್ತಿ ಸ್ಪರ್ಧೆಗಳನ್ನು ಆಯೋಜಿಸುವ ಮೂಲಕ ಕ್ರೀಡೆಯನ್ನು ಪ್ರೋತ್ಸಾಹಿಸಲು ಮುಂದಾಗಿರುವುದಾಗಿ ಘೋಷಿಸಿರುವುದು ಶ್ಲಾಘನೀಯ.

–ಪಿ.ಸಿ.ಕಂಗಾಣಿ ಸೋಮು, ಕ್ಯಾತಮಾರನಹಳ್ಳಿ, ಮೈಸೂರು.

ಮಸುಕಾಗುತ್ತಿರುವ ವೈವಾಹಿಕ ಸಂಬಂಧಗಳು

ಮಾನ್ಯರೆ,

ಸಮಾಜದಲ್ಲಿ ಕೌಟುಂಬಿಕ ಕಲಹಗಳಿಗೆ ಸಂಬಂಧಿಸಿದ ಅಪರಾಧಗಳು ದಿನೇ ದಿನೆ ಹೆಚ್ಚುತ್ತಿರುವುದು ಆತಂಕಕಾರಿಯಾದ ವಿಚಾರವಾಗಿದೆ. ಇದರ ಜೊತೆ ಜೊತೆಗೆ ಅನೈತಿಕ ಸಂಬಂಧಗಳಿಂದ ಉಂಟಾಗುತ್ತಿರುವ ಅಪರಾಧಗಳು ಹೆಚ್ಚಿನ ಪ್ರಮಾಣದಲ್ಲಿ ಸಂಭವಿಸುತ್ತಿವೆ. ಹೆಂಡತಿ ಕೊಲ್ಲಲು ಗಂಡನೇ ಸುಪಾರಿ ನೀಡುವುದು, ಗಂಡನನ್ನು ಕೊಲ್ಲಿಸಲು ಹೆಂಡತಿಯೇ ಸಂಚು ರೂಪಿಸುವುದು, ಪರಸಂಗದ ವ್ಯಾಮೋಹದಿಂದ ಮಮಕಾರವನ್ನು ಮರೆತು ಹೆತ್ತ ಮಕ್ಕಳನ್ನೇ ಕೊಲ್ಲುವುದು, ಇತ್ಯಾದಿ ಇತ್ಯಾದಿ. ಪೈಶಾಚಿಕ ಕೃತ್ಯಗಳು ದಿನ ಬೆಳಗಾದರೆ, ಎಲ್ಲಾದರೊಂದು ಕಡೆ ನಡೆಯುತ್ತಲೇ ಇರುತ್ತವೆ. ಗ್ರಾಮೀಣ ಪ್ರದೇಶಗಳು ಕೂಡ ಇದಕ್ಕೆ ಹೊರತಾಗಿಲ್ಲ. ವೈವಾಹಿಕ ಸಂಬಂಧಗಳು ಮಸುಕಾಗುತ್ತಿವೆ. ಮಾನವೀಯ ಸಂಬಂಧಗಳು ಅರ್ಥಹೀನವಾಗುತ್ತಿವೆ. ಇವಕ್ಕೆಲ್ಲಾ ಕೊನೆ ಎಂದು? –ಕೆ.ವಿ.ವಾಸು, ವಕೀಲರು–ನೋಟರಿ, ಮೈಸೂರು.

ಕಾಂಗ್ರೆಸ್ ಜಸ್ಟ್ ಮಿಸ್....

ಮಾನ್ಯರೆ,

ದ್ವೇಷ ಭಾಷಣ ಮತ್ತು ದ್ವೇಷ ಅಪರಾಧಗಳ ಪ್ರತಿಬಂಧಕ ಕಾನೂನನ್ನು ಕರ್ನಾಟಕ ಸರ್ಕಾರ ಜಾರಿಗೆ ತಂದು ಕಠಿಣ ಶಿಕ್ಷೆ ಮತ್ತು ದಂಡಗಳನ್ನು ಘೋಷಿಸಿರುವುದು ಕಾಂಗ್ರೆಸ್ ಸರಕಾರಕ್ಕೆ ತನ್ನ ಬೆನ್ನು ತನಗೆ ಕಾಣಿಸುತ್ತಿಲ್ಲ ಎಂಬುದರ ಸೂಚಕವಾಗಿದೆ ಅಥವಾ ತನ್ನ ಪಕ್ಷದವರೂ ಇನ್ನು ಮುಂದೆ ಸ್ವಲ್ಪ ನಾಜೂಕಾಗಿರಲಿ ಎಂಬ ಪರಿವರ್ತನೆಯೂ ಇರಬಹುದು. ಇತ್ತೀಚಿಗೆ ರಾಹುಲ್ ಗಾಂಧಿ ಮತ್ತು ಕಾಂಗ್ರೆಸ್ ಅಧ್ಯಕ್ಷ, ಹಿರಿಯ ಮುತ್ಸದ್ದಿ ಮಲ್ಲಿಕಾರ್ಜುನ ಖರ್ಗೆ ನೇತೃತ್ವದಲ್ಲಿಯೇ ಕಾಂಗ್ರೆಸ್ ದಂಡೇ ಪ್ರಧಾನಿ ನರೇಂದ್ರ ಮೋದಿಯವರನ್ನು ಹೂತು ಹಾಕಲು ಸಮಾಧಿ ತೋಡುವ ಪ್ರಹಸನ ಮಾಡಿದುದು ಕಡಿಮೆ ದ್ವೇಷವೇನಲ್ಲ. ಅದು ಕರ್ನಾಟಕದಲ್ಲಿ ಅದರಲ್ಲಿಯೂ ಈ ಶಾಸನ ಜಾರಿಗೆ ಬಂದ ಮೇಲೆ ಆಗಿದ್ದಿದ್ದರೆ ಚೆನ್ನಾಗಿತ್ತು. ಛೆ just ಮಿಸ್. –ದೊಡ್ಡಕಮರವಳ್ಳಿ ಸಿದ್ದಲಿಂಗಪ್ಪ, ಜೆ.ಪಿ.ನಗರ, ಮೈಸೂರು.



ಡಾ. ವಿ. ರಂಗನಾಥ್
ಲೇಖಕರು ಹಾಗೂ ನಿವೃತ್ತ ತಹಸೀಲ್ದಾರರು
ಮೊ: 94482 08746/ 97421 79000

ಚಿಂತನೆ

ಜೀವನದ ಅನಿವಾರ್ಯ ಅನಗತ್ಯ ವಸ್ತುಗಳು!

ಕಳೆದ ಹತ್ತಿಪ್ಪತ್ತು ವರ್ಷಗಳ ಅಂತರದಲ್ಲಿ ನಮ್ಮ ಜೀವನದಲ್ಲಿ ಹಲವು ಬದಲಾವಣೆಗಳು ಆಗಿರುವುದನ್ನು ಕಾಣಬಹುದಾಗಿದೆ. ಹಾಗೆ ನೋಡಿದರೆ ಇಂದು ನಮ್ಮ ಜನರ ಆರ್ಥಿಕ ಸ್ಥಿತಿ ಸುಧಾರಿಸಿದಂತೆ ಕಂಡುಬರುತ್ತದೆ. ರಸ್ತೆಗಳಲ್ಲಿ ವಾಹನಗಳ ಸಂಖ್ಯೆ ಅಧಿಕವಾಗುತ್ತಿದೆ. ಈ ಹಿಂದೆ ಅಲ್ಲೊಂದು ಇಲ್ಲೊಂದು ಕಾಣುತ್ತಿದ್ದ ಕಾರುಗಳು ಇಂದು ಸರತಿ ಸಾಲಿನಲ್ಲಿ ಸಾಗುತ್ತಿರುವುದು ಕಂಡುಬರುತ್ತಿದೆ. ನಾನು ಇತ್ತೀಚೆಗೆ ಒಂದು ಭಾನುವಾರ ಸಂಜೆ ಬೆಂಗಳೂರಿನಿಂದ ಮೈಸೂರಿಗೆ ಹೊರಟಾಗ ಕಂಡ ದೃಶ್ಯ ಆಶ್ಚರ್ಯ ಮೂಡಿಸಿತು. ಮಾರ್ಗದುದ್ದಕ್ಕೂ ಕಾರು... ಕಾರು... ಕಾರು...!


ಈಗ ಸಂಜೆ ಬೇಗ ಕತ್ತಲಾಗುತ್ತದೆ. ಬೆಂಗಳೂರು ಬಿಟ್ಟ ನಂತರ ಮೈಸೂರಿಗೆ ಸೇರುವವರೆಗೂ ಎದುರು ರಸ್ತೆಗೆ ಸೀರಿಯಲ್ ಸೆಟ್‌ನಿಂದ ಅಲಂಕಾರ ಮಾಡಿದ್ದಾರೇನೋ ಎಂಬಂತೆ ವಾಹನಗಳ ದೀಪಗಳು ಕಂಡುಬಂದವು. ಅದು ಒಂದು ಕ್ಷಣ ಅಥವಾ ಕೆಲವು ನಿಮಿಷಗಳಿಗೆ ಸೀಮಿತವಾಗಿರಲಿಲ್ಲ. ಇಡೀ ಎರಡು ಗಂಟೆ ಪೂರ್ತಿ ಅದೇ ದೃಶ್ಯ. ಹಾಗೆಯೇ ಮೈಸೂರಿಗೆ ಪ್ರವೇಶಿಸುವಾಗಲೂ ಬೆಂಗಳೂರಿಗೆ ತೆರಳುವ ವಾಹನಗಳಿಗೆ (ಅವು ಹೆಚ್ಚಿನ ಸಂಖ್ಯೆಯಲ್ಲಿ ಇರುವುದರಿಂದ) ಹೆಚ್ಚಿನ ಆದ್ಯತೆ ನೀಡಲಾಗುತ್ತಿತ್ತು. ಆಗಲೂ ಇಡೀ ರಸ್ತೆ ದೀಪಗಳ ಸರಮಾಲೆಯಾಗಿಯೇ ಕಂಡು ಬಂದಿತು. ಅಂದರೆ ವಾಹನಗಳ, ಅದರಲ್ಲೂ ಕಾರಿನ ಸಂಖ್ಯೆ ಜಾಸ್ತಿಯಾಗುತ್ತಿದೆ. ಅಂತೆಯೇ ಜನರಿಗೆ ಕೊಂಡುಕೊಳ್ಳುವ ಶಕ್ತಿ ಜಾಸ್ತಿಯಾದಂತೆ ಕಂಡುಬರುತ್ತಿದೆ. ಜನರ ಆರ್ಥಿಕ ಸ್ಥಿತಿ ಮೊದಲಿಗಿಂತಲೂ ಸುಧಾರಿಸಿದೆ. ಇದೊಂದು ಮಾಂತ್ರಿಕ ಜಾಲದಂತೆ ಕಂಡು ಬರುತ್ತದೆ.

ಆದರೆ ಇದು ವಾಸ್ತವವೇ, ನಿಜವಾಗಿಯೂ ಎಲ್ಲಾ ಜನರು ಶ್ರೀಮಂತರಾಗಿದ್ದಾರೆಯೇ ಎಂಬ ಪ್ರಶ್ನೆ ಮನಸ್ಸಿನಲ್ಲಿ ಮೂಡುತ್ತದೆ. ಕಾರುಗಳು, ದ್ವಿಚಕ್ರವಾಹನಗಳ ಸಂಖ್ಯೆಯನ್ನು ಕಂಡಾಗ ನಿಜ, ಆರ್ಥಿಕ ಸ್ಥಿತಿ ಉತ್ತಮಗೊಂಡಿದೆ ಎಂಬಂತೆ ಕಂಡುಬರುತ್ತದೆ. ಕೆಲವು ಮನೆಗಳಲ್ಲಿ ಇಬ್ಬರು, ಮೂವರು, ಅದಕ್ಕೂ ಹೆಚ್ಚಿದ್ದರೆ ನಾಲ್ಕಾರು ವಾಹನಗಳು ಇರುವುದನ್ನು ಕಾಣಬಹುದಾಗಿದೆ. ಈ ಹಿಂದೆ ರಸ್ತೆಗಳಲ್ಲೂ ವಾಹನಗಳ ಸಂಖ್ಯೆ ವಿರಳವಾಗಿತ್ತು. ಆದರೆ ಈಗ ಸಣ್ಣಪುಟ್ಟ ರಸ್ತೆಗಳಲ್ಲಿ ಕಾರುಗಳ ಕಾರುಬಾರು ಕಾಣಬಹುದಾಗಿದೆ. ಅಂದರೆ ಕೊಳ್ಳುವಿಕೆಗೆ ಇಂದು ಆದ್ಯತೆ ಸಿಗುತ್ತಿದೆ.

ಇದರ ಮತ್ತೊಂದು ಮಗ್ಗುಲನ್ನೂ ಇತ್ತೀಚೆಗೆ ನಾನು ಕಂಡೆ. ಇದೀಗ ಮೈಸೂರಿನಲ್ಲಿ ಹಾಗೂ ರಾಜ್ಯದಲ್ಲಿ ಮೈಕೊರೆಯುವ ಚಳಿ ಕಂಡುಬರುತ್ತಿದೆ. ಮನೆಯೊಳಗೆ ಕಂಬಳಿಗಳನ್ನು ಹೊದ್ದು ಮಲಗಿದರೂ ಚಳಿಯ ಪ್ರಭಾವ ಕಡಿಮೆಯಾಗುತ್ತಿಲ್ಲ. ಮೈಸೂರಿನ ಒಂದು ಸಾಮಾಜಿಕ ಕಳಕಳಿಯ ಟ್ರಸ್ಟ್, ರಾತ್ರಿ ವೇಳೆಯಲ್ಲಿ ಬೀದಿಯಲ್ಲಿ ಮಲಗಿರುವವರಿಗೆ ಹೊದಿಕೆ ಹೊದಿಸುವ ಒಂದು ಅಭಿಯಾನವನ್ನು ಕೆಲ ವರ್ಷಗಳಿಂದ ನಡೆಸಿಕೊಂಡು ಬರುತ್ತಿದೆ. ರಾತ್ರಿ ಹನ್ನೆರಡು ಗಂಟೆಯ ಸುಮಾರಿಗೆ ದ್ವಿಚಕ್ರ ವಾಹನಗಳಲ್ಲಿ ಹೊದಿಕೆಗಳೊಂದಿಗೆ ತೆರಳುವ ಯುವ ಪಡೆ, ಒಂದೊಂದು ದಿನ ಒಂದೊಂದು ಪ್ರದೇಶದಲ್ಲಿ ಮಧ್ಯರಾತ್ರಿಯಲ್ಲಿ ಫುಟ್‌ಪಾತಿನಲ್ಲಿ ಹೊದಿಕೆ ಇಲ್ಲದೆ ಮಲಗಿರುವವರನ್ನು ಗುರುತಿಸಿ, ಅವರ ನಿದ್ರೆಗೆ ಭಂಗವಾಗದಂತೆ ಅವರಿಗೆ ಹೊದಿಕೆ ಹೊದಿಸುತ್ತಿದ್ದಾರೆ. ಇದಕ್ಕೆ ಒಂದಷ್ಟು ದಾನಿಗಳು ತಮ್ಮ ಕೈಲಾದ ಹಣ ಸಹಾಯ ಮಾಡುತ್ತಾರೆ. ಹೀಗೆ ಹೊದಿಕೆ ಹೊದಿಸಲು ಹೋದಾಗ ಅಲ್ಲಿನ ದೃಶ್ಯವನ್ನು ಅವರು ಮೊಬೈಲ್‌ಗಳಲ್ಲಿ ಸೆರೆ ಹಿಡಿಯುತ್ತಾರೆ. ಅದರ ವೀಕ್ಷಣೆ ಸಂಕಟದಾಯಕ. ಇಷ್ಟು ಚಳಿ ಇದ್ದರೂ ಹೊದಿಕೆ, ಹಾಸಲು ಬಟ್ಟೆ ಇಲ್ಲದೆ ರಸ್ತೆ ಬದಿಯಲ್ಲಿ ಜನರು ಮಲಗಿರುವುದನ್ನು ಕಂಡಾಗ, ಇನ್ನೂ ಇಂತಹ ಜನರಿದ್ದಾರಲ್ಲಾ ಎನ್ನಿಸುತ್ತದೆ. ಕೆಲವರು ರಸ್ತೆ ಬದಿ ಸಿಗುವ ಪ್ಲಾಸ್ಟಿಕ್ ಹಾಳೆಗಳನ್ನು ಹೊದಿಕೆ ಮಾಡಿಕೊಂಡಿರುತ್ತಾರೆ. ಕೆಲವರು ಏನೂ ಇಲ್ಲದೆ ಮಲಗಿರುತ್ತಾರೆ. ಇದನ್ನು ಕಂಡಾಗ ನಮಗೆ ಬಡತನದ ಮತ್ತೊಂದು ಮುಖದ ದರ್ಶನವಾಗುತ್ತದೆ. ಸರ್ಕಾರಗಳು ಇಷ್ಟೆಲ್ಲಾ ಯೋಜನೆಗಳನ್ನು ಮಾಡಿ, ಕೋಟಿ ಕೋಟಿ ಹಣ ಖರ್ಚು ಮಾಡುತ್ತಿದ್ದರೂ ಈ ರೀತಿ ಅನಾಥರಾಗಿ ರಸ್ತೆ ಬದಿ ಮಲಗುವವರನ್ನು ಕಂಡಾಗ ನಮ್ಮ ವ್ಯವಸ್ಥೆಯ ಬಗ್ಗೆಯೇ ಜಿಗುಪ್ಸೆ ಮೂಡುತ್ತದೆ.

ಇರಲಿ. ಈಗ ನಾವು ಆರ್ಥಿಕವಾಗಿ ಸಬಲರಾಗುತ್ತಿರುವವರ ಜೀವನದತ್ತ ಒಮ್ಮೆ ಗಮನಹರಿಸಿ ನೋಡಬೇಕು. ಮಧ್ಯಮ ವರ್ಗ ಹಾಗೂ ಕೆಳ ಮಧ್ಯಮ ವರ್ಗದವರು ಎಂದು ಕರೆಸಿಕೊಳ್ಳುವವರು ಇಂದು ಪೈಪೋಟಿಯ ಮೇಲೆ ವಸ್ತುಗಳನ್ನು ಖರೀದಿಸಿ, ಸಂಗ್ರಹಿಸುತ್ತಿದ್ದಾರೆ. ಆಗಾಗ್ಗೆ ಅವರ ಮನೆಗಳಿಗೆ ಹೊಸಹೊಸ ವಸ್ತುಗಳು ಬರುತ್ತಲೇ ಇವೆ. ಆದರೆ ಇದರಲ್ಲಿ ಬಹುತೇಕ ಅನವಶ್ಯವಾದದ್ದು ಎಂಬುದೂ ಅಷ್ಟೇ ನಿಜ. ಈ ಹಿಂದೆ ಒಬ್ಬರು ಇಂತಹ ಹಲವು ಜನರ ಸಂದರ್ಶನ ಮಾಡಿದ್ದರು. ಅವರ ಮನೆಯಲ್ಲಿನ

> “ನಾವು ಆರ್ಥಿಕವಾಗಿ ಸಬಲರಾಗುತ್ತಿರುವವರ ಜೀವನದತ್ತ ಒಮ್ಮೆ ಗಮನಹರಿಸಿ ನೋಡಬೇಕು. ಮಧ್ಯಮ ವರ್ಗ ಹಾಗೂ ಕೆಳ ಮಧ್ಯಮ ವರ್ಗದವರು ಎಂದು ಕರೆಸಿಕೊಳ್ಳುವವರು ಇಂದು ಪೈಪೋಟಿಯ ಮೇಲೆ ವಸ್ತುಗಳನ್ನು ಖರೀದಿಸಿ, ಸಂಗ್ರಹಿಸುತ್ತಿದ್ದಾರೆ. ಆಗಾಗ್ಗೆ ಅವರ ಮನೆಗಳಿಗೆ ಹೊಸ–ಹೊಸ ವಸ್ತುಗಳು ಬರುತ್ತಲೇ ಇವೆ. ಆದರೆ ಇದರಲ್ಲಿ ಬಹುತೇಕ ಅನವಶ್ಯಕವಾದದ್ದು ಎಂಬುದೂ ಅಷ್ಟೇ ನಿಜ.



ವಸ್ತುಗಳ ಬಗ್ಗೆಯೇ ಆ ಸಂದರ್ಶನ ಕೇಂದ್ರೀಕೃತವಾಗಿತ್ತು. ಅವರ ಸಂದರ್ಶನ ಹೀಗಿತ್ತು: ಒಬ್ಬ ಯಜಮಾನರನ್ನು ಅವರು ಕೇಳುತ್ತಾರೆ; ನಿಮ್ಮ ಮನೆಯಲ್ಲಿ ವ್ಯಾಕ್ಯೂಮ್ ಕ್ಲೀನರ್ ಇದೆಯೇ. ಅದಕ್ಕೆ ಉತ್ತರ; ಹೌದು ಇದೆ. ಅದನ್ನು ಯಾವಾಗ ಖರೀದಿಸಿದ್ದು ಆಯಿತು ಎಂಟು, ಹತ್ತು ವರ್ಷಗಳು.

ಹಾಗಾದರೆ ಅದನ್ನು ನೀವು ಕೊನೆಯದಾಗಿ ಯಾವಾಗ ಉಪಯೋಗಿಸಿದಿರಿ ಎಂದರೆ. ಇಲ್ಲ ಮಹರಾಯರೇ, ನಾಲ್ಕೈದು ವರ್ಷಗಳ ಹಿಂದೆ ಮಗಳ ಮದುವೆಯಾಯಿತು. ಬಹುಶಃ ಆಗ ಅದನ್ನು ಉಪಯೋಗಿಸಿದ್ದು. ಹಾಗಾದರೆ ಅದು ಎಲ್ಲಿದೆ ಎಂದರೆ ಎಲ್ಲೋ ಅಟ್ಟದ ಮಾಳಿಗೆ, ಇಲ್ಲ ಶೆಡ್‌ನಲ್ಲಿ ಇರಬಹುದು ಎಂದರು. ಅದ್ಯೇಕೆ ಅದನ್ನು ನಿಯಮಿತವಾಗಿ ಉಪಯೋಗಿಸುವುದಿಲ್ಲ ಎಂದರೆ, ಅದು ಒಂದು ರೀತಿ ಕಿರಿಕಿರಿ. ಅದಕ್ಕೆ ಕರೆಂಟ್ ಬೇಕು, ಧೂಳು, ಕಸ ಸಂಗ್ರಹಿಸಲು ಬ್ಯಾಗ್ ಬೇಕು, ಅಲ್ಲದೆ ಅದನ್ನು ಉಪಯೋಗಿಸಲು ಸಾಕಷ್ಟು ಸಮಯವೂ ಬೇಕಾಗುತ್ತದೆ. ಆದ್ದರಿಂದ ಯಾವಾಗಲಾದರೂ ಒಮ್ಮೆ ಒಂದು ಸ್ಟೂಲ್ ಮೇಲೆ ನಿಂತು ಕಸಬರಿಗೆ ಯಿಂದ ಕ್ಲೀನ್ ಮಾಡುತ್ತೇನೆ. ಹಾಗಾಗಿ ಆ ಮೆಷಿನ್‌ನ ಅಗತ್ಯ ಕಂಡು ಬರುತ್ತಿಲ್ಲ. ಹಾಗಾದರೆ ಅದನ್ನು ಏಕೆ ಖರೀದಿಸಿದಿರಿ? ಎಂದರೆ, ಅಯ್ಯೋ, ಪತ್ನಿ, ಮಕ್ಕಳ ಕಾಟ. ಪಕ್ಕದ ಮನೆಯವರು ತಂದಿದ್ದಾರೆ, ನೀವು ತನ್ನಿ ಎಂಬ ಒತ್ತಾಯ. ಜೊತೆಗೆ ದೀಪಾವಳಿ ರೀಯಾಯಿತಿ ಬೇರೆ ಇತ್ತು. ಇರಲಿ ಮನೆಗೆ ಒಂದು ಎಂದು ತಂದೆವು. ಅದು ಒಣ ಪ್ರತಿಷ್ಠೆಗೆ ಮಾತ್ರ ಸೀಮಿತವಾಗಿದೆ ಎಂದರು. ಹಾಗಾದರೆ ಅದನ್ನು ನೀವು ಇಷ್ಟಪಟ್ಟು ತರಲಿಲ್ಲವೇ ಎಂದರೆ; ಇಲ್ಲ, ಮನೆಯವರ ಕಿರಿಕಿರಿ, ಸುಮ್ಮನೇ ಬಿದ್ದಿರಲಿ ಎಂದು ತಂದೆ. ತಂದ ಆರಂಭದಲ್ಲಿ ಅದನ್ನು ಉಪಯೋಗಿಸಲು ಮನೆಯವರೆಲ್ಲರ ನಡುವೆ ಪೈಪೋಟಿ ಇತ್ತು. ಉಪಯೋಗಿಸಲು ಅವಕಾಶಕ್ಕಾಗಿ ಜಗಳಗಳೂ ನಡೆಯುತ್ತಿತ್ತು. ಕ್ರಮೇಣ ಮನೆಯವರ ಆಸಕ್ತಿ ಕಡಿಮೆಯಾಯಿತು. ಈಗ ಅದೇ ಒಂದು ರೀತಿ ಕಸ ಇದ್ದಂತೆ ಆಗಿದೆ. ಹಾಗೆ ನೋಡಿದರೆ ಇಂದು ಬಹುಶಃ ಶೇ.80–90ರಷ್ಟು ಮನೆಗಳಲ್ಲಿ ಈ ಮೆಷಿನ್‌ಗೆ ಇದೇ ಕಥೆ ಆಗಿರುವಂತೆ ಕಂಡುಬರುತ್ತದೆ.

ಸಂದರ್ಶಕ ಮತ್ತೊಂದು ಮನೆಗೆ ಹೋದಾಗ ಅಲ್ಲಿ ವ್ಯಾಯಾಮ ಮಾಡುವ ಸೈಕಲ್ ಕಂಡರು. ಅದರ ಮೇಲೆ ಒಗೆದ ಬಟ್ಟೆಗಳನ್ನು ಒಣಗಿಸಲು ಹಾಕಲಾಗಿತ್ತು. ಸಂದರ್ಶಕ ಕೇಳಿದ; ನೀವು ಆ ಸೈಕಲ್ ಬಳಸಿ ಪ್ರತಿದಿನ ವ್ಯಾಯಾಮ ಮಾಡುತ್ತೀರಾ; ಇಲ್ಲ, ತಂದಾಗ ನಾಲ್ಕಾರು ದಿನ ಉಪಯೋಗಿಸಿದ್ದು ಬಿಟ್ಟರೆ ಅದು ಬಟ್ಟೆ ಒಣಗಿಸಲು ಉಪಯೋಗಕ್ಕೆ ಬರುತ್ತಿದೆ. ಬಟ್ಟೆ ತೆಗೆದು ನೋಡಿದರೆ ಅದು ಅನೇಕ ಭಾಗಗಳಲ್ಲಿ ರಸ್ಟ್ ಹಿಡಿದಿದ್ದು ಕಂಡು ಬಂದಿತು. ಮತ್ತೆ ವ್ಯಾಯಾಮ ಮಾಡುವುದಿಲ್ಲವೇ? ಎಂದರೆ. ಹೊರಗೆ ವಾಕಿಂಗ್ ಹೋಗುತ್ತೇನೆ. ಪುರುಸೊತ್ತಾದಾಗ ಜಿಮ್‌ಗೆ ಹೋಗುತ್ತೇನೆ ಎಂದರು. ಹಾಗಾದರೆ ಇದಕ್ಕೆ ಹಾಕಿದ ಹಣ ವ್ಯರ್ಥವಲ್ಲವೇ; ಇರಲಿ, ಬಿದ್ದಿರಲಿ ಬಿಡಿ. ಅದನ್ನು ಈಗ ಮಾರಿದರೆ ಯಾರೂ ಕೊಳ್ಳುವವರಿಲ್ಲ. ಅಲ್ಲದೆ ನಮ್ಮದು ಒಣ ಪ್ರತಿಷ್ಠೆ ಬೇರೆ. ಬೇರೆಯವರ ಮನೆಯಲ್ಲಿ ಇದ್ದ ಮೇಲೆ ನಮ್ಮ ಮನೆಯಲ್ಲಿ ಇಲ್ಲದಿದ್ದರೆ ಹೇಗೆ ಎಂದು ತಂದಿದ್ದೇವೆ ಅಷ್ಟೇ ಎಂದರು.

ಸಂದರ್ಶಕ ಮತ್ತೊಂದು ಮನೆಗೆ ಹೋದಾಗ ತರಕಾರಿ ಹೆಚ್ಚುವ, ಚಪಾತಿ ಮಾಡುವ ಮಿಷಿನನ್ನು ಕಂಡರು. ಅದರಲ್ಲಿ ಗೋಧಿಹಿಟ್ಟನ್ನು ಸುಲಭವಾಗಿ ಕಲೆಸಬಹುದು. ಹಾಗಾದರೆ ಮನೆಯೊಡತಿಗೆ ಬಹಳ ಅನುಕೂಲವಾಗಿದೆಯಲ್ಲವೇ ಎಂದರೆ; ಇಲ್ಲ, ಆರಂಭದಲ್ಲಿ ಇದರಿಂದಲೇ ಎಲ್ಲಾ ನಡೆಯುತ್ತಿತ್ತು. ಈಗ ಮನೆಗೆ ಅಡುಗೆ ಮಾಡಲು ಒಬ್ಬರು ಬರುತ್ತಾರೆ. ಅವರೇ ಅಡುಗೆ ಮಾಡಿ ಹಾಕುತ್ತಾರೆ. ಮತ್ತೂ ಬೇಜಾರು ಎಂದರೆ ಹೋಟೆಲ್ ಇದ್ದೇ ಇದೆಯಲ್ಲ ಎಂದರು. ಇಲ್ಲವೇ ಬೇಕಾದ ತಿಂಡಿಯನ್ನು ಆನ್‌ಲೈನ್‌ನಲ್ಲಿ ಆರ್ಡರ್ ಮಾಡುತ್ತೇವೆ. ತಕ್ಷಣ ಬರುತ್ತದೆ. ಆದ್ದರಿಂದ ಆ ಮಿಷಿನನ್ನು ನಾವು ಉಪಯೋಗಿಸುತ್ತಿಲ್ಲ ಎಂದರು.

ಮತ್ತೊಂದು ಮನೆಯಲ್ಲಿ ವಾರ್ಡ್‌ರೋಬ್‌ನಲ್ಲಿ ಮನೆಯೊಡೆಯನ ತರಹೇವಾರಿ ಸೂಟುಗಳಿರುವುದು ಕಂಡುಬಂದಿತು. ಹಾಗೆಯೇ ಅದಕ್ಕೆ ಎರಡು ಮೂರು ಪಟ್ಟು ಮನೆಯೊಡತಿಯ ಸೀರೆಗಳು. ಎಲ್ಲವೂ ಅತ್ಯಂತ ಬೆಲೆ ಬಾಳುವಂತಹು. ಇವುಗಳನ್ನು ಆಗಾಗ್ಗೆ ಉಪಯೋಗಿಸುತ್ತೀರಲ್ಲವೇ ಎಂದರೆ, ಇಲ್ಲಪ್ಪಾ, ಅವುಗಳ ಯಾವುದಾದರೂ ಮದುವೆ ಮುಂತಾದ ಅದ್ಧೂರಿ ಸಮಾರಂಭಗಳಿಗೆ ಹೋಗುವಾಗ ಉಪಯೋಗಿಸುತ್ತೇವೆ ಅಷ್ಟೆ. ಅವನ್ನು ನಿಯಮಿತವಾಗಿ ಬಳಸಬಾರದು ಎಂದರೆ; ಅವೆಲ್ಲಾ ಹಳೆಯವು, ಔಟ್‌ಡೇಟೆಡ್. ಅವನ್ನು ಉಪಯೋಗಿಸಿ ದರೆ ನೋಡಿದವರು ನಗುತ್ತಾರೆ. ಹಾಗಾಗಿ ಉಪಯೋಗಿಸುವುದಿಲ್ಲ. ಮತ್ತೆ ಯಾರಿಗಾದರೂ ಕೊಟ್ಟು ಬಿಡಬಾರದೇ ಎಂದರೆ; ಇವೆಲ್ಲಾ ಬಹಳ ಬೆಲೆ ಬಾಳುವಂತಹುದು. ಹಾಗೆಲ್ಲಾ ಯಾರಿಗೋ ಕೊಡಲಾಗುವುದಿಲ್ಲ. ಅಲ್ಲದೆ ಹಾಗೆ ಕೊಟ್ಟುಬಿಟ್ಟರೆ ನಮ್ಮ ವಾರ್ಡ್‌ರೋಬ್ ಖಾಲಿ ಕಾಣುತ್ತದೆ. ಅದು ನಮಗೆ ಇಷ್ಟವಿಲ್ಲ ಎಂದರು. ಅಂದರೆ ಇಂದು ಅದರ ಉಪಯೋಗ ಒಣ ಪ್ರತಿಷ್ಠೆಗೆ ಸೀಮಿತವಾಗಿದೆ.

ಇನ್ನೊಂದು ಮನೆಯಲ್ಲಿ ಶೋಕೇಸ್‌ನಲ್ಲಿ ತರತರಹದ ಕಪ್, ಸಾಸರ್, ಪ್ಲೇಟ್‌ಗಳು ಇದ್ದವು. ಎಲ್ಲವೂ ಬೆಲೆಬಾಳುವಂತಹುದು. ಹಾಗಾದರೆ ನಿಮ್ಮ ಮನೆಯಲ್ಲಿ ಬಹಳ ಜನ ಇದ್ದೀರಿ ಎಂದು ಕಾಣುತ್ತದೆ. ಆಗಾಗ್ಗೆ ನಿಮ್ಮಲ್ಲಿ ಪಾರ್ಟಿಗಳು ನಡೆಯುತ್ತಿರುತ್ತವೆ ಎನ್ನಿಸುತ್ತದೆ ಎಂದು ಕೇಳಿದರೆ; ಈಗ ಮನೆಯಲ್ಲಿರುವವರು ನಾನು ಮತ್ತು ನನ್ನ ಪತ್ನಿ ಮಾತ್ರ. ಮಕ್ಕಳೆಲ್ಲಾ ಮದುವೆಯಾಗಿ ಬೇರೆ ಬೇರೆ ಕಡೆ ನೆಲೆಸಿದ್ದಾರೆ. ಹಾಗಾಗಿ ಇವುಗಳ ಶೋಕೇಸ್‌ನಲ್ಲಿ ಜೋಡಿಸಿದ್ದೇವೆ. ಬಂದವರು ನೋಡಬೇಡವೇ? ಅವು ಯಾವುದನ್ನೂ ನಾವು ಈಗ ಉಪಯೋಗಿಸುವುದಿಲ್ಲ ಎಂದರು.

ಇವೆಲ್ಲಾ ಕೆಲವು ಉದಾಹರಣೆಗಳು ಮಾತ್ರ. ಇಂತಹ ದೃಶ್ಯ ಪ್ರತಿ ಮನೆಮನೆಗಳಲ್ಲಿ ಕಂಡುಬರುತ್ತವೆ. ಈ ಹಿಂದೆ ಮದುವೆ ಮನೆಗಳಲ್ಲಿ ಮದುಮಕ್ಕಳಿಗೆ ಮುಂದಿನ ಸಂಸಾರಕ್ಕೆ ಉಪಯೋಗಕ್ಕೆ ಬರಲಿ ಎಂದು ಪಾತ್ರೆಗಳು, ಗೃಹೋಪಯೋಗಿ ಪದಾರ್ಥಗಳನ್ನು ಕೊಡುತ್ತಿದ್ದರು. ಅವೆಲ್ಲಾ ಅಟ್ಟಕ್ಕೇರಿವೆ. ಕೆಲವೊಂದರ ಗಿಫ್ಟ್ ಕವರ್ ಸಹ ತೆರೆದಿರುವುದಿಲ್ಲ. ಹಾಗೆಯೇ ದೇವರ ಫೋಟೋಗಳು ಇತ್ಯಾದಿ ಯಾವುದೂ ಉಪಯೋಗಕ್ಕೆ ಬರುವುದಿಲ್ಲ. ಆದರೆ, ಯಾರಿಗೂ ಕೊಡಲು ಮನಸ್ಸಿಲ್ಲ. ಅಟ್ಟದ ಮೇಲೆ ಹತ್ತಿ ಹತ್ತಾರು ವರ್ಷಗಳೇ ಕಳೆದಿವೆ. ಅಲ್ಲಿ ಏನಿದೆ ಎಂಬುದೇ ಗೊತ್ತಿಲ್ಲ ಎಂಬ ಉತ್ತರ ಸಾಧಾರಣವಾಗಿ ಎಲ್ಲೆಡೆ ಕಂಡುಬರುತ್ತದೆ. ಮನೆಯಲ್ಲಿ ಎರಡು–ಮೂರು ಕಾರುಗಳಿವೆ. ಮಕ್ಕಳು ಬೇರೆ ಊರಿನಲ್ಲಿ ಇದ್ದಾರೆ. ಮನೆಯೊಡೆಯನಿಗೆ ವಯಸ್ಸಾಗಿದೆ. ಈಗ ಕಾರು ಓಡಿಸಲು ಆಗುವುದಿಲ್ಲ. ಆದರೂ ಅವುಗಳ ಯಾರಿಗೂ ಕೊಡಲು ಮನಸ್ಸಿಲ್ಲ. ಆಗಾಗ್ಗೆ ಒರೆಸಿಡುವುದೇ ಕೆಲಸವಾಗಿದೆ. ಇದೆಲ್ಲವನ್ನು ನೋಡಿ, ಕೇಳಿದ ಬಳಿಕ ಫುಟ್‌ಪಾತ್ ಮೇಲೆ ಹೊದಿಕೆ ಇಲ್ಲದೆ ಮಲಗಿದವರನ್ನು ಕಂಡಾಗ ಮನಸ್ಸು ಗಲಿಬಿಲಿಗೊಳ್ಳುತ್ತದೆ. ಆ ಟ್ರಸ್ಟ್‌ನ ಹುಡುಗರು ಮತ್ತಷ್ಟು ಜನರು ಹಣ ಸಹಾಯ ಮಾಡಿದರೆ ಇನ್ನಷ್ಟು ಜನರಿಗೆ ಹೊದಿಕೆ ಮತ್ತಿತರ ವಸ್ತು ಕೊಡಬಹುದು ಎನ್ನುತ್ತಾರೆ. ಆದರೆ ಕೊಡುವ ಮನಸ್ಸು ಕಡಿಮೆಯಾಗುತ್ತಿದೆ ಎನ್ನಿಸುತ್ತದೆ.

ಮೈಸೂರು ಜಿಲ್ಲಾ ಫೋಟೋಗ್ರಾಫರ್ಸ್ ಮತ್ತು ವೀಡಿಯೋಗ್ರಾಫರ್ಸ್ ಅಸೋಸಿಯೇಷನ್‌ನ ರಜತ ಮಹೋತ್ಸವ

ಕ್ರೀಡಾಕೂಟಕ್ಕೆ ಶಾಸಕರು, ಮಾಜಿ ಶಾಸಕರಿಂದ ಚಾಲನೆ

ಮೈಸೂರು, ಡಿ.21(ಜಿಎ)–ಮೈಸೂರು ಜಿಲ್ಲಾ ಫೋಟೋಗ್ರಾಫರ್ಸ್ ಅಂಡ್ ವಿಡಿಯೋಗ್ರಾಫರ್ಸ್ ಅಸೋಸಿಯೇಷನ್‌ನ ರಜತ ಮಹೋತ್ಸವದ ಅಂಗವಾಗಿ ಮೈಸೂರಿನ ಪೆವಿಲಿಯನ್ ಮೈದಾನದಲ್ಲಿ ಆಯೋಜಿಸಿದ್ದ ಕ್ರೀಡಾಕೂಟಕ್ಕೆ ಶಾಸಕರಾದ ಕೆ.ಹರೀಶ್‌ಗೌಡ, ಟಿ.ಎಸ್.ಶ್ರೀವತ್ಸ ಹಾಗೂ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು.

ನಂತರ ಮಾಜಿ ಶಾಸಕ ಎಂ.ಕೆ. ಸೋಮಶೇಖರ್ ಮಾತನಾಡಿ, ವೈಯಕ್ತಿಕವಾಗಿ ಸಂತೋಷವನ್ನು ಕಾಣದಿದ್ದರೂ ಗ್ರಾಹಕರೆಲ್ಲರ ಮುಖದಲ್ಲಿ ಸದಾ ನಗುವನ್ನು ತರಿಸುವಂತಹ ಕೆಲಸವನ್ನು ವೃತ್ತಿ ಮೂಲಕ ಛಾಯಾಗ್ರಾಹಕರು ಮಾಡುತ್ತಾರೆ ಎಂದು ತಿಳಿಸಿದರು.

ಛಾಯಾಗ್ರಾಹಕರು ಪ್ರತಿನಿತ್ಯವೂ ಕ್ಯಾಮರಾಗೆ ನಮಸ್ಕರಿಸಿ ದಿನವನ್ನು ಪ್ರಾರಂಭಿಸುತ್ತಾರೆ. ವೃತ್ತಿಯನ್ನು ಸದಾ ಗೌರವಿಸುತ್ತಾ ಗ್ರಾಹಕರಿಗೆ ಉತ್ತಮ ಸೇವೆ ಕೊಡುತ್ತ ವಿಶ್ರಾಂತಿ ಪಡೆಯದೆ ಹಗಲು–ರಾತ್ರಿ ಕ್ಯಾಮರಾದ ಬ್ಯಾಗನ್ನು ಹೊತ್ತು ತೆರಳುತ್ತಾರೆ. ಇಂತಹ ಬಿಡುವಿಲ್ಲದ ವೃತ್ತಿಯಲ್ಲಿಯೂ ವೈಯಕ್ತಿಕವಾಗಿ ಸಂತೋಷವನ್ನು ಕಾಣದಿದ್ದರೂ ಗ್ರಾಹಕರೆಲ್ಲರ ಮುಖದಲ್ಲಿ ಸದಾ ನಗುವನ್ನು ತರಿಸುವಂತಹ ಕೆಲಸ ಛಾಯಾಗ್ರಾಹಕರು ತಮ್ಮ ವೃತ್ತಿ ಮೂಲಕ ಮಾಡುತ್ತಾರೆ. ಆದರೆ ವೈಯಕ್ತಿಕ ಬದುಕುಗಳು ತುಂಬಾ ಸ್ಪರ್ಧೆಯಿಂದ ಕೂಡಿದೆ ಎಂದರು.

ವೈಜ್ಞಾನಿಕವಾಗಿ ಬೆಳೆಯುತ್ತಿದ್ದಂತೆ ಛಾಯಾಗ್ರಹಣ ಕ್ಷೇತ್ರವು ತಂತ್ರಜ್ಞಾನವನ್ನು ಹೆಚ್ಚು ಅವಲಂಬಿಸುತ್ತಿದೆ. ಇಂತಹ ಸಂದರ್ಭದಲ್ಲಿ ಹೊಸ ಹೊಸ ತಂತ್ರಜ್ಞಾನಕ್ಕೆ ಆಯಾಯ ಕಾಲಘಟ್ಟಕ್ಕೆ ಅನುಕೂಲವಾಗುವಂತಹ ಹೊಸ ಹೊಸ ಕ್ಯಾಮರಾಗಳನ್ನು ತೆಗೆದುಕೊಳ್ಳಬೇಕಿದೆ. ಇವತ್ತಿನ ಪೈಪೋಟಿಯಲ್ಲಿ ಉತ್ತಮ ಕ್ಯಾಮರಗಳ ಅಗತ್ಯವಿದ್ದು ಇಂದಿನ ದಿನಗಳಲ್ಲಿ ಕ್ಯಾಮರಾದ ಬೆಲೆ ಬಹಳಷ್ಟು ಹೆಚ್ಚಾಗಿದೆ ಎಂದು ತಿಳಿಸಿದರು.

ತಮ್ಮ ಕುಟುಂಬಸ್ಥರ ಮುಖದಲ್ಲಿ ನಗು ತರಿಸುವ ದೃಷ್ಟಿಯಿಂದ ಈ ರೀತಿ ಕುಟುಂಬ ಕ್ರೀಡಾಕೂಟವನ್ನು ಆಯೋಜಿಸಿ ಉಚಿತ ಆರೋಗ್ಯ ತಪಾಸಣೆಯನ್ನು ಏರ್ಪಡಿಸಿ, ಛಾಯಾಗ್ರಹಕರ ಕುಟುಂಬದವರೆಲ್ಲರನ್ನು ಒಟ್ಟಿಗೆ ಒಂದೆಡೆ ಸೇರಿಸುವಂತಹ ಒಂದು ಉತ್ತಮ ವೇದಿಕೆಯನ್ನು ಮಾಡಿದ್ದಾರೆ. ಇದು ಶ್ಲಾಘನೀಯ ಎಂದರು.

ಈ ಸಂದರ್ಭದಲ್ಲಿ ಸಂಘದ ಅಧ್ಯಕ್ಷ ಡಿ.ವಿಜಯ್, ಉಪಾಧ್ಯಕ್ಷ ರಾಜಗೋಪಾಲ್, ಕಾರ್ಯದರ್ಶಿ ಧನಂಜಯ, ಸಹ ಕಾರ್ಯದರ್ಶಿ ಉಮಾಶಂಕರ್, ಖಜಾಂಚಿ ಉಮೇಶ್, ಪಿಆರ್‌ಓ ಸಿದ್ದಲಿಂಗ ಪ್ರಸಾದ್, ನಿರ್ದೇಶಕರಾದ ಲೋಕೇಶ್, ಮಂಜುನಾಥ್, ನಾರಾಯಣ್, ಬೆಳಕು ಮಂಜು, ವರ್ಗೀಸ್, ನಾಗರಾಜು ನಾಯ್ಡು, ಮಾಜಿ ನಿರ್ದೇಶಕ ಸುದರ್ಶನ್ ಮತ್ತಿತರರು ಉಪಸ್ಥಿತರಿದ್ದರು.



ಮೈಸೂರು ಜಿಲ್ಲಾ ಫೋಟೋಗ್ರಾಫರ್ಸ್ ಮತ್ತು ವಿಡೀಯೋಗ್ರಾಫರ್ಸ್ ಅಸೋಸಿಯೇಷನ್‌ನ ರಜತ ಮಹೋತ್ಸವದ ಅಂಗವಾಗಿ ಪೆವಿಲಿಯನ್ ಮೈದಾನದಲ್ಲಿ ಆಯೋಜಿಸಿದ್ದ ಕ್ರೀಡಾಕೂಟಕ್ಕೆ ಗಣ್ಯರು ಚಾಲನೆ ನೀಡಿದರು.

Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com

ಮೈಸೂರು ಮಿತ್ರ ಸೋಮವಾರ 22 ಡಿಸೆಂಬರ್ 2025

ಅಂಗಾಂಗ ದಾನದ ಮೂಲಕ ಸಾವಿನಲ್ಲೂ ಆಟೋ ಚಾಲಕನ ಸಾರ್ಥಕತೆ!

ಇವರ ಇಡೀ ಕುಟುಂಬಕ್ಕೆ ಶಾಪವಾದ ಮೆದುಳು ಪಾರ್ಶ್ವವಾಯು!!

ಮೈಸೂರು, ಡಿ.21(ಎಂಟಿವೈ)– ಬ್ರೈನ್‌ಸ್ಟ್ರೋಕ್ (ಮೆದುಳು ಪಾರ್ಶ್ವವಾಯು)ನಿಂದ ಮೃತಪಟ್ಟ ಆಟೋ ಚಾಲಕರೊಬ್ಬರು ಅಂಗಾಂಗ ದಾನ ಮಾಡುವ ಮೂಲಕ ತಮ್ಮ ಸಾವಲ್ಲೂ ಸಾರ್ಥಕತೆ ಮೆರೆದಿದ್ದಾರೆ.



ಅಂಗಾಂಗ ದಾನ ಮಾಡಿ ಸಾರ್ಥಕತೆ ಮೆರೆದ ರಾಜೇಶ್

ಮೈಸೂರು ತಾಲೂಕಿನ ಪರಸಯ್ಯನಹುಂಡಿ ಗ್ರಾಮದ ನಿವಾಸಿಯಾದ ರಾಜೇಶ್(28), ಹೈಬಿಪಿಯಿಂದಾಗಿ ಮೆದುಳು ಸ್ಟ್ರೋಕ್‌ಗೆ ತುತ್ತಾಗಿದ್ದರು. ಕಳೆದ ಆರು ದಿನಗಳಿಂದ ಆಸ್ಪತ್ರೆಯಲ್ಲಿ ಚಿಕಿತ್ಸೆ ಪಡೆಯುತ್ತಿದ್ದರು. ಇವರು ಬದುಕುವ ಸಾಧ್ಯತೆ ಕ್ಷೀಣಿಸಿದಾಗ ಗೆಳೆಯನ ಅಂಗಾಂಗ ದಾನ ಮಾಡಲು ರಾಜೇಶ್ ಅವರ ಸ್ನೇಹಿತರು ನಿರ್ಧರಿಸಿದ್ದರು. ಅದರಂತೆ ಅವರ ಸಾವಿನ ಬಳಿಕ ವೈದ್ಯಕೀಯ ವಿಧಿ–ವಿಧಾನದಂತೆ ದೇಹದ ಅಂಗಾಂಗ ಪ್ರಕ್ರಿಯೆಗಳನ್ನು ಪೂರೈಸಿ, ಹೃದಯ ಕವಾಟ, ಎರಡು ಕಿಡ್ನಿ, ಯಕೃತ್(ಲಿವರ್), ಕಾರ್ನಿಯಾ ದಾನ ಮಾಡಿ, ಸಂಕಷ್ಟದಲ್ಲಿರುವ ರೋಗಿಗಳಿಗೆ ನೆರವಾಗಿದ್ದಾರೆ. ಕೊನೆಗೆ, ರಾಜೇಶರ ಪಾರ್ಥಿವ ಶರೀರಕ್ಕೆ ಆಸ್ಪತ್ರೆಯ ಸಿಬ್ಬಂದಿ ಗೌರವ ನಮನ ಸಲ್ಲಿಸಿ, ದೇಹವನ್ನು ಸಂಬಂಧಿಕರು ಹಾಗೂ ಸ್ನೇಹಿತರ ಸುಪರ್ದಿಗೆ ಒಪ್ಪಿಸಿದ್ದಾರೆ.

ಘಟನೆ ವಿವರ: ತಂದೆ, ತಾಯಿಯ ಕಳೆದುಕೊಂಡು ಒಂಟಿಯಾಗಿ ಪರಸಯ್ಯನಹುಂಡಿ ಗ್ರಾಮದಲ್ಲಿ ನೆಲೆಸಿದ್ದ ರಾಜೇಶ್ ಆಟೋ ಓಡಿಸಿಕೊಂಡು ಜೀವನ ಸಾಗಿಸುತ್ತಿದ್ದರು. ಈ ಮಧ್ಯೆ ರಾಜೇಶ್ ಅವರು, ಡಿ.14ರಂದು ಸಂಜೆ ಹೈ–ಬಿಪಿಯಿಂದ ತೀವ್ರ ಅನಾರೋಗ್ಯಕ್ಕೀಡಾಗಿದ್ದರು. ಅವರನ್ನು ಸ್ನೇಹಿತರು ಮೊದಲು ಮೈಸೂರಿನ ಅರವಿಂದ ಆಸ್ಪತ್ರೆಗೆ ದಾಖಲಿಸಿದ್ದಾರೆ. ಚಿಕಿತ್ಸೆ ನೀಡಿದರೂ ಅಲ್ಲಿ ಚೇತರಿಸಿಕೊಳ್ಳದೆ ಇದ್ದಾಗ, ಮರುದಿನ (ಡಿ.15) ವಿಸ್ತಾರ ಆಸ್ಪತ್ರೆಗೆ ದಾಖಲಿಸಿದ್ದಾರೆ. ಅಲ್ಲಿ 2 ದಿನ ಚಿಕಿತ್ಸೆ ಮುಂದುವರೆಸಿಯೂ ಆರೋಗ್ಯದಲ್ಲಿ ಸುಧಾರಣೆ ಆಗಿಲ್ಲ. ಅಲ್ಲದೆ, ಮೆದುಳು ಸ್ಟ್ರೋಕ್ ಸೂಕ್ಷ್ಮತೆ ಅರಿತು ಕೂಡಲೇ (ಡಿ.17ರಂದು) ಅಪೋಲೋ ಆಸ್ಪತ್ರೆಗೆ ಸೇರಿಸಲಾಗಿದೆ. ಮೆದುಳು ನಿಷ್ಕ್ರಿಯಗೊಳ್ಳುತ್ತಿರುವ ಬಗ್ಗೆ ಸ್ನೇಹಿತರಿಗೆ ವಿವರಿಸಿದ ವೈದ್ಯರು, ರಾಜೇಶ್ ಬದುಕುಳಿಯುವುದು ಸಾಧ್ಯವೇ ಇಲ್ಲ ಎಂದು ಮಾಹಿತಿ ನೀಡಿದ್ದಾರೆ. ಸ್ನೇಹಿತನನ್ನು ಕಳೆದುಕೊಳ್ಳುವ ಆತಂಕದಲ್ಲಿದ್ದ ರಾಜೇಶ್ ಸ್ನೇಹಿತರು ಆತನ ಅಂಗಾಂಗಗಳಾದರೂ ಕೆಲವರಲ್ಲಿ ಜೀವಂತವಾಗಿರಲೆಂದು ನಿರ್ಧರಿಸಿ, ಅಂಗಾಂಗ ದಾನ ಮಾಡಲು ತೀರ್ಮಾನಿಸಿದ್ದಾರೆ. ಇದಕ್ಕೆ ಒಪ್ಪಿದ ಆಸ್ಪತ್ರೆಯ ವೈದ್ಯರು ಅಂಗಾಂಗ ದಾನದ ಪ್ರಕ್ರಿಯೆ ಪೂರೈಸಿ, ಇಂದು ದೇಹವನ್ನು ಸಂಬಂಧಿಕರು ಹಾಗೂ ಸ್ನೇಹಿತರಿಗೆ ಒಪ್ಪಿಸಿದ್ದಾರೆ.

ಬೆನ್ನಿಗೆ ನಿಂತ ಸ್ನೇಹಿತರು: ತಂದೆ, ತಾಯಿಯನ್ನು ಕಳೆದುಕೊಂಡು ಒಂಟಿಯಾಗಿ ಜೀವನ ನಡೆಸುತ್ತಿದ್ದ ರಾಜೇಶ್ ಗ್ರಾಮಸ್ಥರು, ಸ್ನೇಹಿತರೊಂದಿಗೆ ಉತ್ತಮ ಒಡನಾಟ ಹೊಂದಿದ್ದರು. ಸ್ನೇಹಿತರು ಮತ್ತು ಗ್ರಾಮಸ್ಥರೇ ಸೇರಿ ಹಣಕಾಸು ಹೊಂದಿಸಿ, ಆತನ ಜೀವ ಉಳಿಸಿಕೊಳ್ಳಲು ಯತ್ನಿಸಿದ್ದಾರೆ. ಈಗಲೂ ಆಸ್ಪತ್ರೆ ವೆಚ್ಚವನ್ನು ಸ್ನೇಹಿತರೇ ಭರಿಸಿದ್ದಾರೆ.

ಕಂಬನಿ ಮಿಡಿದ ಸ್ನೇಹಿತರು, ಗ್ರಾಮಸ್ಥರು: ಆಟೋ ಚಾಲಕ ರಾಜೇಶ್ ಸಾವನ್ನಪ್ಪಿರುವ ವಿಷಯ ಕೇಳಿ ಆತನ ಸ್ನೇಹಿತರು ಕಂಬನಿ ಮಿಡಿದಿದ್ದಾರೆ. ರಾಜೇಶ್ ಅವರ ಅಂತಿಮ ದರ್ಶನ ಪಡೆಯಲು ಪರಸಯ್ಯನಹುಂಡಿ ಗ್ರಾಮಸ್ಥರು ಅಪೋಲೋ ಆಸ್ಪತ್ರೆ ಬಳಿ ಸಾಕಷ್ಟು ಸಂಖ್ಯೆಯಲ್ಲಿ ಜಮಾಯಿಸಿದ್ದರು. ಅಲ್ಲದೆ, ದೇಹವನ್ನು ಆಸ್ಪತ್ರೆಯಿಂದ ಚಾಮುಂಡಿಬೆಟ್ಟದ ತಪ್ಪಲಿನ ವಿದ್ಯುತ್ ಚಿತಾಗಾರದವರೆಗೂ ಮೆರವಣಿಗೆಯಲ್ಲಿ ಕೊಂಡೊಯ್ದು ಅಂತ್ಯಸಂಸ್ಕಾರ ನಡೆಸಿದರು. ಈ ವೇಳೆ ರಾಜೇಶ್ ಅವರ ಕೆಲ ಸಂಬಂಧಿಕರು ಉಪಸ್ಥಿತರಿದ್ದರು.

ಬ್ರೈನ್ ಸ್ಟ್ರೋಕ್‌ಗೆ ಒಂದೇ ಕುಟುಂಬದ ನಾಲ್ವರು ಬಲಿ

ರಾಜೇಶ್ ಕುಟುಂಬದ ನಾಲ್ವರು ಬ್ರೇನ್ ಸ್ಟ್ರೋಕ್‌ನಿಂದಲೇ ಮೃತಪಟ್ಟಿರುವುದು ಗ್ರಾಮಸ್ಥರಲ್ಲಿ ಆಘಾತ ಉಂಟುಮಾಡಿದೆ. ರಾಜೇಶ್ ಅವರ ತಂದೆ ಕನಕಗಿರಿಯವರಾಗಿದ್ದು, ತಾಯಿ ಸರಗೂರು ಮೂಲದವರು. ಕಳೆದ 25 ವರ್ಷದಿಂದ ಪರಸಯ್ಯನಹುಂಡಿಯಲ್ಲಿ ನೆಲೆಸಿದ್ದರು. 15 ವರ್ಷದ ಹಿಂದೆ ತಂದೆ, 2024ರಲ್ಲಿ ಅಕ್ಕ, 9 ತಿಂಗಳ ಹಿಂದಷ್ಟೇ ತಾಯಿ, ಮತ್ತೆ ಈಗ ರಾಜೇಶ್ ಕೂಡ ಬ್ರೈನ್ ಸ್ಟ್ರೋಕ್‌ನಿಂದ ಮೃತಪಟ್ಟಿದ್ದಾರೆ.

ಬಿಜೆಪಿಗೆ ದೇಶ ಒಗ್ಗೂಡಿಸುವ ಆಶಯ, ಕಾಂಗ್ರೆಸ್‌ಗೆ ಸ್ವಂತ ಲಾಭದ ಚಿಂತೆ

ಮೈಸೂರು ಗ್ರಾಮಾಂತರ ಬಿಜೆಪಿ ಪದಾಧಿಕಾರಿಗಳ ಪದಗ್ರಹಣದಲ್ಲಿ ಸಂಸದ ಯದುವೀರ್ ಒಡೆಯರ್



ಮೈಸೂರಿನ ನೇರಂಬಳ್ಳಿ ಸಾವಿತ್ರಮ್ಮ ಕಲ್ಯಾಣಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಮೈಸೂರು ಗ್ರಾಮಾಂತರ ಬಿಜೆಪಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭದಲ್ಲಿ ನೂತನ ಪದಾಧಿಕಾರಿಗಳಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನೇಮಕಾತಿ ಪತ್ರವನ್ನು ವಿತರಿಸಿದರು.

ಮೈಸೂರು, ಡಿ.21(ಜಿಎ)–ದೇಶವನ್ನು ಒಗ್ಗೂಡಿಸಬೇಕು ಎಂಬುದು ಬಿಜೆಪಿಯ ಆಶಯ. ಆದರೆ, ಬೇರೆ ಪಕ್ಷದ ನಾಯಕರು ಕೇವಲ ಸ್ವಂತ ಲಾಭಕ್ಕಾಗಿ ಇದ್ದಾರೆ. ಇಂತಹ ಸಂದರ್ಭದಲ್ಲಿ ನಾವೆಲ್ಲರೂ ಪಕ್ಷ ಸಂಘಟನೆಗೆ ಒತ್ತು ನೀಡಬೇಕು ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಕರೆ ನೀಡಿದರು.

ಮೈಸೂರಿನ ನೇರಂಬಳ್ಳಿ ಸಾವಿತ್ರಮ್ಮ ಕಲ್ಯಾಣ ಮಂಟಪದಲ್ಲಿ ಭಾನುವಾರ ಆಯೋಜಿಸಿದ್ದ ಮೈಸೂರು ಗ್ರಾಮಾಂತರ ಬಿಜೆಪಿ ಪದಾಧಿಕಾರಿಗಳ ಪದಗ್ರಹಣ ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ದೇಶದ ಹಿತಕ್ಕಿಂತ ಕಾಂಗ್ರೆಸ್ ಪಕ್ಷಕ್ಕೆ ಸ್ವಂತ ಲಾಭದ ಚಿಂತೆ ಇದೆ. ದೇಶದ ಹಿತಕ್ಕಾಗಿ ಪ್ರಧಾನಮಂತ್ರಿ ನರೇಂದ್ರ ಮೋದಿ ಕೈಗೊಂಡಿರುವ ಹಲವಾರು ಬದಲಾವಣೆಗಳನ್ನು ಕಾಂಗ್ರೆಸ್ಸಿಗರು ಸಹಿಸುತ್ತಿಲ್ಲ. ವಿಕಸಿತ ಭಾರತವಾಗಲು ನಡೆಸುತ್ತಿರುವ ಪ್ರಯತ್ನಕ್ಕೆ ನಾವು ಕೈ ಜೋಡಿಸಿ ಕೆಲಸ ಮಾಡಬೇಕು ಎಂದರು.

ಪಕ್ಷದಲ್ಲಿ ಯುವಕರು, ಹಿರಿಯರಿಗೆ ಸೇರಿದಂತೆ ಹೊಸ ಜವಾಬ್ದಾರಿಯನ್ನು ನೀಡಲಾಗಿದೆ. ಒಂದು ದಿನಕ್ಕೆ ಅದು ಸೀಮಿತವಾಗದೆ ಸಂಘಟನೆಗೆ ಗಮನ ಹರಿಸಬೇಕು. ಮೈಸೂರು, ಕೊಡಗು, ಚಾಮರಾಜನಗರ, ಮಂಡ್ಯ ಜಿಲ್ಲೆಗಳಲ್ಲಿ ಪಕ್ಷದ ಪ್ರಾಬಲ್ಯವಿದೆ. ನಾವು ಅದನ್ನು ಮತ್ತಷ್ಟು ಬಲಿಷ್ಠಗೊಳಿಸಬೇಕು. ಈ ಭಾಗದಲ್ಲಿ ಪಕ್ಷದಿಂದ ಒಬ್ಬರೇ ಶಾಸಕರು ಇದ್ದಾರೆ. ಅದನ್ನು ಮುಂದಿನ ದಿನಗಳಲ್ಲಿ ಹೆಚ್ಚು ಮಾಡುವ ದೃಷ್ಟಿಯಿಂದ ಕೆಲಸ ಮಾಡಬೇಕು. ಪ್ರಧಾನಿ ಮೋದಿ ಅವರಿಂದ ಬಿಜೆಪಿಗೆ ಉತ್ತಮ ಹೆಸರಿದೆ. ಅದಕ್ಕೆ ಸಂಘಟನೆ ಒಗ್ಗಟ್ಟು ಸೇರಿಕೊಂಡರೆ ಮತ್ತಷ್ಟು ಬಲವಾಗುತ್ತದೆ. ಅದು ಮತವಾಗಿ ಬದಲಾದರೆ ಮತ್ತಷ್ಟು ಸ್ಥಾನಗಳನ್ನು ಗೆಲ್ಲಬಹುದು ಎಂದರು.

ವಿಧಾನ ಪರಿಷತ್ ಮಾಜಿ ಸದಸ್ಯ ತೋಂಟದಾರ್ಯ ಮಾತನಾಡಿ, ಕಾರ್ಯಕರ್ತರೇ ಪಕ್ಷದ ನಿಜವಾದ ನಾಯಕರು. ಸಿದ್ಧಾಂತದ ವಿಚಾರಗಳು ದೇಶದ ಭೌಗೋಳಿಕವಾಗಿ ಮುಖ್ಯ ದೇಶದಲ್ಲಿ ಮತ್ತು ಅನೇಕ ರಾಜ್ಯಗಳಲ್ಲಿ ಬಿಜೆಪಿ ಆಡಳಿತ ನಡೆಸುತ್ತಿದೆ. ಕರ್ನಾಟಕದಲ್ಲಿ ಕೂಡ ಆಡಳಿತ ನಡೆಸಲಾಗಿದೆ. ಆದರೆ, ಈ ಹಿಂದೆ ಪಕ್ಷಕ್ಕೆ ದುಡಿದ ಅನೇಕ ನಾಯಕರು ಪಕ್ಷದ ಬೆಳವಣಿಗೆಯನ್ನು ನೋಡಲು ಸಾಧ್ಯವಾಗಲಿಲ್ಲ. ಬಿಜೆಪಿ ದೇಶದ ಅಭಿವೃದ್ಧಿ ಹಿತದೃಷ್ಟಿಯಿಂದ ಒಂದು ದಿಕ್ಕನ್ನು ತೋರಿಸಿಕೊಟ್ಟಿದೆ ಎಂದರು.

ಬಿಜೆಪಿ ಜಗತ್ತಿನಲ್ಲಿ ದೊಡ್ಡ ಬಲಿಷ್ಠ ಪಕ್ಷವಾಗಿ ಹೊರಹೊಮ್ಮಿದೆ. ಪ್ರಧಾನಿ ನರೇಂದ್ರ ಮೋದಿ ಅವರಿಗೆ ಇಡೀ ಜಗತ್ತಿನ ಎಲ್ಲಾ ರಾಷ್ಟ್ರಗಳಲ್ಲಿ ಗೌರವ ಕೊಡಲಾಗುತ್ತಿದೆ. ಆದ್ದರಿಂದ ನೀವು ಪಕ್ಷ ಕೊಟ್ಟ ಜವಾಬ್ದಾರಿ ಅರಿತು ಸಂಘಟನೆ ಮಾಡಿ ಮುಂದಿನ ದಿನಗಳಲ್ಲಿ ಸೈನಿಕರಂತೆ ಶ್ರಮಿಸಿ ಎಂದು ತಿಳಿಸಿದರು.

ವಿಧಾನಪರಿಷತ್ ಮಾಜಿ ಸದಸ್ಯ ಸಿ.ರಮೇಶ್ ಮಾತನಾಡಿ, ರಾಜ್ಯದಲ್ಲಿ ಸರ್ಕಾರ, ಪಕ್ಷನೂ ಇಲ್ಲ. ಇರುವ ಸರ್ಕಾರ ಕಿತ್ತು ಹೋಗಿದೆ. ಜನರೇ ಈ ಸರ್ಕಾರವನ್ನು ಬುಡ ಸಮೇತ ಕಿತ್ತೊಗೆಯಲು ಸಜ್ಜಾಗಿದ್ದಾರೆ. ಗ್ಯಾರಂಟಿ ಯೋಜನೆಗಳಿಂದ ಮಾತ್ರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದಿದೆ ಅಷ್ಟೇ ಎಂದರು.

ಪ್ರಧಾನಿ ಮೋದಿ ಆಡಳಿತ ಜನರ ಮೆಚ್ಚುಗೆಗೆ ಕಾರಣವಾಗಿದೆ. ಭಾರತವಲ್ಲದೇ ಇಡೀ ಜಗತ್ತು ಅವರ ನಾಯಕತ್ವ, ಆಡಳಿತವನ್ನು ಮೆಚ್ಚಿಕೊಂಡಿದೆ. ಹೊಸದಾಗಿ ಜವಾಬ್ದಾರಿ ಪಡೆದುಕೊಂಡ ಪದಾಧಿಕಾರಿಗಳು ಪಕ್ಷದ ಪರ ಕಂಕಣ ಬದ್ಧವಾಗಿ ಕೆಲಸ ಮಾಡಬೇಕು ಎಂದು ತಿಳಿಸಿದರು.

ಮೈಸೂರು ಗ್ರಾಮಾಂತರ ಬಿಜೆಪಿ ಮಾಜಿ ಅಧ್ಯಕ್ಷೆ ಮಂಗಳಾ ಸೋಮಶೇಖರ್ ಮಾತನಾಡಿ, ದೇಶದಲ್ಲಿ ಆಡಳಿತ ಮತ್ತು ಕರ್ನಾಟಕದಲ್ಲಿ ವಿರೋಧ ಪಕ್ಷದಲ್ಲಿ ಇದ್ದೇವೆ. ಭಾರತದಲ್ಲಿ ಬಿಜೆಪಿ ಅಧಿಕಾರಕ್ಕೆ ಬರಲು ತಳಮಟ್ಟದ ಕಾರ್ಯಕರ್ತರ ಶ್ರಮವಿದೆ.ಮುಂದಿನ ದಿನಗಳಲ್ಲಿ ಬಿಜೆಪಿಯನ್ನು ಕರ್ನಾಟಕದಲ್ಲಿ ಅಧಿಕಾರಕ್ಕೆ ತರಲು ಶ್ರಮಿಸಬೇಕು. ಹಳೆಯ ಮತ್ತು ಹೊಸಬರು ಪರಸ್ಪರ ಬೆರೆತು ಕೆಲಸ ಮಾಡಿದರೆ ಒಳಿತಾಗಲಿದೆ. ಪಕ್ಷದಲ್ಲಿ ಕೆಲಸ ಮಾಡಲು ಸಮಯ ಮೀಸಲಿಟ್ಟು ಸಂಘಟನೆ ಮಾಡಬೇಕು. ಜವಾಬ್ದಾರಿ ಪಡೆದುಕೊಂಡ ಪದಾಧಿಕಾರಿಗಳು ಹುದ್ದೆಗೆ ಸೀಮಿತವಾಗದೆ ಎಲ್ಲಾ ಕಡೆಗಳಲ್ಲಿ ಪ್ರವಾಸ ಕೈಗೊಂಡು ಕಾರ್ಯಕರ್ತರ ಹುಮ್ಮಸ್ಸು ತುಂಬಬೇಕು ಎಂದು ಸಲಹೆ ನೀಡಿದರು.

ನೂತನ ಪದಾಧಿಕಾರಿಗಳಿಗೆ ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಅವರು ನೇಮಕಾತಿ ಪತ್ರವನ್ನು ವಿತರಿಸಿದರು. ಈ ಸಂದರ್ಭದಲ್ಲಿ ಮೈಸೂರು ಗ್ರಾಮಾಂತರ ಬಿಜೆಪಿ ಅಧ್ಯಕ್ಷ ಕುಂಬ್ರಳ್ಳಿ ಎನ್.ಸುಬ್ಬಣ್ಣ, ಶಾಸಕ ಟಿ.ಎಸ್.ಶ್ರೀವತ್ಸ, ಮೈಸೂರು ನಗರ ಬಿಜೆಪಿ ಅಧ್ಯಕ್ಷ ಎಲ್.ನಾಗೇಂದ್ರ, ಮಾಜಿ ಶಾಸಕ ಎಸ್.ಸಿ.ಬಸವರಾಜು, ಅರಣ್ಯ ವಸತಿ ಮತ್ತು ವಿಹಾರ ಧಾಮಗಳ ಸಂಸ್ಥೆ ಮಾಜಿ ಅಧ್ಯಕ್ಷ ಎಂ.ಅಪ್ಪಣ್ಣ, ಕಾಂಪೋಸ್ಟ್ ನಿಗಮದ ಮಾಜಿ ಅಧ್ಯಕ್ಷ ಎಸ್.ಮಹದೇವಯ್ಯ, ಕರ್ನಾಟಕ ಖಾದಿ ಗ್ರಾಮೋದ್ಯೋಗ ಮಂಡಳಿ ಮಾಜಿ ಅಧ್ಯಕ್ಷ ಎನ್.ಆರ್.ಕೃಷ್ಣಪ್ಪಗೌಡ, ಮೈಮುಲ್ ನಿರ್ದೇಶಕ ಬಿ.ಎನ್.ಸದಾನಂದ, ಮಾಜಿ ನಿರ್ದೇಶಕ ಎಸ್.ಸಿ.ಅಶೋಕ್, ಮಾಜಿ ಮೇಯರ್ ಶಿವಕುಮಾರ್, ಸಹಪ್ರಭಾರಿ ಎನ್.ವಿ.ಫಣೀಶ್, ಮುಖಂಡರಾದ ಅರುಣ್ ಕುವಾರ್, ನಾಗರಾಜಮಲ್ಲಾಡಿ,ಹುಣಸೂರು ಸೋಮಶೇಖರ್ ಮತ್ತಿತರರು ಉಪಸ್ಥಿತರಿದ್ದರು.

ಆಕಾಶದಲ್ಲಿ ಹಾರುವುದು, ನೀರಲ್ಲಿ ಈಜುವುದ ಕಲಿತ ಮನುಷ್ಯ ಭೂಮಿ ಮೇಲೆ ಮನುಷ್ಯನಾಗಿ ಬದುಕುವುದ ಕಲಿಯಲಾಗಿಲ್ಲ!

- ಮೈಸೂರು ಬಿಷಪ್ ಫ್ರಾನ್ಸಿಸ್ ಸೆರಾವೋ ವಿಷಾದ
- ಕ್ರಿಸ್‌ಮಸ್ ಕಾರ್ನಿವಲ್ ಸಂಭ್ರಮಾಚರಣೆ



ಮೈಸೂರು ಬಿಷಪ್ ಫ್ರಾನ್ಸಿಸ್ ಸೆರಾವೋ ಗಿಡಕ್ಕೆ ನೀರೆರೆಯುವ ಮೂಲಕ ಕಾರ್ಯಕ್ರಮ ಉದ್ಘಾಟಿಸಿದರು. ಫಾ.ಅಲೆಕ್ಸ್ ಪ್ರಶಾಂತ್ ಸಿಕ್ವೇರಾ ಜೊತೆಯಲ್ಲಿದ್ದರು.

ಮೈಸೂರು, ಡಿ.21(ಪಿಪಿಹೆಚ್)– ಮನುಷ್ಯ ತನ್ನಲಿನ ಸ್ವಾರ್ಥ, ಪಶುತ್ವ ಬಿಟ್ಟು ದೈವತ್ವ ಪಡೆಯುವ ನಿಟ್ಟಿನಲ್ಲಿ ದೇವರಲ್ಲಿ ಒಂದಾಗಿ ಬಾಳಬೇಕು ಎಂದು ಯೇಸು ಸಂದೇಶ ಸಾರಿದ್ದಾರೆ. ಅವುಗಳನ್ನು ಜೀವನದಲ್ಲಿ ಅಳವಡಿಸಿಕೊಂಡು ದೈವದ ಕೃಪೆಗೆ ಪಾತ್ರರಾಗಬೇಕು ಎಂದು ಮೈಸೂರು ಬಿಷಪ್ ಫ್ರಾನ್ಸಿಸ್ ಸೆರಾವೋ ತಿಳಿಸಿದರು.

ಮೈಸೂರಿನ ಸಂತ ಫಿಲೋಮಿನಾ ಚರ್ಚ್‌ನಲ್ಲಿ ನಡೆದ ಕ್ರಿಸ್‌ಮಸ್ ಕಾರ್ನಿವಲ್ ಸಂಭ್ರಮಾಚರಣೆ ಉದ್ಘಾಟಿಸಿ ಅವರು ಮಾತನಾಡಿದರು.

ನನ್ನ ನೋವು ನನಗೆ ತಿಳಿದಲ್ಲಿ ನಾನು ಜೀವಂತವಾಗಿದ್ದೇನೆ ಎಂದರ್ಥ. ಆದರೆ ಪರರ ನೋವು ತಿಳಿದಲ್ಲಿ ನಾವು ಮನುಷ್ಯರಾಗಿದ್ದೇವೆ ಎಂದರ್ಥ. ಇನ್ನೊಬ್ಬರ ನೋವಿಗೆ ಸ್ಪಂದಿಸಬೇಕು, ಅವರ ನೋವಿನಲ್ಲಿ ಭಾಗಿಯಾಗಬೇಕು. ಪರರಿಗಾಗಿ ಬದುಕಬೇಕು. ಆಗ ಮಾತ್ರ ನಾವು ಮನುಷ್ಯರಾಗಲು ಸಾಧ್ಯ ಎಂದು ಸಂದೇಶ ಸಾರಿದರು.

ಪ್ರತಿಯೊಬ್ಬ ಮನುಷ್ಯ ತನ್ನನ್ನು ತಾನು ಅರಿಯಬೇಕು. ಮನುಷ್ಯತ್ವ ಬೆಳೆಸಿಕೊಳ್ಳಬೇಕು. ಇದರಿಂದ ಜೀವನ ಸಾರ್ಥಕವಾಗಲಿದೆ. ಏಸು ಕ್ರಿಸ್ತರು ಎಲ್ಲರೂ ಒಂದಾಗಿ ಬಾಳಬೇಕು ಎಂಬ ಸಂದೇಶ ಸಾರಿದ್ದಾರೆ. ಯಾವುದೇ ಪಂಗಡ, ಮೇಲು–ಕೀಳು ಭಾವನೆ ಇಲ್ಲದೆ ಎಲ್ಲರೂ ಒಂದೆ ಎನ್ನುವ ಮನೋಭಾವ ಹೊಂದುವಂತೆ ಬೋಧಿಸಿದ್ದಾರೆ. ಅದರಂತೆ ನಾವು ಬದುಕಬೇಕು ಎಂದರು.

ಕ್ರಿಸ್‌ಮಸ್ ಹಬ್ಬ ಒಂದೆ ಧರ್ಮಕ್ಕೆ ಸಿಮೀತವಾಗದೆ, ಪ್ರತಿಯೊಬ್ಬರಿಗೂ ಸೇರಿದೆ. ನಮ್ಮ ದೇಶದಲ್ಲಿ ಎಲ್ಲಾ ಮತ, ಧರ್ಮಗಳನ್ನು ಮರೆತು ಒಂದಾಗಿ ದೀಪಾವಳಿ ಆಚರಿಸುವಂತೆ ಯೇಸುವಿನ ಪುಣ್ಯ ದಿನವನ್ನು ಆಚರಿಸಬೇಕು ಎಂದು ಮನವಿ ಮಾಡಿದರು.

ಕ್ರಿಸ್‌ಮಸ್ ಎಂದರೆ ದೇವರು, ಮಾನವರಾದ್ದಂತಹ ವಿಶೇಷ ಸಂದರ್ಭ. ದೇವರು ನಾವಿದ್ದ ಕಡೆಗೆ ಬಂದಂತಹ ಸುದಿನ. ಮನುಷ್ಯರು ದೇವರಲ್ಲಿ ಸೇರಬೇಕು ಎಂಬ ಉದ್ದೇಶದಿಂದ ದೇವರು ನಮ್ಮ ಬಳಿಗೆ ಬಂದಿದ್ದಾರೆ. ಆದರೆ ನಾವು ಇಂದಿಗೂ ಕೂಡ ಮಾನವರಾಗಿಲ್ಲ. ಆಕಾಶದಲ್ಲಿ ಹಾರುವುದು ಕಲಿತೆವು, ನೀರಿನಲ್ಲಿ ಈಜುವುದ ಕಲಿತೆವು ಆದರೆ ನೆಲದಮೇಲೆ ಮಾನವನಾಗಿ ನಡೆದುಕೊಳ್ಳಲಾಗಿಲ್ಲ ಎಂದು ಬೇಸರಿಸಿದರು.

ಸಂತ ಫಿಲೋಮಿನಾ ಚರ್ಚ್‌ನ ಧರ್ಮಗುರುಗಳಾದ ಫಾ.ಅಲೆಕ್ಸ್ ಪ್ರಶಾಂತ್ ಸಿಕ್ವೇರಾ ಮಾತನಾಡಿ, ಡಿಸೆಂಬರ್ 24ರಂದು ರಾತ್ರಿ 11ಕ್ಕೆ ಬಾಲ ಯೇಸುವಿನ ಪ್ರತಿಮೆಯ ಗೋದಲಿಯಲ್ಲಿ ಪ್ರತಿಷ್ಠಾಪಿಸಲಾಗುವುದು. ಬಳಿಕ ಬಲಿ ಪೂಜೆ ಆರಂಭವಾಗಲಿದೆ ಎಂದು ಮಾಹಿತಿ ನೀಡಿದರು.

ಕ್ರಿಸ್‌ಮಸ್ ಕಾರ್ನಿವಲ್ ಸಂಭ್ರಮಾಚರಣೆಯಲ್ಲಿ ಜೀವನ್ ಪ್ರಿತ್, ಆಲ್ಬರ್ಟ್ ಭಾಸ್ಕರ್, ಜಯಂತ್, ಆಂಥನಿ ಪ್ರದೀಪ್, ಆಂಥನಿ ಎಚ್ ವಿಲ್ಲಿ ಉಪಸ್ಥಿತರಿದ್ದರು.

ಮೂಕ ಮಹಿಳೆಯರ ಮೇಲಿನ ಅತ್ಯಾಚಾರ ಪ್ರಕರಣ 16 ವರ್ಷದ ಬಳಿಕ ಬೆಳಕಿಗೆ: ಆರೋಪಿ ಬಂಧನ

ಮುಂಬೈ: 16 ವರ್ಷಗಳ ಹಿಂದೆ ನಡೆದಿದ್ದ ಅತ್ಯಾಚಾರ ಕುರಿತಂತೆ ವಾಕ್ ಮತ್ತು ಶ್ರವಣದೋಷವುಳ್ಳ ಮಹಿಳೆಯೊಬ್ಬರು ನೀಡಿದ ದೂರು ಆಧರಿಸಿ ಕಾಮುಕನೊಬ್ಬನನ್ನು ಬಂಧಿಸಲಾಗಿದೆ. ವಿಚಾರಣೆ ವೇಳೆ ಹಲವು ಮಹಿಳೆಯರ ಮೇಲೂ ಅತ್ಯಾಚಾರವೆಸಗಿ, ಬೆದರಿಕೆ ಹಾಕಿರುವುದು ಬೆಳಕಿಗೆ ಬಂದಿದೆ. ಅತ್ಯಾಚಾರಕ್ಕೆ ಒಳಗಾದ ಮಹಿಳೆಯೊಬ್ಬರು ಆತ್ಮಹತ್ಯೆಗೆ ಯತ್ನಿಸಿದ ಬೆನ್ನಲ್ಲೇ ಸಂತ್ರಸ್ತೆಯು ಮೌನ ಮುರಿದು ದೂರು ನೀಡಿದ್ದು, ಡಿಸೆಂಬರ್ 13ರಂದು ಆರೋಪಿಯನ್ನು ಬಂಧಿಸಲಾಗಿದೆ.

ಪಶ್ಚಿಮ ಉಪನಗರದ ನಿವಾಸಿಯಾಗಿರುವ ಸಂತ್ರಸ್ತೆಯು ಸ್ನೇಹಿತರು ಹಾಗೂ ಸಹೋದ್ಯೋಗಿಗಳ ಜೊತೆ ವಿಡಿಯೊ ಕರೆಯಲ್ಲಿ ಸಂಜ್ಞೆಗಳನ್ನು ಬಳಸಿ ಸಂವಹನ ನಡೆಸುತ್ತಿದ್ದ ಸಂದರ್ಭದಲ್ಲಿ ಅಪ್ರಾಪ್ತ ವಯಸ್ಸಿನಲ್ಲಿ ನನ್ನ ಮೇಲಾದ ಅತ್ಯಾಚಾರವನ್ನು ಬಹಿರಂಗಪಡಿಸಿದ್ದಾರೆ ಎಂದು ಪೊಲೀಸ್ ಅಧಿಕಾರಿಯೊಬ್ಬರು ತಿಳಿಸಿದ್ದಾರೆ.

ಪತಿಯನ್ನು ವಿಶ್ವಾಸಕ್ಕೆ ತೆಗೆದುಕೊಂಡು, ಠಾಣೆ ಜಿಲ್ಲಾ ವಾಕ್ ಶ್ರವಣ ದೋಷವುಳ್ಳವರ ಸಂಘದ ಅಧ್ಯಕ್ಷ ವೈಭವ್ ಘೈಸಿಸ್, ಸಾಮಾಜಿಕ ಕಾರ್ಯಕರ್ತ ಮೊಹಮ್ಮದ್ ಫರ್ಹಾನ್ ಖಾನ್, ಆಂಗಿಕ ಭಾಷೆ ವ್ಯಾಖ್ಯಾನಕಾರ ಮಧು ಖೇನಿ, ಅಲಿ ಯಾವರ್ ಜಂಗ್ ವಾಕ್ ಹಾಗೂ ಶ್ರವಣ ರಾಷ್ಟ್ರೀಯ ಸಂಸ್ಥೆಯ ನಿವೃತ್ತ ಅಧಿಕಾರಿ ದಿವ್ಯಜ್ಞಾನ್ ಜೊತೆಗೂಡಿ ಇಲ್ಲಿನ ಕುರಾರ್ ಪೊಲೀಸ್ ಠಾಣೆಗೆ ತೆರಳಿ, ಕ್ಯಾಮೆರಾದ ಮುಂದೆ ಸಂತ್ರಸ್ತೆಯು ಹೇಳಿಕೆಯನ್ನು ದಾಖಲಿಸಿದ್ದಾರೆ. ಇದಾದ ಕೆಲವು ಗಂಟೆಗಳಲ್ಲಿಯೇ ಪಾಲ್ಘರ್ ಜಿಲ್ಲೆಯ ವಿರಾರ್ ಪಟ್ಟಣದಲ್ಲಿ ಆರೋಪಿ ಮಹೇಶ್ ಪವಾರ್‌ನನ್ನು ಪೊಲೀಸರು ಬಂಧಿಸಿದ್ದಾರೆ.

20 ಮಹಿಳೆಯರ ಮೇಲೆ ಅತ್ಯಾಚಾರ: 2009ರಲ್ಲಿ ಸ್ನೇಹಿತೆಯ ಜೊತೆ ಸಾಂತಾಕ್ರೂಜ್‌ನಲ್ಲಿರುವ ವಕೋಲದಲ್ಲಿರುವ ಆರೋಪಿಯ ಮನೆಗೆ ತೆರಳಿದ್ದೆ. ಈ ವೇಳೆ ಹುಟ್ಟುಹಬ್ಬದ ನೆಪದಲ್ಲಿ ಸಮೋಸ ಹಾಗೂ ಮತ್ತು ಬರಿಸುವ ಪದಾರ್ಥ ಬೆರೆಸಿದ್ದ ಪಾನೀಯ ನೀಡಿದ್ದರು. ಪ್ರಜ್ಞೆ ತಪ್ಪಿದ ವೇಳೆ ನನ್ನ ಮೇಲೆ ಅತ್ಯಾಚಾರ ಎಸಗಿದ್ದರು. ಎಚ್ಚರವಾದ ವೇಳೆ ಸ್ನೇಹಿತೆಯು ಮನೆಯಲ್ಲಿ ಇರಲಿಲ್ಲ. ಆರೋಪಿಯು ಅತ್ಯಾಚಾರ ಎಸಗಿದ ವಿಡಿಯೊ ಚಿತ್ರೀಕರಿಸಿ ಬ್ಲ್ಯಾಕ್‌ಮೇಲ್ ಮಾಡಿದ್ದರು ಎಂದು ಸಂತ್ರಸ್ತೆ ದೂರಿನಲ್ಲಿ ತಿಳಿಸಿದ್ದಾರೆ. ಹಲವು ಯುವತಿಯರ ಮೇಲೂ ಅತ್ಯಾಚಾರ ಎಸಗಿ, ವಿಡಿಯೊ ಚಿತ್ರೀಕರಿಸಿ, ಅವರಿಂದ ಅಪಾರ ಹಣ, ಮೊಬೈಲ್, ಚಿನ್ನ ಪಡೆದಿದ್ದ ಎಂದು ತಿಳಿಸಿದ್ದಾರೆ. ಪ್ರಾಥಮಿಕ ತನಿಖೆ ಪ್ರಕಾರ, ಏಳು ಮಹಿಳೆಯರ ಮೇಲೆ ಅತ್ಯಾಚಾರ ಎಸಗಿರುವುದು ಕಂಡುಬಂದಿದೆ. ಇದು 20ವರೆಗೂ ಏರಿಕೆಯಾಗುವ ಸಾಧ್ಯತೆಯಿದೆ ಎನ್ನಲಾಗಿದೆ.

ಕರ್ನಾಟಕ ದಸರಾ ವಸ್ತುಪ್ರದರ್ಶನದಲ್ಲಿ ಇಂದು ನಾಟಕ ಪ್ರದರ್ಶನ

ಮೈಸೂರು,ಡಿ.21– ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ವತಿಯಿಂದ ಗಾನ ಕೋಗಿಲೆ ಪಿ.ಕಾಳಿಂಗರಾವ್ ರಂಗಮಂಟಪದಲ್ಲಿ ಡಿ.20ರಂದು ಸಂಜೆ 5ರಿಂದ 7 ರವರೆಗೆ ಕಲಾವಿದರಿಂದ ಆಯೋಜಿಸಲಾಗಿದ್ದ ಕಾರ್ಯಕ್ರಮಗಳನ್ನು ಕಾರಣಾಂತರಗಳಿಂದ ಮುಂದೂಡಲಾಗಿದೆ. ಸದರಿ ಕಾರ್ಯಕ್ರಮವನ್ನು ಡಿ.22 ರಂದು ಸಂಜೆ 5.30 ಗಂಟೆಯಿಂದ 7.30 ರವರೆಗೆ ಏರ್ಪಡಿಸಲಾಗಿದೆ. ಅಂದು ಸಂಜೆ 5.30ರಿಂದ 6.30 ಗಂಟೆಯವರೆಗೆ ಮಹಿಳೆಯರ ಮೇಲಿನ ದೌರ್ಜನ್ಯ ಕುರಿತು– ಕಿರು ನಾಟಕ ಹಾಗೂ ಸಂಜೆ 6.30 ರಿಂದ 7.30 ಗಂಟೆಯವರೆಗೆ ಸರ್ಕಾರದ 5 ಗ್ಯಾರಂಟಿ ಯೋಜನೆಗಳ ಕುರಿತು ನಾಟಕ ಪ್ರದರ್ಶನ ಮಾಡಲಿದ್ದಾರೆ ಎಂದು ಕರ್ನಾಟಕ ವಸ್ತುಪ್ರದರ್ಶನ ಪ್ರಾಧಿಕಾರದ ಮುಖ್ಯ ಕಾರ್ಯನಿರ್ವಾಹಣಾಧಿಕಾರಿ ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

ದಿನದರ್ಶಿ ಬಿಡುಗಡೆ...



ಮೈಸೂರಿನ ದತ್ತಪೀಠಾಧಿಪತಿ ಶ್ರೀ ಶ್ರೀ ಗಣಪತಿ ಸಚ್ಚಿದಾನಂದ ಸ್ವಾಮೀಜಿ ನರಸಿಂಹರಾಜ ವಿಪ್ರ ಸಂಘದ 2026 ನೇ ಸಾಲಿನ ದಿನದರ್ಶಿಕೆಯನ್ನು ಬಿಡುಗಡೆ ಮಾಡಿದರು. ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾದ ಜಿಲ್ಲಾ ಪ್ರತಿನಿಧಿ ಡಾ.ಲಕ್ಷ್ಮೀದೇವಿ, ಸಂಘದ ಉಪಾಧ್ಯಕ್ಷ ಜಿ.ಆರ್.ಸತ್ಯನಾರಾಯಣ, ಕಾರ್ಯದರ್ಶಿ ಬಿ.ಎಂ.ಆನಂದ್, ಖಜಾಂಚಿ ಎಂ.ಕೆ.ಸತ್ಯನಾರಾಯಣ, ಎಂ.ಎಸ್. ವೆಂಕಟೇಶ್, ಚಂದ್ರಶೇಖರ್ ಎಂ.ಎಸ್., ವಿಜಯಲಕ್ಷ್ಮಿ, ಪ್ರೇಮಾವತಿ ಉಪಸ್ಥಿತರಿದ್ದರು.


ನೆಟ್‌ಬಾಲ್ ಪಂದ್ಯಾವಳಿಯಲ್ಲಿ ವಿಜೇತರು



ಚಾಮರಾಜನಗರ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕರ ಕಚೇರಿ ವತಿಯಿಂದ ಚಾಮರಾಜನಗರದ ಡಾ. ಬಿ.ಆರ್. ಅಂಬೇಡ್ಕರ್ ಜಿಲ್ಲಾ ಕ್ರೀಡಾಂಗಣದಲ್ಲಿ ನಡೆದ ರಾಜ್ಯ ಮಟ್ಟದ ಶಾಲಾ ನೆಟ್‌ಬಾಲ್ ಪಂದ್ಯಾವಳಿಯಲ್ಲಿ ಮೈಸೂರಿನ ಅವಿಲಾ ಕಾನ್ವೆಂಟ್ ಪ್ರೌಢಶಾಲೆಯ 14 ವಯೋಮಿತಿಯ ಬಾಲಕಿಯರ ತಂಡ ರಾಜ್ಯ ಮಟ್ಟದ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡು ರಾಷ್ಟ್ರ ಮಟ್ಟಕ್ಕೆ ಆಯ್ಕೆಯಾಗಿದೆ. ಚಿತ್ರದಲ್ಲಿ ದೈಹಿಕ ಶಿಕ್ಷಣ ಶಿಕ್ಷಕ ಎಲಿಯಾಸ್ ಅರುಳಪ್ಪ ಹಾಗೂ ಕ್ರೀಡಾಪಟುಗಳಾದ ಸುಶುಮ್ನಾಶ್ರೀ, ನೇಹಾ, ಲಿಖಿತ, ವೈಷ್ಣವಿ, ಸಾನಿಕ ಇದ್ದಾರೆ.

ಮಾನಸಿಕ ಆರೋಗ್ಯ, ನೆಮ್ಮದಿಗೆ ಧ್ಯಾನ ಅವಶ್ಯ

ಮೈಸೂರಲ್ಲಿ ನಡೆದ ವಿಶ್ವ ಧ್ಯಾನ ದಿನ ಆಚರಣೆಯಲ್ಲಿ ಮೈಸೂರು ವಿವಿ ಕುಲಸಚಿವೆ ಎಂ.ಕೆ.ಸವಿತಾ ಅಭಿಮತ





ಮೈಸೂರಿನ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಭಾನುವಾರ 'ವಿಶ್ವ ಧ್ಯಾನ ದಿನ' ಆಚರಿಸಲಾಯಿತು.

ಮೈಸೂರು, ಡಿ.21(ಎಂಕೆ)– ಮೈಸೂರು ವಿಶ್ವವಿದ್ಯಾನಿಲಯದ ಮಾನಸಗಂಗೋತ್ರಿಯ ಬಯಲು ರಂಗಮಂದಿರದಲ್ಲಿ ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾಲಯದ ವತಿಯಿಂದ ಆಂತರಿಕ ಶಾಂತಿ ಮತ್ತು ವೈಶ್ವಿಕ ಸಾಮರಸ್ಯಕ್ಕಾಗಿ ವಿಶ್ವಸಂಸ್ಥೆಯ ಆಶಯದಂತೆ ಭಾನುವಾರ 'ವಿಶ್ವ ಧ್ಯಾನ ದಿನ' ಆಚರಿಸಲಾಯಿತು.

ಕೊರೆಯುವ ಚಳಿಯ ನಡುವೆ ಬೆಳಗ್ಗೆ 6 ಗಂಟೆಗೆ ಬಯಲು ರಂಗಮಂದಿರದತ್ತ ಆಗಮಿಸಿದ ಸಾವಿರಾರು ಮಂದಿ, ಯೋಗ ನೃತ್ಯ, ಸಮೂಹ ಗಾಯನ ವೀಕ್ಷಿಸಿ ನಂತರ ಸಾಮೂಹಿಕವಾಗಿ ಧ್ಯಾನದ ಪ್ರಾಯೋಗಿಕ ಅಭ್ಯಾಸ ನಡೆಸಿದರು. ನಂತರ ದೆಹಲಿಯ ಶಿವಾನಿಜೀ ಅವರಿಂದ ಧ್ಯಾನದ ಬಗೆಗಿನ ವಿಡಿಯೋ ಸಂದೇಶವನ್ನು ಪ್ರದರ್ಶಿಸಲಾಯಿತು.

ಬಳಿಕ ವೇದಿಕೆ ಕಾರ್ಯಕ್ರಮವನ್ನು ಉದ್ಘಾಟಿಸಿದ ಮೈಸೂರು ವಿಶ್ವವಿದ್ಯಾನಿಲಯ ಕುಲಸಚಿವರಾದ ಎಂ.ಕೆ.ಸವಿತಾ ಮಾತನಾಡಿ, ಬದುಕಿನ ಜಂಜಾಟದಲ್ಲಿ ದೊಡ್ಡವರಿಂದ ಹಿಡಿದು ಚಿಕ್ಕ ಮಕ್ಕಳ ಆರೋಗ್ಯಕ್ಕಾಗಿ ಧ್ಯಾನ ಅತ್ಯಾವಶ್ಯಕವಾಗಿದೆ. ಧ್ಯಾನದಿಂದ ಸಕಾರಾತ್ಮಕ ಭಾವನೆಗಳು ಮೂಡುತ್ತವೆ ಮತ್ತು ಮನಸ್ಸಿನಲ್ಲಿರುವ ದ್ವೇಷ–ಅಸೂಯೆ ಹೋಗಲಾಡಿಸಿ, ಪ್ರೀತಿ, ಕರುಣೆ ಮತ್ತು ಭಾತೃತ್ವ ಬೆಳೆಯಲು ಸಹಕಾರಿ ಎಂದರು.

ಸಮಾಜದಲ್ಲಿ ಶಾಂತಿ ನೆಲೆಸಬೇಕಾದರೆ ಧ್ಯಾನ ಮಾಡುವ ಮೂಲಕ ಪರಸ್ಪರ ಸದ್ಭಾವನೆಯನ್ನು ಬೆಳೆಸಿಕೊಳ್ಳಬೇಕು. ಇವತ್ತಿನ ದಿನಗಳಲ್ಲಿ ಹಣ–ಆಸ್ತಿ ಸಂಪಾದನೆಗಿಂತ ಮನಸ್ಸಿನ ಆರೋಗ್ಯ ಮತ್ತು ನೆಮ್ಮದಿ ಸಂಪಾದನೆ ಬಹಳ ಮುಖ್ಯವಾಗಿದೆ. ಆದ್ದರಿಂದ ಸಾರ್ವಜನಿಕರು ಇಂತಹ ಆರೋಗ್ಯಕರ ಕಾರ್ಯಕ್ರಮಗಳಲ್ಲಿ ಹೆಚ್ಚೆಚ್ಚು ಭಾಗವಹಿಸಬೇಕು ಎಂದು ತಿಳಿಸಿದರು.

ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ ಕುಲಪತಿ ಪ್ರೊ.ಶರಣಪ್ಪ ವಿ.ಹಲಸೆ ಮಾತನಾಡಿ, ಮಾನಸಿಕ ಆರೋಗ್ಯಕ್ಕೆ ಧ್ಯಾನದ ಅವಶ್ಯಕತೆ ಇದೆ. ಪ್ರತಿದಿನ ಬೆಳಗ್ಗೆ ಮತ್ತು ಸಂಜೆ ವೇಳೆ ಒಂದಷ್ಟು ಸಮಯ ಧ್ಯಾನ ಮಾಡುವುದರಿಂದ ಕೋಪ ಕಡಿಮೆಯಾಗಿ, ಉಲ್ಲಾಸ ಮತ್ತು ಮುಖ್ಯವಾಗಿ ಏಕಾಗ್ರತೆ ವೃದ್ಧಿಯಾಗುತ್ತದೆ. ಸ್ವಾಮಿ ವಿವೇಕಾನಂದರು, ವಾಲ್ಮೀಕಿ ಮಹರ್ಷಿಗಳು ಧ್ಯಾನದಿಂದಲೇ ಮಹಾನ್ ಸಾಧಕರಾಗಲು ಸಾಧ್ಯವಾಯಿತು ಎಂದು ತಿಳಿಸಿದರು.

ಪ್ರಜಾಪಿತ ಬ್ರಹ್ಮಕುಮಾರಿ ಈಶ್ವರೀಯ ವಿಶ್ವ ವಿದ್ಯಾನಿಲಯದ ಮುಖ್ಯ ಸಂಚಾಲಕಿ ರಾಜಯೋಗಿನಿ ಬಿ.ಕೆ.ಲಕ್ಷ್ಮೀಜಿ ದಿವ್ಯಸಾನ್ನಿಧ್ಯ ವಹಿಸಿದ್ದರು. ಪ್ರಾಂಶುಪಾಲ ಬಿ.ಕೆ.ರಂಗನಾಥ್, ಸರ್ಕಾರಿ ಪ್ರಕೃತಿ ಚಿಕಿತ್ಸೆ ಮತ್ತು ಯೋಗ ವೈದ್ಯಕೀಯ ವಿದ್ಯಾಲಯದ ಪ್ರಾಂಶುಪಾಲ ಡಾ.ವೆಂಕಟಕೃಷ್ಣ, ಆಯುರ್ವೇದ ಸಂಶೋಧನಾ ಕೇಂದ್ರದ ಸಹಾಯಕ ನಿರ್ದೇಶಕ ಡಾ.ಲಕ್ಷ್ಮಿ ನಾರಾಯಣ ಶೆಣೈ ಮತ್ತಿತರರು ಉಪಸ್ಥಿತರಿದ್ದರು.

ಚಾಮುಂಡಿಬೆಟ್ಟದಲ್ಲಿ 'ವಿಶ್ವ ಧ್ಯಾನ ದಿನ' ಆಚರಣೆ: ಮೈಸೂರಿನ ಚಾಮುಂಡಿಬೆಟ್ಟದ ಆವರಣದಲ್ಲಿ ಶ್ರೀ ಚಾಮುಂಡೇಶ್ವರಿ ಕ್ಷೇತ್ರ ಅಭಿವೃದ್ಧಿ ಪ್ರಾಧಿಕಾರದ ವತಿಯಿಂದ 'ವಿಶ್ವ ಧ್ಯಾನ ದಿನ' ಆಚರಿಸಲಾಯಿತು. ಪ್ರಾಧಿಕಾರದ ಕಾರ್ಯದರ್ಶಿ ಎಂ.ಜೆ.ರೂಪ ಸೇರಿದಂತೆ ಅಧಿಕಾರಿಗಳು, ಸಿಬ್ಬಂದಿ ಧ್ಯಾನ ಅಭ್ಯಾಸ ನಡೆಸಿದರು. ಈ ವೇಳೆ ಚಾಮುಂಡೇಶ್ವರಿ ದೇವಾಲಯದ ಅರ್ಚಕ ಶಶಿಶೇಖರ್ ದೀಕ್ಷಿತ್ ಮತ್ತಿತರರಿದ್ದರು.

ಮೈಸೂರು ಮಿತ್ರ ಸೋಮವಾರ 22 ಡಿಸೆಂಬರ್ 2025

ಮಂಡ್ಯ ಜಿಲ್ಲಾದ್ಯಂತ ಪಲ್ಸ್ ಪೋಲಿಯೋ ಲಸಿಕೆ ಕಾರ್ಯ ಯಶಸ್ವಿ





ಆದಿಚುಂಚನಗಿರಿಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಹಾಗೂ ಶ್ರೀರಂಗಪಟ್ಟಣದಲ್ಲಿ ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ಮಗುವಿಗೆ ಲಸಿಕೆ ಹಾಕುವ ಮೂಲಕ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಭಾನುವಾರ ಚಾಲನೆ ನೀಡಿದರು.

ಮಂಡ್ಯ, ಡಿ.21– ಜಿಲ್ಲೆಯ ಹಲವೆಡೆ ಭಾನುವಾರ ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಕಾರ್ಯ ಯಶಸ್ವಿಯಾಯಿತು.

ಲಸಿಕೆ ಹಾಕಿದ ಹೆಚ್ಡಿಕೆ: ರಾಷ್ಟ್ರೀಯ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಿನ್ನೆಲೆಯಲ್ಲಿ ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿದರು.

ಜಿಲ್ಲೆಯ ನಾಗಮಂಗಲ ತಾಲೂಕಿನ ಆದಿಚುಂಚನಗಿರಿಗೆ ಭೇಟಿ ನೀಡಿದ ಕೇಂದ್ರ ಸಚಿವರು, ಕಾಲ ಭೈರವೇಶ್ವರನ ದರ್ಶನ ಪಡೆದು ಮಠದ ಪೀಠಾಧಿಪತಿ ನಿರ್ಮಲಾನಂದ ಶ್ರೀಗಳೊಂದಿಗೆ ಕೆಲಕಾಲ ಮಾತುಕತೆ ನಡೆಸಿದ ಬಳಿಕ ಶ್ರೀಮಠದ ಆವರಣದಲ್ಲಿ ಏರ್ಪಡಿಸಿದ್ದ ಪೋಲಿಯೋ ಲಸಿಕೆ ಹಾಕುವ ಸ್ಥಳಕ್ಕೆ ಭೇಟಿ ನೀಡಿ ಮಕ್ಕಳಿಗೆ ಖುದ್ದು ತಾವೇ ಲಸಿಕೆ ಹಾಕಿದರು.

ಬಳಿಕ ಮಾತನಾಡಿದ ಕುಮಾರಸ್ವಾಮಿ, ಪ್ರತಿಯೊಬ್ಬ ಪೋಷಕರು ತಮ್ಮ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸುವಂತೆ ಕರೆ ನೀಡಿದರು.

ಪೋಲಿಯೋ ಮುಕ್ತ ವಿಶ್ವ ನಿರ್ಮಾಣಕ್ಕಾಗಿ ಲಸಿಕೆ ಹಾಕಿಸಿ: ಪೋಲಿಯೋ ಮುಕ್ತ ವಿಶ್ವ ನಿರ್ಮಾಣಕ್ಕಾಗಿ ಕಡ್ಡಾಯವಾಗಿ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸಬೇಕೆಂದು ಶಾಸಕ ರಮೇಶ್‌ಬಾಬು ಬಂಡಿಸಿದ್ದೇಗೌಡ ತಿಳಿಸಿದರು.

ಶ್ರೀರಂಗಪಟ್ಟಣದ ಸಾರ್ವಜನಿಕ ಆಸ್ಪತ್ರೆ ಸಭಾಂಗಣದಲ್ಲಿ ಮಗುವಿಗೆ ಪೋಲಿಯೋ ಹನಿ ಹಾಕುವ ಮೂಲಕ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ಜಿಲ್ಲಾ ಕ್ಷಯರೋಗ ನಿರ್ಮೂಲನಾಧಿಕಾರಿ ಡಾ.ಆಶಾಲತಾ ಮಾತನಾಡಿ, ತಾಲೂಕಿನಲ್ಲಿ 11676 ಮಕ್ಕಳಿಗೆ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಇದಕ್ಕಾಗಿ 69 ಲಸಿಕಾ ಕೇಂದ್ರಗಳನ್ನು ತೆರೆಯಲಾಗಿದ್ದು, 276 ಲಸಿಕೆದಾರರನ್ನು ಹಾಗೂ 14 ಜನ ಮೇಲ್ವಿಚಾರಕರನ್ನು ನೇಮಿಸಲಾಗಿದೆ. ಪ್ರಮುಖ ಪ್ರವಾಸಿ ತಾಣಗಳಲ್ಲಿಯೂ ಪೋಲಿಯೋ ಬೂತ್‌ಗಳನ್ನು ತೆರೆಯಲಾಗಿದೆ ಎಂದರು.

ಪುರಸಭೆ ಮಾಜಿ ಅಧ್ಯಕ್ಷ ದಿನೇಶ್, ತಾಪಂ ಇಓ ವೇಣು, ಸಿಡಿಪಿಓ ಸಕಲೇಶ್ವರ, ಪುರಸಭೆ ಮುಖ್ಯಾಧಿಕಾರಿ ರಾಜಣ್ಣ, ಆರೋಗ್ಯ ರಕ್ಷಾ ಸಮಿತಿ ಸದಸ್ಯರಾದ ರವಿಕುಮಾರ್, ಎಸ್.ದೇವರಾಜು, ಅನಿಲ್ ಕುಮಾರ್, ಇಮ್ರಾನ್, ಆಸ್ಪತ್ರೆ ವೈದ್ಯಾಧಿಕಾರಿ ಡಾ.ವಿಜಯಲಕ್ಷ್ಮಿ, ಮಕ್ಕಳ ತಜ್ಞ ಡಾ.ಶ್ರೀಧರ್, ಪ್ರಸೂತಿ ಹಾಗೂ ಸ್ತ್ರೀರೋಗ ತಜ್ಞೆ ಡಾ.ಸವಿತಾ, ಆರೋಗ್ಯ ಶಿಕ್ಷಣಾಧಿಕಾರಿ ಬೆನ್ನೂರ್ ಇದ್ದರು.

ಅಭಿಯಾನಕ್ಕೆ ಡಿಸಿ ಚಾಲನೆ: ಮಳವಳ್ಳಿ ಸಾರ್ವಜನಿಕ ಆಸ್ಪತ್ರೆಯಲ್ಲಿ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನಕ್ಕೆ ಜಿಲ್ಲಾಧಿಕಾರಿ ಡಾ.ಕುಮಾರ್ ಚಾಲನೆ ನೀಡಿದರು. ಈ ವೇಳೆ ತಾಲೂಕು ಆರೋಗ್ಯಾಧಿಕಾರಿ ವೀರಭದ್ರಪ್ಪ ಹಾಗೂ ಇತರರಿದ್ದರು.

ಪಾಂಡವಪುರದಲ್ಲೂ ಚಾಲನೆ: ಪಟ್ಟಣದ ಸಾರ್ವಜನಿಕ ಉಪ ವಿಭಾಗೀಯ ಆಸ್ಪತ್ರೆ ಆವರಣದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ತಹಶೀಲ್ದಾರ್ ಹಾಗೂ ಆಸ್ಪತ್ರೆ ಆಡಳಿತ ವೈದ್ಯಾಧಿಕಾರಿ ಡಾ.ಸಿ.ಎ.ಅರವಿಂದ್ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು.

ಆಡಳಿತ ವೈದ್ಯಾಧಿಕಾರಿ ಡಾ.ಸಿ.ಎ.ಅರವಿಂದ್ ಮಾತನಾಡಿ, ತಾಲೂಕಿನಲ್ಲಿ 5 ವರ್ಷದೊಳಗಿನ 11,053 ಮಕ್ಕಳಿದ್ದು, ಎಲ್ಲರಿಗೂ ಲಸಿಕೆ ಹಾಕಲಾಗುವುದು. ಇದಕ್ಕಾಗಿ ಆರೋಗ್ಯ ಇಲಾಖೆಯೊಂದಿಗೆ ಅಂಗನವಾಡಿ, ಆಶಾ ಕಾರ್ಯಕರ್ತೆಯರನ್ನು ಬಳಸಿಕೊಳ್ಳಲಾಗಿದೆ. ಒಟ್ಟು 57 ಬೂತ್‌ಗಳನ್ನು ನಿಯೋಜಿಸಲಾಗಿದ್ದು, ಹೊರಗಿನಿಂದ ಬರುವವರಿಗೆ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಹಾಗೂ ಹೊಸಕನ್ನಂಬಾಡಿ ಗ್ರಾಮದ ವೇಣುಗೋಪಾಲಸ್ವಾಮಿ ದೇವಸ್ಥಾನದ ಬಳಿ ಬೂತ್ ನಿರ್ಮಿಸಲಾಗಿದೆ. ಅಲ್ಲದೇ 12 ಮೇಲ್ವಿಚಾರಕರು, 234 ಸಿಬ್ಬಂದಿ ಹಾಗೂ 13 ವಾಹನಗಳನ್ನು ಬಳಕೆ ಮಾಡಿಕೊಳ್ಳಲಾಗಿದೆ ಎಂದರು.

ರಕ್ಷಾ ಸಮಿತಿ ಸದಸ್ಯ ಮಂಜುನಾಥ್, ಕ್ಷೇತ್ರ ಆರೋಗ್ಯ ಶಿಕ್ಷಣಾಧಿಕಾರಿ ಶಿವಮ್ಮ, ಹಿರಿಯ ಆರೋಗ್ಯ ನಿರೀಕ್ಷಣಾಧಿಕಾರಿ ಎಂ.ಕೆ.ಪುಟ್ಟಸ್ವಾಮಿ, ಡಾ.ಸುಪ್ರೀತ ಸೇರಿದಂತೆ ಇತರರಿದ್ದರು.

ಪೋಲಿಯೋ ತಡೆಗಟ್ಟುವಿಕೆಗೆ ಲಸಿಕೆ ಹಾಕಿಸಿ: 5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ 2 ಹನಿ ಪೋಲಿಯೋ ಲಸಿಕೆ ಹಾಕಿಸಿ ಮಕ್ಕಳಿಗೆ ಪೋಲಿಯೋ ಬಾರದಂತೆ ಪಾಲಕರು ನೋಡಿಕೊಳ್ಳಬೇಕೆಂದು ಶಾಸಕ ಕೆ.ಎಂ.ಉದಯ್ ತಿಳಿಸಿದರು.

ಮದ್ದೂರಿನ ಸರ್ಕಾರಿ ಬಸ್ ನಿಲ್ದಾಣದ ಆವರಣದಲ್ಲಿ ರೋಟರಿ, ಆರೋಗ್ಯ ಇಲಾಖೆ ಸೇರಿದಂತೆ ವಿವಿಧ ಸಂಘಟನೆಗಳ ವತಿಯಿಂದ ಹಮ್ಮಿಕೊಂಡಿದ್ದ ಪೋಲಿಯೋ ಲಸಿಕೆ ಹಾಕುವ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು.

ತಾಲೂಕಿನಾದ್ಯಂತ 115 ಬೂತ್‌ಗಳನ್ನು ನಿರ್ಮಿಸಿ, ಲಸಿಕೆ ಹಾಕಲು 228 ತಂಡ ರಚಿಸಲಾಗಿದ್ದು, ವಿವಿಧ ಸಂಘ, ಸಂಸ್ಥೆಗಳ 460 ಪದಾಧಿಕಾರಿಗಳು ಲಸಿಕೆ ಹಾಕಲು ಸಹಕಾರ ನೀಡುತ್ತಿದ್ದಾರೆ ಎಂದರು.

ಆರೋಗ್ಯಾಧಿಕಾರಿ ಡಾ.ರವಿಶಂಕರ್ ಮಾತನಾಡಿದರು. ರೋಟರಿ ತಾಲೂಕು ಅಧ್ಯಕ್ಷ ಶ್ರೀನಿವಾಸ್, ಜಿಲ್ಲಾ ಕಾರ್ಯದರ್ಶಿ ಬಿ.ಡಿ.ಹೊನ್ನೇಗೌಡ, ವಲಯ ರಾಯಭಾರಿ ತಿಪ್ಪೂರು ರಾಜೇಶ್, ಸಹಾಯಕ ಪಾಲಕಿ ಅನುಪಮ ಇತರರಿದ್ದರು.

ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸಿ



ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಶಾಸಕ ರವಿಕುಮಾರ್ ಚಾಲನೆ ನೀಡಿದರು.

ಮಂಡ್ಯ: ಡಿ.21ರಿಂದ 24ರವರೆಗೆ ಜಿಲ್ಲೆಯಲ್ಲಿ ಗ್ರಾಮೀಣ ಭಾಗದಲ್ಲಿ 3 ದಿನ, ನಗರದಲ್ಲಿ 4 ದಿನ ಪಲ್ಸ್ ಪೋಲಿಯೋ ಅಭಿಯಾನ ನಡೆಸಲಾಗುತ್ತಿದ್ದು, ಪ್ರತಿಯೊಬ್ಬರೂ ಕಡ್ಡಾಯವಾಗಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಪಲ್ಸ್ ಪೋಲಿಯೋ ಲಸಿಕೆ ಹಾಕಿಸಿ ಎಂದು ಶಾಸಕ ಪಿ.ರವಿಕುಮಾರ್ ಸಾರ್ವಜನಿಕರಲ್ಲಿ ಮನವಿ ಮಾಡಿದರು.

ಜಿಲ್ಲಾಡಳಿತದಿಂದ ನಗರದ ಕಲ್ಲಹಳ್ಳಿ ಸರ್ಕಾರಿ ಹಿರಿಯ ಪ್ರಾಥಮಿಕ ಪಾಠಶಾಲೆಯಲ್ಲಿ ನಡೆದ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಮಕ್ಕಳಿಗೆ ಪಲ್ಸ್ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ಅವರನ್ನು ಶಾಶ್ವತವಾಗಿ ಅಂಗವೈಕಲ್ಯದಿಂದ ಮುಕ್ತ ಮಾಡಬಹುದು. ಮುಂದೆ ಯಾವುದೇ ಅಂಗವೈಕಲ್ಯತೆ ಮಕ್ಕಳಿಗೆ ಕಾಡದಿರಲು ಸರ್ಕಾರದೊಂದಿಗೆ ಕೈ ಜೋಡಿಸಿ ಪಲ್ಸ್ ಪೋಲಿಯೋ ಅಭಿಯಾನ ಯಶಸ್ವಿಗೊಳಿಸಿ ಹಾಗೂ ಕೂಡಲೇ ನಿಮ್ಮ ಹತ್ತಿರದ ಅಭಿಯಾನದಲ್ಲಿ ಮಕ್ಕಳಿಗೆ 2 ಹನಿ ಪೋಲಿಯೋ ಲಸಿಕೆ ಹಾಕಿಸಿ ಎಂದರು.

ಜಿಪಂ ಸಿಇಓ ಕೆಆರ್.ನಂದಿನಿ, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಡಿಹೆಚ್ಓ ಡಾ.ಕೆ.ಮೋಹನ್, ಮಿಮ್ಸ್ ನಿರ್ದೇಶಕ ಡಾ.ಪಿ.ನರಸಿಂಹಸ್ವಾಮಿ, ಆರ್‌ಸಿಹೆಚ್ ಅಧಿಕಾರಿ ಡಾ.ಕೆ.ಪಿ.ಅಶ್ವಥ್, ಕುಷ್ಠರೋಗ ನಿರ್ಮೂಲನಾಧಿಕಾರಿ ಡಾ.ಸೋಮಶೇಖರ್, ತಾಲೂಕು ಆರೋಗ್ಯಾಧಿಕಾರಿ ಡಾ.ಜವರೇಗೌಡ, ನಗರಸಭಾ ಆಯುಕ್ತ ಪಂಪಶ್ರೀ ಸೇರಿದಂತೆ ಇನ್ನಿತರರಿದ್ದರು.

ಬೈಕ್‌ನಿಂದ ಬಿದ್ದು ಯುವಕ ಸಾವು



ದರ್ಶನ್

ಕಿಕ್ಕೇರಿ, ಡಿ.21– ಬೈಕ್‌ನಿಂದ ಬಿದ್ದು ಯುವಕನೋರ್ವ ಸ್ಥಳದಲ್ಲೇ ಸಾವನ್ನಪ್ಪಿರುವ ಘಟನೆ ರಾಮನಹಳ್ಳಿ ಬಳಿ ಶನಿವಾರ ರಾತ್ರಿ ನಡೆದಿದೆ.

ಇಲ್ಲಿಗೆ ಸಮೀಪದ ವಡ್ಡರಹಳ್ಳಿ ಗ್ರಾಮದ ನಿವಾಸಿ ದರ್ಶನ್ (25) ಸಾವನ್ನಪ್ಪಿದವರು. ಈತ ಕಾರ್ಯನಿಮಿತ್ತ ಕಿಕ್ಕೇರಿಗೆ ಆಗಮಿಸಿ ಬಳಿಕ ಸ್ವಗ್ರಾಮಕ್ಕೆ ಬೈಕ್‌ನಲ್ಲಿ ತೆರಳುತ್ತಿದ್ದ ವೇಳೆ ರಾಮನಹಳ್ಳಿ ಬಳಿ ನಿಯಂತ್ರಣ ತಪ್ಪಿ ಬೈಕ್‌ನಿಂದ ಬಿದ್ದು ತೀವ್ರವಾಗಿ ಗಾಯಗೊಂಡು ಸ್ಥಳದಲ್ಲೇ ಸಾವನ್ನಪ್ಪಿದ್ದಾರೆ. ವಿಷಯ ತಿಳಿದು ಸ್ಥಳಕ್ಕಾಗಮಿಸಿದ ಕಿಕ್ಕೇರಿ ಠಾಣೆ ಪೊಲೀಸರು ಪರಿಶೀಲಿಸಿ, ಶವವನ್ನು ಕೆ.ಆರ್.ಪೇಟೆ ಸಾರ್ವಜನಿಕ ಆಸ್ಪತ್ರೆಗೆ ರವಾನಿಸಿ ಮರಣೋತ್ತರ ಪರೀಕ್ಷೆ ಬಳಿಕ ವಾರಸುದಾರರಿಗೆ ಒಪ್ಪಿಸಿದರು. ಈ ಸಂಬಂಧ ಕಿಕ್ಕೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಅರ್ಜಿ ಸಲ್ಲಿಸುವ ಅವಧಿ ವಿಸ್ತರಣೆ

ಮಂಡ್ಯ, ಡಿ.21– ಕರ್ನಾಟಕ ರಾಜ್ಯ ಬ್ರಾಹ್ಮಣ ಅಭಿವೃದ್ಧಿ ಮಂಡಳಿಯಿಂದ ಆರ್ಥಿಕವಾಗಿ ಹಿಂದುಳಿದ ಬ್ರಾಹ್ಮಣ ಸಮುದಾಯದವರಿಗೆ ಚಾಣಕ್ಯ ಆಡಳಿತ ತರಬೇತಿ ಯೋಜನೆಯಡಿ 2025–26ನೇ ಸಾಲಿನ ನಾಗರಿಕ ಸೇವೆಗಳಾದ ಐಎಎಸ್ ಮತ್ತು ಕೆಎಎಸ್ ತರಬೇತಿ ಪಡೆಯುತ್ತಿರುವ ರಾಜ್ಯದ ಅರ್ಹ ಬ್ರಾಹ್ಮಣ ಪದವೀಧರರಿಗೆ ತರಬೇತಿ ಶುಲ್ಕ ಮರುಪಾವತಿಗೆ ಅರ್ಜಿ ಸಲ್ಲಿಕೆ ಅವಧಿಯನ್ನು ಡಿ.31ರ ಸಂಜೆ 5 ಗಂಟೆಯವರೆಗೆ ವಿಸ್ತರಿಸಲಾಗಿದೆ. ಮಾಹಿತಿಗೆ ದೂ.ಸಂ:08232–295010, 9964181442 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಜನರಿಗೆ ನಾಗರಿಕತೆ ಕಲಿಸಿದ್ದು ಶಿವರಾತ್ರೀಶ್ವರರು: ಸಚಿವ ಹೆಚ್‌ಸಿಎಂ



ಮಳವಳ್ಳಿಯಲ್ಲಿ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ ಜಯಂತ್ಯೋತ್ಸವದ ಸಮಾರೋಪ ಸಮಾರಂಭ ನಡೆಯಿತು.

ಮಳವಳ್ಳಿ, ಡಿ.21– ಪ್ರತಿವರ್ಷ ಸುತ್ತೂರು ಮಠ ರಾಜೇಂದ್ರ ಶ್ರೀ ಹಾಗೂ ಶಿವರಾತ್ರೀಶ್ವರರ ಜಯಂತ್ಯೋತ್ಸವಗಳನ್ನು ಆಚರಿಸಿಕೊಂಡು ಬರುತ್ತಿದ್ದು, ಜಯಂತಿಯಿಂದಾಗುವ ಲಾಭವೇನು ಎಂಬುದರ ಬಗ್ಗೆ ನಾವು ಯೋಚಿಸಬೇಕು. 1066ರಲ್ಲಿ ನಾಗರಿಕತೆ, ವಿದ್ಯೆ, ತಿಳುವಳಿಕೆ ಇರಲಿಲ್ಲ. ಆದರೆ ಆ ಕಾಲದಲ್ಲೇ ಶಿವರಾತ್ರೀಶ್ವರ ಶ್ರೀಗಳು ಜನರಿಗೆ ನಾಗರಿಕತೆ ಕಲಿಸಿ, ಸಮುದಾಯ ಬೆಳೆಸುವ ಕೆಲಸ ಮಾಡಿದರು. ಸಾಮರಸ್ಯ ಉಂಟು ಮಾಡುವ, ಪರಸ್ಪರ ವ್ಯಕ್ತಿಗಳನ್ನು ಪ್ರೀತಿಸುವ ಕೆಲಸ ಮಾಡಿದ್ದಾರೆ. ಇದೇ ಅತ್ಯಂತ ದೊಡ್ಡ ಸಾಧನೆ. ಇದಕ್ಕಿಂತ ಏನು ಬೇಕು ಎಂದು ಸಮಾಜ ಕಲ್ಯಾಣ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಪ್ರಶ್ನಿಸಿದರು.

ಪಟ್ಟಣದಲ್ಲಿ ನಡೆದ ಶ್ರೀಶಿವರಾತ್ರೀಶ್ವರ ಶಿವಯೋಗಿಗಳ 1066ನೇ ಜಯಂತ್ಯೋತ್ಸವ ಸಮಾರೋಪದಲ್ಲಿ ಮಾತನಾಡಿದ ಅವರು, ಮೊದಲು ಹುಟ್ಟಿದ್ದು ಮನುಷ್ಯ, ನಂತರ ಧರ್ಮ, ಮನುಷ್ಯನ ಶ್ರೇಯಸ್ಸೇ ಧರ್ಮದ ಗುರಿ. ಧರ್ಮವನ್ನು ಅರ್ಥೈಸಿಕೊಂಡು ಮನುಷ್ಯನ ಹಿತಕ್ಕಾಗಿ ಇರುವ ಧರ್ಮವನ್ನು ಸ್ವಾರ್ಥ, ಅಪಾರ್ಥಕ್ಕೆ ಬಳಸದೇ, ಗೌರವ ಸೋದರತ್ವವನ್ನು ಬೆಳೆಸಿರುವುದೇ ಈ ಜಯಂತ್ಯೋತ್ಸವದ ಉದ್ದೇಶ ಎಂದರು.

ಬುದ್ಧ, ಬಸವ, ಅಂಬೇಡ್ಕರ್, ಸಾಧು–ಸಂತರನ್ನು ನೆನಪಿಸಿಕೊಳ್ಳುತ್ತೇವೆ. ಶ್ರೀಮಠಕ್ಕೆ ಎಲ್ಲಾ ರಾಜಕೀಯ ಪಕ್ಷಗಳ ಮುಖಂಡರು, ಎಲ್ಲಾ ಧರ್ಮದವರು, ಎಲ್ಲಾ ಸಮುದಾಯದವರು ಬರುತ್ತಾರೆ. ಅವರಿಗಿಂತ ನೀವು ಹೆಚ್ಚು ಎಂದು ಶ್ರೀಗಳು ಹೇಳಿಲ್ಲ. ಇಂತಹವರೇ ಸಿಎಂ ಆಗಬೇಕೆಂದು ಅಥವಾ ಮುಂದೆ ನೀವೇ ಸಿಎಂ ಆಗುತ್ತೀರಿ ಎಂದು ಸಹ ಹೇಳಿಲ್ಲ. ಸರ್ಕಾರವನ್ನು ಯಾರು ನಡೆಸಬೇಕೆಂಬ ಮಾಲೀಕರನ್ನು ಆಯ್ಕೆ ಮಾಡುವ ಬಗ್ಗೆ ಜನರಿಗೆ ಗೊತ್ತಿದೆ ಎಂಬುದು ಸುತ್ತೂರು ಶ್ರೀಗಳಿಗೆ ತಿಳಿದಿದೆ ಎಂದರು.

ಅಂಬೇಡ್ಕರ್ ಅವರನ್ನು ಎಷ್ಟೇ ಶೋಷಿಸಿದರೂ ಅವರ ವಿರುದ್ಧ ಅಂಬೇಡ್ಕರ್ ಮಾತನಾಡಿದವರಲ್ಲ. ದ್ವೇಷ ಸಾಧಿಸಲಿಲ್ಲ. ಆ ಪರಂಪರೆ ಸಮಾಜದಲ್ಲಿ ಮುಂದುವರೆಯಬೇಕು. ರಾಜ್ಯದ ಯಾವುದೇ ಮೂಲೆಯಲ್ಲಿ ಶ್ರೀಮಠದ ಜಯಂತ್ಯೋತ್ಸವ ಮಾಡಿದರೆ ಜನ ಸೇರುತ್ತಾರೆಂದರೆ ಮಠದ ಬಗ್ಗೆ ಜನರಿಗಿರುವ ಪ್ರೀತಿ ಕಾರಣ ಎಂದರು.

ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ ಮಾತನಾಡಿ, ಶಿವರಾತ್ರೀಶ್ವರರ 1066ನೇ ಜಯಂತ್ಯೋತ್ಸವ ನಡೆಯುತ್ತಿದೆ ಎಂದರೆ ಎಷ್ಟು ವರ್ಷದಿಂದ ಈ ಮಠ ಜನರ ಸೇವೆ ಮಾಡುತ್ತಿದೆ ಎಂಬುದನ್ನು ಅರ್ಥ ಮಾಡಿಕೊಳ್ಳಬೇಕು. ಪ್ರಸ್ತುತ ಸುತ್ತೂರು ಶ್ರೀಗಳು ಆರೋಗ್ಯ, ಶಿಕ್ಷಣ, ದಾಸೋಹ ಕ್ಷೇತ್ರದಲ್ಲಿ ನಾಡಿನ ಪ್ರಮುಖ ಮಠವಾಗಿ ಗುರುತಿಸಿಕೊಂಡು, ಶಿಕ್ಷಣಕ್ಕೆ ಹೆಚ್ಚಿನ ಒತ್ತು ನೀಡಿ ಹೊರದೇಶವಾದ ಅಮೆರಿಕಾದಲ್ಲೂ ಶ್ರೀಮಠದ ಶಾಖೆ ತೆರೆದಿದ್ದಾರೆ ಎಂದು ಶ್ಲಾಘಿಸಿದರು.

ಸರ್ಕಾರ ಬಡವರ ಹಿತಕ್ಕಾಗಿ ಕಾರ್ಯಕ್ರಮ ಹಮ್ಮಿಕೊಂಡಂತೆ ಸುತ್ತೂರು ಮಠವು ಬಡವರ ಕೈಂಕರ್ಯಕ್ಕೋಸ್ಕರ ಹಲವು ಕಾರ್ಯಕ್ರಮ ರೂಪಿಸಿದೆ. ಸಿಎಂ ಸಿದ್ದರಾಮಯ್ಯ ಸಹ ಬಡವರ ಕಲ್ಯಾಣಕ್ಕೋಸ್ಕರ ಹಲವು ಕಾರ್ಯಕ್ರಮ ಕೊಟ್ಟಿದ್ದಾರೆ. ಬೇರೆ ರಾಜ್ಯಗಳಿಗಿಂತ ವಿಭಿನ್ನವಾಗಿ ರಾಜ್ಯದಲ್ಲಿ ಅಭಿವೃದ್ಧಿ, ಜನಪರ ಕಾರ್ಯಗಳನ್ನು ಸಿದ್ದರಾಮಯ್ಯ ಅನುಷ್ಠಾನಗೊಳಿಸಿದ್ದಾರೆ ಎಂದರು.

ಒಂದನೇ ಪುಟದಿಂದ

ಆರ್ಥಿಕ ಶಕ್ತಿಯಿಂದಷ್ಟೇ ಜಾತಿ ಅವನತಿ

ವೈಚಾರಿಕ ಶಿಕ್ಷಣ ಅಗತ್ಯ: ವೈಜ್ಞಾನಿಕ, ವೈಚಾರಿಕ ಜ್ಞಾನ ಇಲ್ಲದಿದ್ದರೆ ಎಷ್ಟೇ ವಿದ್ಯಾವಂತರಾದರೂ ಪ್ರಯೋಜನವಿಲ್ಲ. ವಿಧಿ, ಹಣೆ ಬರಹ ಎಂದು ಜನ ನಂಬುತ್ತಾರೆ. ಆದರೆ ಯಾರ ಹಣೆ ಬರಹವನ್ನು ಯಾರಿಂದಲೂ ಬರೆಯಲು ಸಾಧ್ಯವಿಲ್ಲ. ನಮ್ಮ ವಿದ್ಯಾವಂತಿಕೆ, ಬೆಳವಣಿಗೆಯೊಂದಿಗೆ ಮನುಷ್ಯತ್ವ ರೂಢಿಸಿಕೊಳ್ಳುವುದು ಅವಶ್ಯ. ನಿಜವಾದ ಮನುಷ್ಯರಾಗಬೇಕಾದರೆ ಮೊದಲು ಇನ್ನೊಬ್ಬ ಮನುಷ್ಯನ ಪ್ರೀತಿಸುವುದನ್ನು ಕಲಿಯಬೇಕು. ವೈರುಧ್ಯತೆಯ ಸಮಾಜ ಬದಲಾವಣೆಯಾಗಬೇಕಾದರೆ ಮೊದಲು ನಾವು ಮನುಷ್ಯರಾಗಬೇಕು. ಇದನ್ನೇ ಡಾ.ಅಂಬೇಡ್ಕರ್ ಅವರು ಪ್ರತಿಪಾದಿಸಿದ್ದರು ಎಂದು ಹೇಳಿದರು.

ಸಮಾರಂಭದಲ್ಲಿ ಸುತ್ತೂರು ವೀರ ಸಿಂಹಾಸನ ಮಠದ ಪೀಠಾಧಿಪತಿ ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಸಿದ್ಧಗಂಗಾ ಮಠದ ಪೀಠಾಧಿಪತಿ ಶ್ರೀಸಿದ್ಧ ಗಂಗಾ ಸ್ವಾಮೀಜಿ, ಕನಕಪುರ ದೇಗುಲ ಮಠದ ಹಿರಿಯ ಶ್ರೀ ಮುಮ್ಮಡಿ ನಿರ್ವಹಣಾನಂದ ಸ್ವಾಮೀಜಿ, ಕಿರಿಯ ಶ್ರೀಚನ್ನಬಸವಾನಂದ ಸ್ವಾಮೀಜಿ, ವಾಲ್ಮೀಕಿ ಪೀಠದ ಪೀಠಾಧಿಪತಿ ಶ್ರೀ ಪ್ರಸನ್ನಾನಂದ ಸ್ವಾಮೀಜಿ ಸಾನಿಧ್ಯ ವಹಿಸಿದ್ದರು. ಜಿಲ್ಲಾ ಉಸ್ತುವಾರಿ ಸಚಿವ ಎನ್.ಚಲುವರಾಯಸ್ವಾಮಿ, ಶಾಸಕರಾದ ಪಿ.ಎಂ.ನರೇಂದ್ರಸ್ವಾಮಿ, ರಮೇಶ್ ಬಂಡಿಸಿದ್ದೇಗೌಡ, ಕೆ.ಎಂ.ಉದಯ್, ರವಿಕುಮಾರ್ ಗಣಿಗ, ಗಣೇಶ್ ಪ್ರಸಾದ್, ವಿಧಾನ ಪರಿಷತ್ ಸದಸ್ಯರಾದ ಡಾ.ಯತೀಂದ್ರ, ಮಧು ಜಿ.ಮಾದೇಗೌಡ, ಕೆ.ವಿವೇಕಾನಂದ, ಮಾಜಿ ಉಪಸಭಾಪತಿ ಮರಿತಿಬ್ಬೇಗೌಡ, ಮಾಜಿ ಶಾಸಕಿ ಮಲ್ಲಾಜಮ್ಮ, ಮೈಷುಗರ್ ಅಧ್ಯಕ್ಷ ಸಿ.ಡಿ.ಗಂಗಾಧರ್, ಸಣ್ಣ ಕೈಗಾರಿಕಾ ಅಭಿವೃದ್ಧಿ ನಿಗಮದ ಉಪಾಧ್ಯಕ್ಷೆ ವಿಜಯಲಕ್ಷ್ಮಿ, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಕಾಡಾ ಅಧ್ಯಕ್ಷ ಮರಿಸ್ವಾಮಿ, ಮನ್‌ಮುಲ್ ನಿರ್ದೇಶಕ ಕೃಷ್ಣೇಗೌಡ, ರಾಮಮನೋಹರ ಲೋಹಿಯಾ ವಿಚಾರ ವೇದಿಕೆ ಅಧ್ಯಕ್ಷ ಶಿವಣ್ಣ ಸೇರಿದಂತೆ ಹಲವು ಗಣ್ಯರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

ಡಿ.26ರಿಂದ ರೈಲ್ವೆ ಪ್ರಯಾಣ ದರ ಏರಿಕೆ

ರೂ.ಗಳಿಗೆ ತಲುಪಿದೆ ಎಂದು ರೈಲ್ವೆ ಹೇಳಿಕೆಯಲ್ಲಿ ತಿಳಿಸಿದೆ. ಈ ಹೆಚ್ಚುತ್ತಿರುವ ವೆಚ್ಚಗಳನ್ನು ನಿರ್ವಹಿಸಲು, ಭಾರತೀಯ ರೈಲ್ವೆ ಹೆಚ್ಚಿನ ಸರಕುಗಳನ್ನು ಸಾಗಿಸುವ ಮೂಲಕ ಮತ್ತು ಪ್ರಯಾಣಿಕರ ಟಿಕೆಟ್ ದರಗಳಲ್ಲಿ ಸಣ್ಣ, ನಿಯಂತ್ರಿತ ಹೆಚ್ಚಳವನ್ನು ಮಾಡುವ ಮೂಲಕ ಹೆಚ್ಚಿನ ಆದಾಯ ಗಳಿಸಲು ಮುಂದಾಗಿದೆ. ಈ ಕ್ರಮಗಳು ಸುಧಾರಿತ ಸುರಕ್ಷತೆ ಮತ್ತು ಕಾರ್ಯಾಚರಣೆಯ ದಕ್ಷತೆಗೆ ಕೊಡುಗೆ ನೀಡಿವೆ ಎಂದು ರೈಲ್ವೆ ಗಮನಿಸಿದೆ. ಭಾರತವು ವಿಶ್ವದ ಎರಡನೇ ಅತಿದೊಡ್ಡ ಸರಕು ಸಾಗಿಸುವ ರೈಲ್ವೆಯಾಗಿ ಹೊರಹೊಮ್ಮಿದೆ. ಇತ್ತೀಚಿನ ಹಬ್ಬದ ಋತುವಿನಲ್ಲಿ 12,000ಕ್ಕೂ ಹೆಚ್ಚು ವಿಶೇಷ ರೈಲುಗಳ ಯಶಸ್ವಿ ಕಾರ್ಯಾಚರಣೆಯು ಇದಕ್ಕೆ ಸ್ಪಷ್ಟ ಉದಾಹರಣೆಯಾಗಿದೆ ಎಂದು ಹೇಳಿಕೆಯಲ್ಲಿ ಸೇರಿಸಿದೆ.

ಡಿ.ಕೆ. ಶಿವಕುಮಾರ್ ಸಮರ್ಥನೆ

ಏನಾದರೂ ಇದೆಯಾ. ಭಿನ್ನಾಭಿಪ್ರಾಯಗಳನ್ನು ಮಾಧ್ಯಮಗಳು, ವಿರೋಧ ಪಕ್ಷಗಳು ಸೃಷ್ಟಿ ಮಾಡುತ್ತಿವೆ. ತಮಗೆ ಬೇಕಾದ ಆಹಾರ ಸೃಷ್ಟಿಸುತ್ತಿದ್ದಾರೆ. ಕೆಲವು ಸಂದರ್ಭಗಳಲ್ಲಿ ರಾಜಕೀಯವಾಗಿ ಹೇಳಿಕೆ ಕೊಟ್ಟಿರುತ್ತಾರೆ. ಇದಕ್ಕೆ ಬೇಸರ ಮಾಡಿಕೊಳ್ಳಲು ಆಗುತ್ತದೆಯೇ. ಅಣ್ಣ ತಮ್ಮಂದಿರೇ ಜಗಳ ಮಾಡುತ್ತಾರಂತೆ, ಇನ್ನು ನಮ್ಮದು ಯಾವ ಜಗಳ ಎಂದರು.

ಎಲ್ಲಾ ಕಾಂಗ್ರೆಸ್ ನಾಯಕರು ಒಟ್ಟಾಗಿ ಕೆಲಸ ಮಾಡುತ್ತಿದ್ದೇವೆ. ಎಲ್ಲರೂ ನನ್ನ ಸ್ನೇಹಿತರು, ಸಹೋದ್ಯೋಗಿಗಳು, ಒಟ್ಟಿಗೆ ಇದ್ದೇವೆ. ನಾನಂತು ಯಾರ ಮೇಲೂ ಜಗಳ ಮಾಡಲು ಹೋಗಿಲ್ಲ. ಯಾವ ವಿಚಾರಕ್ಕೂ ಒಬ್ಬರ ಮೇಲೆ ಇನ್ನೊಬ್ಬರು ಇದುವರೆಗೂ ಹೇಳಿಕೆ ನೀಡಿಲ್ಲ. ದಾಖಲೆಗಳನ್ನು ತೆಗೆದು ನೋಡಿ. ವಿರೋಧ ಪಕ್ಷದವರ ಹೇಳಿಕೆಗಳಿಗೆ ನಾನು ಪ್ರತಿಕ್ರಿಯೆ ನೀಡಿದ್ದೇನೆಯೇ ಹೊರತು ನಾನಾಗಿಯೇ ಯಾರ ಮೇಲೂ ಹೇಳಿಕೆ ನೀಡಿಲ್ಲ. ನಾನಾಗಿಯೇ ಒಬ್ಬರ ಮೇಲಾದರೂ ಹೇಳಿಕೆ ನೀಡಿದ್ದರೆ ತಿಳಿಸಿ ಎಂದರು.

ರಾಜಣ್ಣ ಅವರು ನಮ್ಮ ಶಾಸಕರು, ನಮ್ಮ ಜತೆ ಮಂತ್ರಿಯಾಗಿದ್ದವರು. ಸೌಹಾರ್ದಯುತ ಭೇಟಿ ಮಾಡುತ್ತೇವೆ. ಶನಿವಾರ ಸರಿಯಾಗಿ ಮಾತನಾಡಲು ಆಗಲಿಲ್ಲ. ಅದಕ್ಕೆ ಇಂದು (ಭಾನುವಾರ) ಸಹ ಭೇಟಿ ಮಾಡುತ್ತೇನೆ ಎಂದು ಹೇಳಿದ್ದೇನೆ. ರಾಜ್ಯಪಾಲರ ಕಾರ್ಯಕ್ರಮ ಇರುವ ಕಾರಣಕ್ಕೆ ಆನಂತರ ಭೇಟಿ ಮಾಡುತ್ತೇನೆ ಎಂದರು.

ಪಕ್ಷದಲ್ಲಿ ಯಾವ ಗೊಂದಲವೂ ಇಲ್ಲ: ಬಿ.ಆರ್. ಸುದರ್ಶನ ಅವರು ಎಲ್ಲಾ ಗೊಂದಲಗಳನ್ನು ಬಗೆಹರಿಸಿ ಎಂದು ಮಲ್ಲಿಕಾರ್ಜುನ ಖರ್ಗೆ ಅವರಿಗೆ ಪತ್ರ ಬರೆದಿರುವ ಬಗ್ಗೆ ಕೇಳಿದಾಗ, ನನ್ನ ಪ್ರಕಾರ ಯಾವ ಗೊಂದಲವೂ ಇಲ್ಲ. ಗೊಂದಲ ಎಲ್ಲಿದೆ. ಗೊಂದಲ ಮಾಧ್ಯಮ ಹಾಗೂ ಬಿಜೆಪಿ ಸೃಷ್ಟಿ, ಅವರ ಪಕ್ಷದಲ್ಲಿ ಸಾಕಷ್ಟು ತೊಂದರೆಗಳಿವೆ ಅದಕ್ಕೆ ಮಾಡುತ್ತಿದ್ದಾರೆ. ಮಾಧ್ಯಮಗಳಿಗೂ ಸುದ್ದಿ ಬೇಕು. ಅದಕ್ಕೆ ದಿನಾ ತೋರಿಸುತ್ತಿದ್ದೀರಿ ಅಷ್ಟೇ ಎಂದರು. ಪರಮೇಶ್ವರ್ ಅವರು ಸಹ ಗೊಂದಲ ಬಗೆಹರಿಸುವ ಬಗ್ಗೆ ಮಾತನಾಡಿದ್ದಾರೆ ಎಂದು ಕೇಳಿದಾಗ, ನಾನು ಅವರ ವಕ್ತಾರನಲ್ಲ. ಅವರು ಬಹಳ ನಾಯಕರು ಉತ್ತರ ನೀಡುತ್ತಾರೆ ಎಂದರು.

ಫಲ–ಪುಷ್ಪ ಪ್ರದರ್ಶನಕ್ಕೆ ವಿದ್ಯುಕ್ತ ಚಾಲನೆ



ಸಿಂಧೂರ ಆಕೃತಿಗಳು ರೂಪುಗೊಂಡಿವೆ. ಯುದ್ಧದ ಟ್ಯಾಂಕರ್ ಮುಂಭಾಗದಲ್ಲಿ ನಿಂತ ಕರ್ನಲ್ ಸೋಫಿಯಾ ಖುರೇಷಿ, ಯುದ್ಧ ವಿಮಾನದ ಎದುರಿರುವ ವಿಂಗ್ ಕಮಾಂಡರ್ ವ್ಯೋಮಿಕಾ ಸಿಂಗ್, ನೌಕಪಡೆಯ ಯುದ್ಧ ನೌಕೆಯೊಂದಿಗೆ ಕಮಾಂಡರ್ ಪ್ರೇರಣಾ ಡಿ. ಅವರ ಕಟೌಟ್‌ಗಳನ್ನು ನಿಲ್ಲಿಸಲಾಗಿದೆ. ಭಾರತದ ಮಹಿಳಾ ಕ್ರಿಕೆಟ್ ತಂಡ ಮುಡಿಗೇರಿಸಿಕೊಂಡ ವಿಶ್ವಕಪ್ ಮಾದರಿ, ಖೋ–ಖೋ, ಕಬಡ್ಡಿ, ಅಂಧರ ಕ್ರಿಕೆಟ್ ಆಟಗಾರರ ಭಾವಚಿತ್ರಗಳನ್ನು ಡಿಜಿಟಲ್ ಬೋರ್ಡ್‌ನಲ್ಲಿ ಪ್ರದರ್ಶಿಸಲಾಗಿದೆ.

ಒಡೆಯರ್ ಸಂಸ್ಥಾನ ಸ್ಮರಣೆ: ನಾಲ್ವಡಿ ಕೃಷ್ಣರಾಜ ಒಡೆಯರ್ ಅವರ ಲೋಹದ ಮೂರ್ತಿ, ಮುಮ್ಮಡಿ ಕೃಷ್ಣರಾಜ ಒಡೆಯರ್ ಪ್ರತಿಕೃತಿಯ ಜೊತೆಗೆ ಜಯಚಾಮರಾಜೇಂದ್ರ ಒಡೆಯರ್ ಅವರ ರಚನೆಗಳು, ದಸರಾ ಮಹೋತ್ಸವ ಅಂದು–ಇಂದು ಛಾಯಾ ಚಿತ್ರ ಪ್ರದರ್ಶನ, ಒಡೆಯರ್ ಸಂಸ್ಥಾನದ ಆಡಳಿತ, ದಸರಾ ಮಹೋತ್ಸವದ ಚಿತ್ರಗಳು, ವಿಡಿಯೋ ಪ್ರದರ್ಶನದ ಮೂಲಕ ಎಂದಿನಂತೆ ಒಡೆಯರ್ ಸಂಸ್ಥಾನವನ್ನು ಗೌರವಪೂರ್ವಕವಾಗಿ ಸ್ಮರಿಸಲಾಗಿದೆ.

ವೈವಿಧ್ಯಮಯ ಪ್ರತಿಕೃತಿ: ವಿವಿಧ ಬಣ್ಣದ ಹೂವುಗಳಿಂದ ಪುಟ್ಟ ಮಕ್ಕಳಿಂದ ವೃದ್ಧರವರೆಗೂ ಇಷ್ಟವಾಗುವಂತಹ ವೈವಿಧ್ಯಮಯ ಪ್ರತಿಕೃತಿಗಳನ್ನು ನಿರ್ಮಿಸಲಾಗಿದೆ. ಕಾಳಿಂಗ ಮರ್ದನ, ಎರಡು ನವಿಲು ಮಾದರಿ, ಚೋಟಾಭೀಮ್, ಸೈಕಲ್ ತುಳಿಯುತ್ತಿರುವ ಅಳಿಲು, ಹಂಸ, ಕೊಕ್ಕರೆ, ಪಕ್ಷಿ, ದುಂಬಿ, ಕ್ಯಾರೆಟ್ ಹಿಡಿದಿರುವ ಮೊಲ, ಮಾವಿನ ಹಣ್ಣು ಕರಡಿ ಸೇರಿದಂತೆ ಹಲವು ಆಕೃತಿಗಳು ಅತ್ಯಾಕರ್ಷಕವಾಗಿವೆ. ಈ ಬಾರಿಯೂ ವಿವಿಧ ತರಕಾರಿ ಹಾಗೂ ಹಣ್ಣುಗಳ ಮೇಲೆ ಹಲವು ಸಾಧಕರು, ಪ್ರಾಣಿ–ಪಕ್ಷಿಗಳ ಕೆತ್ತನೆ ಜೊತೆಗೆ ವಿವಿಧ ವಸ್ತುಗಳ ಮಾದರಿ ನಿರ್ಮಿಸಿ, ಪ್ರದರ್ಶನಕ್ಕಿಡಲಾಗಿದೆ. ಮೇರಿಗೋಲ್ಡ್, ಸಾಲ್ವಿಯಾ, ಡೇಲಿಯಾ, ಪಿಟೋನಿಯಾ, ಸೇವಂತಿ, ಕೋಲಿಯಸ್, ಸಿಲೋಷಿಯಾ, ಫ್ರೆಂಚ್ ಮೇರಿ ಗೋಲ್ಡ್, ಜೀನಿಯಾ ಸೇರಿದಂತೆ 35ಕ್ಕೂ ಹೆಚ್ಚು ಬಗೆಯ ಹೂಗಿಡಗಳ ಸುಮಾರು 25 ಸಾವಿರ ಪಾಟ್‌ಗಳನ್ನು ಚೊಕ್ಕವಾಗಿ ಜೋಡಿಸಲಾಗಿದೆ.

ಬೊಂಬೆ ಮನೆ ಮೆರುಗು: ಐದು ಬ್ಲಾಕ್‌ಗಳಲ್ಲಿ ಗೀತಾ ಶ್ರೀಹರಿ ಅವರು 'ಹರ ಹರ ಮಹದೇವ್', ಮೀನಾಕ್ಷಿ ಶೈಲಕುಮಾರ್ ಅವರು 'ಸಂಪೂರ್ಣ ರಾಮಾಯಣ', ಹೇಮಲತಾ ಕುಮಾರಸ್ವಾಮಿ ಅವರು 'ಶಿವ ಕೇಶವಾಮೃತ ಸಾರ', ಅನ್ನಪೂರ್ಣ ಗೋಪಾಲಕೃಷ್ಣ ಅವರು 'ದೇವನೊಬ್ಬ ನಾಮ ಹಲವು' ಹಾಗೂ ಸರ್ವಮಂಗಳಾ ಕೃಷ್ಣಭಟ್ ಅವರು 'ತಿರುಪತಿ ಶ್ರೀನಿವಾಸ ವೈಭವ' ಶೀರ್ಷಿಕೆಯಡಿ ಅತ್ಯಂತ ಮನೋಜ್ಞವಾಗಿ ಬೊಂಬೆಗಳನ್ನು ಜೋಡಿಸಿದ್ದು, ಇದು ಫಲಪುಷ್ಪ ಪ್ರದರ್ಶನಕ್ಕೆ ಮೆರಗು ನೀಡಿದೆ. ಇದರ ಸನಿಹದಲ್ಲೇ 'ಕೊಲ್ಲೂರು ಮೂಕಾಂಬಿಕೆ' ಮುರಳಿನ ಚಿತ್ರ ಸುಂದರವಾಗಿ ಮೂಡಿಬಂದಿದೆ.

ಸೆಣಸಿದ ಪೈಲ್ವಾನರು: ಬೊಂಬೆ ಮನೆ ಬಳಿ ಸಿದ್ಧಪಡಿಸಿದ್ದ ಅಖಾಡದಲ್ಲಿ ನಾಡಕುಸ್ತಿ ಏರ್ಪಡಿಸಲಾಗಿತ್ತು. ಮೈಸೂರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ 17 ಜೊತೆ ಪುರುಷ ಜೋಡಿ ಹಾಗೂ ಮೂರು ಮಹಿಳಾ ಜೋಡಿ ಪೈಲ್ವಾನರು ಸೆಣಸಾಡಿದರು. ವಿಜೇತರಾದವರಿಗೆ ಬಹುಮಾನ ನೀಡಿ, ಪ್ರೋತ್ಸಾಹಿಸಲಾಯಿತು.

ಹಲವು ಗಣ್ಯರು ಭಾಗಿ: ಉದ್ಘಾಟನೆ ಸಂದರ್ಭದಲ್ಲಿ ಶಾಸಕರುಗಳೊಂದಿಗೆ ಕರ್ನಾಟಕ ಭೋವಿ ಅಭಿವೃದ್ಧಿ ನಿಗಮದ ಅಧ್ಯಕ್ಷ ರಾಮಪ್ಪ, ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತ ರೆಡ್ಡಿ, ಜಿಪಂ ಸಿಇಓ ಎಸ್. ಯುಕೇಶ್ ಕುಮಾರ್, ಮೈಸೂರು ಅರಮನೆ ಮಂಡಳಿ ಉಪ ನಿರ್ದೇಶಕ ಟಿ.ಎಸ್.ಸುಬ್ರಮಣ್ಯ ಸೇರಿದಂತೆ ಹಲವು ಗಣ್ಯರು ಉಪಸ್ಥಿತರಿದ್ದರು. ಮೊದಲ ದಿನವೇ ಸಾವಿರಾರು ಮಂದಿ ಫಲಪುಷ್ಪ ಪ್ರದರ್ಶನದ ಸೊಬಗು ಸವಿದರು.

ಸಂಗೀತ ಝೇಂಕಾರ

ಅರಮನೆ ಎದುರಿನ ವೇದಿಕೆಯಲ್ಲಿ ಖ್ಯಾತ ಪಂಚಭಾಷಾ ಸಂಗೀತ ನಿರ್ದೇಶಕ ಮಣಿಕಾಂತ್ ಕದ್ರಿ ಹಾಗೂ ಖ್ಯಾತ ಬಾಲಿವುಡ್ ಗಾಯಕಿ ವಿದೂಷಿ ಹಂಸಿಕಾ ಅಯ್ಯರ್ ತಂಡ ಪ್ರಸ್ತುತಪಡಿಸಿದ 'ಸಂಗೀತ ಸಂಭ್ರಮ' ನೆರೆದಿದ್ದವರ ಮನಸೂರೆಗೊಂಡಿತು. ಇದಕ್ಕೂ ಮುನ್ನ ಸಂಪತ್ ತಂಡದಿಂದ ವಾದ್ಯ ಸಂಗೀತ, ಯೋಗಶ್ರೀ ತಂಡದಿಂದ ಭಕ್ತಿಗೀತೆ, ಲಾವಣ್ಯ ತಂಡದಿಂದ ಸುಗಮ ಸಂಗೀತ, ಹೆಚ್.ಎಸ್. ಸ್ನೇಹ ತಂಡದಿಂದ ನಾಡಗೀತೆ ಹಾಗೂ ಮೈಸೂರು ಸಂಸ್ಥಾನಗೀತೆ ಗಾಯನ ಪ್ರಸ್ತುತಗೊಂಡಿತು.

'ಸೀಸನಲ್ ಫ್ಲೂ' ರಾಜ್ಯದಲ್ಲಿ ಹೆಚ್ಚಳ

ಮೈಕೈ ನೋವು, ಶೀತ, ಒಣ ಕೆಮ್ಮು ಇದರ ಪ್ರಮುಖ ಗುಣ ಲಕ್ಷಣಗಳಾಗಿವೆ. ಸೀಸನಲ್ ಫ್ಲೂ ಸಾಮಾನ್ಯವಾಗಿ ಒಂದು ವಾರಗಳು ಕಾಲ ಇದ್ದು, ಕೆಲವೊಂದು ಸಲ 3 ವಾರಗಳ ಕಾಲ ಇರಲಿದೆ. ಹೀಗಾಗಿ ಎಲ್ಲಾ ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ಕ್ರಮ ವಹಿಸಲು ಸೂಚನೆ ನೀಡಲಾಗಿದೆ.

ಸೂಚನೆಗಳು ಏನಿದೆ: ಐಎಲ್‌ಐ, ಸಾರಿ ಪ್ರಕರಣಗಳ ಬಗ್ಗೆ ಗಮನ ಹರಿಸಲು ಸೂಚನೆ, ಪ್ರತಿ ದಿನ ಕನಿಷ್ಠ 5ರಷ್ಟು ಐಎಲ್‌ಐ ಕೇಸ್, 100ರಷ್ಟು ಸಾರಿ ಕೇಸ್ ಗಳ ಪರೀಕ್ಷೆ ಮಾಡಬೇಕು, ಎಲ್ಲಾ ಪ್ರಯೋಗಾಲಯಗಳಲ್ಲಿ ಸೂಕ್ತ ಟೆಸ್ಟಿಂಗ್ ಕಿಟ್ ಇರಿಸಿಕೊಳ್ಳಲು ಸೂಚನೆ, ಅಗತ್ಯ ಔಷಧಗಳ ಶೇಖರಣೆ, ಪಿಪಿಇ ಕಿಟ್‌ಗಳು, ಎನ್‌95 ಮಾಸ್ಕ್ ಸೇರಿ ಅಗತ್ಯ ಔಷಧಗಳ ಶೇಖರಣೆಗೆ ಸೂಚನೆ, oseltamivir ಮಾತ್ರೆಗಳನ್ನು ದಾಸ್ತಾನ ಮಾಡಿ ಅಗತ್ಯಕ್ಕೆ ತಕ್ಕಂತೆ ಪ್ರಿಸ್ಕೈಬ್ ಮಾಡಬೇಕು, ಇನ್ಫ್ಲೂಯೆನ್ಸಾ ಲಸಿಕೆ ಶೇಖರಣೆ, ಹೆಲ್ತ್ ಕೇರ್ ವರ್ಕರ್ಸ್, ಗರ್ಭಿಣಿಯರು, ಹೈರಿಸ್ಕ್ ರೋಗಿಗಳು ಸೂಕ್ತ ಲಸಿಕೆ ಪಡೆಯುವಂತೆ ಸಲಹೆ, ಕ್ಲಿನಿಕಲ್ ಮ್ಯಾನೇಜ್ಮೆಂಟ್ ಹಾಗೂ ಕ್ರಿಟಿಕಲ್ ಕೇರ್ ಸಿದ್ಧತೆ, ವೆಂಟಿಲೇಟರ್‌ಗಳ ಸಿದ್ಧತೆಗೆ ಸಲಹೆ, ಕಮ್ಯುನಿಟಿ ಅವೇರ್ನೆಸ್, ರಿಯಲ್ ಟೈಮ್ ಮಾನಿಟರಿಂಗ್ ನಡೆಸುವಂತೆ ಸಲಹೆ ನೀಡಲಾಗಿದೆ.

'ಗೃಹಲಕ್ಷ್ಮಿ' ಹಣ

ಕಂತಿನ ಹಣ ಬಿಡುಗಡೆಗೆ ಹಣಕಾಸು ಇಲಾಖೆ ಒಪ್ಪಿದೆ. ಮುಂದಿನ ವಾರ ಹಣ ಬಿಡುಗಡೆ ಆಗುತ್ತದೆ ಎಂದರು.

ಮೃತಪಟ್ಟವರ ಖಾತೆಗೆ ಹಣಕ್ಕೆ ಬ್ರೇಕ್: ಮೃತರ ಖಾತೆಗೂ ಇಷ್ಟು ದಿನ ಮಾಹಿತಿ ಕೊರತೆಯಿಂದ ಗೃಹಲಕ್ಷ್ಮೀ ಯೋಜನೆ ಹಣ ಸಂದಾಯವಾಗುತ್ತಿತ್ತು, ಇದು ಗಮನಕ್ಕೆ ಬಂದ ಮೇಲೆ ಈ ಬಗ್ಗೆ ಸರ್ಕಾರದ ಮುಖ್ಯ ಕಾರ್ಯದರ್ಶಿಗಳ ನೇತೃತ್ವದಲ್ಲಿ ಎರಡು ಬಾರಿ ಸಭೆ ಮಾಡಲಾಗಿದೆ. ಮೃತಪಟ್ಟವರ ಅಕೌಂಟ್‌ಗೆ ಹಣ ಸಂದಾಯವಾದರೆ ತಕ್ಷಣ ಗೊತ್ತಾಗಲ್ಲ. ಈಗ ಸಾಫ್ಟ್‌ವೇರ್ ಅಭಿವೃದ್ಧಿ ಅಳವಡಿಕೆ ಮಾಡಿದ್ದೇವೆ. ಮರಣ ಪ್ರಮಾಣ ಪತ್ರಗಳನ್ನು ಅಂಗನವಾಡಿ ಕಾರ್ಯಕರ್ತರು ಪರಿಶೀಲನೆ ಮಾಡುತ್ತಾರೆ. ಹೀಗಾಗಿ ಅದನ್ನು ಸದ್ಯಕ್ಕೆ ತಡೆಹಿಡಿದಿದ್ದೇವೆ. ತಪ್ಪಾಗಿ ಸಂದಾಯವಾಗಿರುವ ಹಣವನ್ನು ವಾಪಸ್ ಪಡೆಯುವ ಹೊಣೆಗಾರಿಕೆಯನ್ನು ಕೆಲ ಬ್ಯಾಂಕ್‌ಗೆ ಸೂಚನೆ ಕೊಟ್ಟಿದ್ದೇವೆ. ಮುಖ್ಯ ಕಾರ್ಯದರ್ಶಿಗಳು ಬ್ಯಾಂಕ್‌ಗೆ ಪತ್ರ ಬರೆದಿದ್ದಾರೆ ಎಂದು ಸಚಿವೆ ಹೇಳಿದರು.

ಸ್ಥಳೀಯ ನಾಯಕರಿಂದಲೇ ನಾಯಕತ್ವ ಬದಲಾವಣೆ ಗೊಂದಲ

- ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಗರಂ
- ಸ್ಥಳೀಯ ನಾಯಕರೇ ಇದನ್ನ ಬಗೆಹರಿಸಿಕೊಳ್ಳಬೇಕು



ಕಲಬುರಗಿ: ರಾಜ್ಯದಲ್ಲಿ ಸಿಎಂ ಕುರ್ಚಿ ಕದನ ತೀವ್ರ ಸ್ವರೂಪ ಪಡೆದುಕೊಳ್ಳುತ್ತಿದ್ದು, ನಾಯಕತ್ವ ಬದಲಾವಣೆ ಬಗ್ಗೆ ಹೈಕಮಾಂಡ್ ಯಾವುದೇ ಗೊಂದಲ ಸೃಷ್ಟಿ ಮಾಡಿಲ್ಲ. ಇದು ಸ್ಥಳೀಯ ಮಟ್ಟದಲ್ಲೇ ಇದ್ದು, ಇಲ್ಲಿನ ನಾಯಕರೇ ಇದನ್ನ ಬಗೆಹರಿಸಿಕೊಳ್ಳಬೇಕು ಎಂದು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಭಾನುವಾರ ಸ್ಪಷ್ಟಪಡಿಸಿದ್ದಾರೆ.

ಇಂದು ನಗರದಲ್ಲಿ ಸುದ್ದಿಗಾರರೊಂದಿಗೆ ಮಾತನಾಡಿದ ಖರ್ಗೆ, ಹೈಕಮಾಂಡ್ ಯಾವುದೇ ಗೊಂದಲವನ್ನು ಸೃಷ್ಟಿಸಿಲ್ಲ. ಅದು ಸ್ಥಳೀಯ ಮಟ್ಟದಲ್ಲೇ ಇದೆ ಎಂದರು.

ನಾಯಕತ್ವ ಬದಲಾವಣೆ ಗೊಂದಲದ ಬಗ್ಗೆ ಹೈಕಮಾಂಡ್ ಮೇಲೆ ಆರೋಪ ಹೊರಿಸುವುದು ಎಷ್ಟು ಸರಿ. ಹೈಕಮಾಂಡ್ ಅನ್ನು ದೂಷಿಸುವ ಬದಲು ಸ್ಥಳೀಯ ನಾಯಕರು ಆಂತರಿಕ ಗೊಂದಲವನ್ನು ಸರಿಪಡಿಸಿಕೊಳ್ಳಬೇಕು ಎಂದು ತಾಕೀತು ಮಾಡಿದ್ದಾರೆ.

ಒಬ್ಬನಿಂದ ಬೆಳೆದಿಲ್ಲ: ಕಾಂಗ್ರೆಸ್ ಯಾರೋ ಒಬ್ಬ ನಾಯಕನಿಂದ ಬೆಳೆದಿಲ್ಲ. ಹೀಗಾಗಿ ಯಾರೊಬ್ಬರೂ ನನ್ನಿಂದ ಅಧಿಕಾರಕ್ಕೆ ಬಂತು, ನಾನೇ ಪಕ್ಷ ಕಟ್ಟಿದ್ದೇನೆಂದು ಹೇಳಬಾರದು. ಕಾಂಗ್ರೆಸ್ ಪಕ್ಷ ಕಾರ್ಯಕರ್ತರಿಂದ ಕಟ್ಟಿದ ಪಕ್ಷ. ಪಕ್ಷ ಅಂದ ಮೇಲೆ ಎಲ್ಲರ ಪಾತ್ರವೂ ಇರುತ್ತೆ. ಕೆಲ ಕಾರ್ಯಕರ್ತರು ಕೂಡ ಒಬ್ಬರಿಂದಲೇ ಪಕ್ಷ ಇದೆ ಎನ್ನಬಾರದು ಎಂದು ನೇರವಾಗಿ ಯಾರ ಹೆಸರನ್ನೂ ಹೇಳದೆ ಮಾರ್ಮಿಕವಾಗಿ ನುಡಿದರು.

ಪಕ್ಷದ ಕಾರ್ಯಕರ್ತರು ತಮ್ಮ ವೈಯಕ್ತಿಕ ಕೊಡುಗೆಗಳ ಬಗ್ಗೆ ಹೆಮ್ಮೆ ಪಡುವುದನ್ನು ಮೊದಲು ನಿಲ್ಲಿಸಬೇಕು ಮತ್ತು ಕಾರ್ಯಕರ್ತರ ಸಾಮೂಹಿಕ ಪ್ರಯತ್ನವನ್ನು ಗುರುತಿಸಬೇಕು ಎಂದು ರಾಜ್ಯಸಭೆಯಲ್ಲಿ ವಿರೋಧ ಪಕ್ಷದ ನಾಯಕ ಹೇಳಿದರು.

ಇನ್ನು ಉಪ ಮುಖ್ಯಮಂತ್ರಿ ಡಿಕೆ ಶಿವಕುಮಾರ್ ಅವರು ಪಕ್ಷದ ಹೈಕಮಾಂಡ್ ಭೇಟಿ ಮಾಡಲು ದೆಹಲಿಗೆ ತೆರಳುತ್ತಿರುವ ಬಗ್ಗೆ ಕೇಳಿದಾಗ, ಈ ವಿಷಯದ ಬಗ್ಗೆ ನನಗೆ ಯಾವುದೇ ಮಾಹಿತಿ ಇಲ್ಲ ಎಂದು ಮಲ್ಲಿಕಾರ್ಜುನ ಖರ್ಗೆ ಹೇಳಿದರು.

ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ, ಉಪಾಧ್ಯಕ್ಷರ ಆಯ್ಕೆ ಸಂಬಂಧ ಖಾಸಗಿ ಹೋಟೆಲ್‌ನಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಸಭೆ



ಮೈಸೂರು, ಡಿ.21– ಮೈಸೂರು ಮತ್ತು ಚಾಮರಾಜನಗರ ಜಿಲ್ಲಾ ಸಹಕಾರ ಕೇಂದ್ರ(ಎಂಸಿಡಿಸಿಸಿ) ಬ್ಯಾಂಕ್ ಅಧ್ಯಕ್ಷ ಹಾಗೂ ಉಪಾಧ್ಯಕ್ಷರ ಆಯ್ಕೆ ಸಂಬಂಧ ಮುಖ್ಯಮಂತ್ರಿ ಸಿದ್ದರಾಮಯ್ಯ, ಭಾನುವಾರ ರಾತ್ರಿ ಮೈಸೂರಿನಲ್ಲಿ ಸಭೆ ನಡೆಸಿದ್ದಾರೆ.

ನಗರದ ಬೋಗಾದಿ ರಸ್ತೆಯಲ್ಲಿರುವ ಹೋಟೆಲ್‌ವೊಂದರಲ್ಲಿ ಮೈಸೂರು ಹಾಗೂ ಚಾಮರಾಜನಗರ ಜಿಲ್ಲೆಗಳ ಶಾಸಕರು, ವಿಧಾನ ಪರಿಷತ್ ಸದಸ್ಯರು, ಕಾಂಗ್ರೆಸ್ ಜಿಲ್ಲಾಧ್ಯಕ್ಷರು ಹಾಗೂ ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಯ ಕಾಂಗ್ರೆಸ್ ನಿರ್ದೇಶಕರೊಂದಿಗೆ ಸುಮಾರು ಒಂದೂವರೆ ಗಂಟೆಗಳ ಕಾಲ ಸಭೆ ನಡೆಸಿ, ಪ್ರತಿಯೊಬ್ಬರ ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಸಭೆಯಲ್ಲಿ ಅಧ್ಯಕ್ಷ ಹಾಗೂ ಉಪಾಧ್ಯಕ್ಷ ಸ್ಥಾನದ ಆಕಾಂಕ್ಷಿಗಳ ವಿಚಾರ ಪ್ರಸ್ತಾಪವಾಗಿಲ್ಲವಾದರೂ ಎರಡು ಅವಧಿಯಲ್ಲಿ ಅವಕಾಶ ಕಲ್ಪಿಸಲು ನಿರ್ಧರಿಸಲಾಗಿದೆ. ಅಧ್ಯಕ್ಷ, ಉಪಾಧ್ಯಕ್ಷ ಹಾಗೂ ಅಪೆಕ್ಸ್ ಬ್ಯಾಂಕ್‌ಗೆ ಆಯ್ಕೆ ಮಾಡುವ ನಿರ್ದೇಶಕ ಸ್ಥಾನ ಸೇರಿದಂತೆ ಎರಡು ಅವಧಿಯಲ್ಲಿ ಒಟ್ಟು ಆರು ನಿರ್ದೇಶಕರಿಗೆ ಅವಕಾಶ ಮಾಡಿಕೊಡಲು ತೀರ್ಮಾನಿಸಲಾಗಿದೆ ಎಂದು ಬಲ್ಲ ಮೂಲಗಳಿಂದ ತಿಳಿದು ಬಂದಿದೆ.

ಎಂಸಿಡಿಸಿಸಿ ಬ್ಯಾಂಕ್ ಆಡಳಿತ ಮಂಡಳಿಯ ಒಟ್ಟು 16 ಸ್ಥಾನಗಳಲ್ಲಿ ಮೂರು ಕ್ಷೇತ್ರಗಳ ಹೊರತುಪಡಿಸಿ(ಅಧಿಸೂಚನೆ ಆಗಿಲ್ಲ) ಇನ್ನುಳಿದ 13 ಸ್ಥಾನಗಳಿಗೆ ಚುನಾವಣೆ ಘೋಷಿಸಿದ ಬಳಿಕ ಯಳಂದೂರು ಕ್ಷೇತ್ರದಿಂದ ಜಯರಾಮ್ ಅವಿರೋಧವಾಗಿ ಆಯ್ಕೆಯಾದರು. ಇನ್ನು 12 ಕ್ಷೇತ್ರಗಳಿಗೆ ಕಳೆದ ಜೂ.26ರಂದು ಚುನಾವಣೆ ನಡೆದಿತ್ತು. ಆದರೆ ವಿವಿಧ ಕಾರಣದಿಂದ ಮತದಾನದ ಹಕ್ಕು ನಿರಾಕರಿಸಿದ್ದನ್ನು ಪ್ರಶ್ನಿಸಿ ನ್ಯಾಯಾಲಯದ ಅನುಮತಿ ಪಡೆದು ಮೂರು ಕ್ಷೇತ್ರಗಳಲ್ಲಿ ಚಲಾಯಿಸಿದ್ದ ಮತ ಎಣಿಕೆ ಬಾಕಿ ಇರಿಸಿ, ಪ್ರಕಟಿಸಲಾದ ಫಲಿತಾಂಶದಲ್ಲಿ ಒಂದು ಅವಿರೋಧ ಆಯ್ಕೆ ಸೇರಿ ಕಾಂಗ್ರೆಸ್ ಬೆಂಬಲಿತ 7 ಮಂದಿ ಗೆಲುವು ಸಾಧಿಸಿದ್ದರು. ನ್ಯಾಯಾಲಯದ ಅನುಮತಿ ಮೇರೆಗೆ ಡಿ.12ರಂದು ಬಾಕಿ ಇದ್ದ ಮೂರು ಕ್ಷೇತ್ರಗಳ ಮತ ಎಣಿಕೆ ನಡೆಸಿದಾಗ ಎಲ್ಲಾ ಕ್ಷೇತ್ರಗಳಲ್ಲೂ ಕಾಂಗ್ರೆಸ್ ಬೆಂಬಲಿತರೇ ವಿಜೇತರಾದರು. ಈ ಹಿನ್ನೆಲೆಯಲ್ಲಿ ಇಂದು ಮುಖ್ಯಮಂತ್ರಿಗಳು ಸಭೆ ನಡೆಸಿ, ಅಭಿಪ್ರಾಯ ಸಂಗ್ರಹಿಸಿದ್ದಾರೆ.

ಕನ್ನಡ ನಾಡಿನ ಜನ–ಜಾನಪದದಲ್ಲಿ ಕನಕದಾಸರು ಜೀವಂತವಾಗಿದ್ದಾರೆ

● ಬಿಎಂಟಿಸಿ ಉಪಾಧ್ಯಕ್ಷ ನಿಕೇತ್‌ರಾಜ್ ಮೌರ್ಯ ಅಭಿಮತ ● ಸಾರಿಗೆ ನಿಗಮದ ಶ್ರೀ ಕನಕದಾಸ ನೌಕರರ ಸಂಘದಿಂದ ಕನಕದಾಸರ ಜಯಂತ್ಯೋತ್ಸವ

ಮೈಸೂರು, ಡಿ.21(ಎಂಕೆ)– ಸನಾತನ ಧರ್ಮದಲ್ಲಿನ ಶೋಷಣೆ ಮತ್ತು ತಾರತಮ್ಯವನ್ನು ಕೀರ್ತನೆಗಳ ಮೂಲಕ ಖಂಡಿಸಿದ ಕನಕದಾಸರು, ಕನ್ನಡ ನಾಡಿನ ಜನ–ಜಾನಪದದಲ್ಲಿ ಜೀವಂತವಾಗಿದ್ದಾರೆ ಎಂದು ಬೆಂಗಳೂರು ಮಹಾನಗರ ಸಾರಿಗೆ ಸಂಸ್ಥೆ(ಬಿಎಂಟಿಸಿ) ಉಪಾಧ್ಯಕ್ಷ ನಿಕೇತ್ ರಾಜ್ ಮೌರ್ಯ ಹೇಳಿದರು.

ಮೈಸೂರಿನ ಕುವೆಂಪುನಗರದಲ್ಲಿರುವ ಚಿಕ್ಕಮಾನಿಕೇತನ ಕಲ್ಯಾಣ ಮಂಟಪದಲ್ಲಿ ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶ್ರೀ ಕನಕದಾಸ ನೌಕರರ ಸಂಘದ ವತಿ ಯಿಂದ ಆಯೋಜಿಸಿದ್ದ ಸಂತಶ್ರೇಷ್ಠ ಶ್ರೀ ಕನಕದಾಸರ 538ನೇ ಜಯಂತ್ಯೋತ್ಸವ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ದಾಸಶ್ರೇಷ್ಠ ಕನಕದಾಸರು ತಳ ಸಮುದಾಯಗಳ ದನಿಯಾಗಿದ್ದರು ಎಂದು ಸ್ಮರಿಸಿದರು.



ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶ್ರೀ ಕನಕದಾಸ ನೌಕರರ ಸಂಘದ ವತಿಯಿಂದ ಸಂತಶ್ರೇಷ್ಠ ಶ್ರೀ ಕನಕದಾಸರ 538ನೇ ಜಯಂತ್ಯೋತ್ಸವ ಆಚರಿಸಲಾಯಿತು. ಶಾಸಕ ಕೆ.ಹರೀಶ್‌ಗೌಡ ಉದ್ಘಾಟಿಸಿದರು. ಬಿಎಂಟಿಸಿ ಉಪಾಧ್ಯಕ್ಷ ನಿಕೇತ್ ರಾಜ್‌ಮೌರ್ಯ, ಸಂಘದ ಅಧ್ಯಕ್ಷ ಬಿ.ಜವರೇಗೌಡ ಮತ್ತಿತರರು ಉಪಸ್ಥಿತರಿದ್ದರು.

ತಳ ಸಮುದಾಯಗಳ ಎಲ್ಲಾ ಜಾತಿಗಳಲ್ಲೂ ದಾಸ ಕುಲ(ಒಕ್ಕಲು)ವೆಂಬುದು ಇದೆ. ಇವರೆಲ್ಲರೂ ಕನಕದಾಸರಿಂದ ಪ್ರೇರಿತರಾದವರು. ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧ್ಯಾನ ಚರಿತೆ, ಹರಿಭಕ್ತಿಸಾರ ರಚಿಸಿದ ಕಾವ್ಯ–ಕೃತಿಗಳು ಜನಪದರ ನಾಲಿಗೆಯಲ್ಲಿ ಸದಾ ನಲಿಯುತ್ತವೆ. ಕನಕದಾಸರ ಪ್ರತೀ ಚಿಂತನೆಯಲ್ಲೂ ಜೀವನದ ಸಾರಾಂಶ ಅಡಗಿದೆ ಎಂದು ಅವರು ಅಭಿಪ್ರಾಯಪಟ್ಟರು.

ಕಾರ್ಯಕ್ರಮ ಉದ್ಘಾಟಿಸಿದ ಶಾಸಕ ಕೆ.ಹರಿಶ್‌ಗೌಡ ಮಾತನಾಡಿ, ಸಾಮಾಜಿಕ ಜಾಲತಾಣದಲ್ಲಿ ಬರೀ ಸುಳ್ಳು ಸುದ್ದಿ ಹಬ್ಬಿಸುವ ಕೆಲಸವನ್ನು ಒಂದು ಪಕ್ಷ ಮತ್ತು ಒಂದು ಸಂಘಟನೆ ಮಾಡುತ್ತಿದೆ. ತಿರುಚಿದ ಚರಿತ್ರೆಯನ್ನು ಹೇಳಲಾಗುತ್ತಿದೆ. ಆದ್ದರಿಂದ ಜನತೆಗೆ ಸತ್ಯವನ್ನು ತಿಳಿಸುವ ಕಾರ್ಯಗರ್ಳಾಗಬೇಕು. ಸತ್ಯ ನುಡಿಯುವ ಜೊತೆಗೆ ಜಾಗೃತಿ ಮೂಡಿಸುವ ಕೆಲಸ ಮಾಡಬೇಕಿದೆ ಎಂದರು.

ಜಾತ್ಯತೀತವಾಗಿ ಎಲ್ಲ ಸಮುದಾಯದವರೂ ಸೇರಿ ಕನಕದಾಸರು ಜಯಂತಿ ಆಚರಿಸುತ್ತಿರುವುದು ಶ್ಲಾಘನೀಯ. ಮಹನೀಯರ್‍ಯಾರು ಕೇವಲ ಒಂದು ಸಮುದಾಯಕ್ಕೆ ಸೇರಿದವರಲ್ಲ. ಕನಕದಾಸರು ಕೀರ್ತನೆಗಳ ಮೂಲಕ ಸಮಾಜದ ಮೌಢ್ಯಾಚರಣೆಗಳನ್ನು ಪ್ರಶ್ನಿಸಿದರು. ಕುಲಕುಲವೆಂದು ಹೊಡೆದಾಡದಿರಿ ಎಂದರು. ಅವರ ಆದರ್ಶಗಳನ್ನು ಪಾಲಿಸಬೇಕು ಎಂದು ಹೇಳಿದರು.

ಸನ್ಮಾನ ಮತ್ತು ಬಹುಮಾನ ವಿತರಣೆ: ಬಳಿಕ ಅಗ್ನಿಶಾಮಕ ದಳದ ಅಧಿಕಾರಿ ಕೆ.ಪಿ.ಗುರುರಾಜ್, ಕರ್ನಾಟಕ ರಾಜ್ಯ ಸರ್ಕಾರಿ ವಕೀಲರ ಸಂಘದ ಅಧ್ಯಕ್ಷ ಎಂ.ಮಹದೇವಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಹಾಗೆಯೇ ಜಯಂತ್ಯೋತ್ಸವದ ಅಂಗವಾಗಿ ಏರ್ಪಡಿಸಿದ್ದ ಕ್ರಿಕೆಟ್ ಪಂದ್ಯಾವಳಿ ವಿಜೇತರಿಗೆ ನಗದು ಬಹುಮಾನ ಹಾಗೂ ಆಕರ್ಷಕ ಟ್ರೋಫಿಯನ್ನು ವಿತರಣೆ ಮಾಡಲಾಯಿತು.

ಕೆಎಸ್‌ಆರ್‌ಟಿಸಿ ನೌಕರರ ಸಮಸ್ಯೆಗಳು ಬಗೆಹರಿಯಲಿದೆ...

"ಕೆಎಸ್‌ಆರ್‌ಟಿಸಿ ಬಸ್ ಡ್ರೈವರ್ ಮತ್ತು ಕಂಡಕ್ಟರ್‌ಗಳಿಗೆ ಬಸ್ಸೆ ದೇವಸ್ಥಾನ... ಬಸ್ಸೆ ಮನೆ... ಬಹುದೊಡ್ಡ ಜವಾಬ್ದಾರಿ ಹೊತ್ತು ತಮ್ಮ ಕೆಲಸದಲ್ಲಿ ಸಕ್ರೀಯವಾಗಿ ದುಡಿಯುವ ಕೆಎಸ್‌ಆರ್‌ಟಿಸಿ ನೌಕರರ ವೇತನ ಪರಿಷ್ಕರಣೆ ಹಾಗೂ ಇನ್ನಿತರೆ ಸಮಸ್ಯೆಗಳನ್ನು ಬಗೆಹರಿಸಲು ಮುಖ್ಯಮಂತ್ರಿಗಳು ಈಗಾಗಲೇ ಹಲವು ಸಭೆಗಳನ್ನು ನಡೆಸಿದ್ದಾರೆ. ಮುಂದಿನ ದಿನಗಳಲ್ಲಿ ಕೆಎಸ್‌ಆರ್‌ಟಿಸಿಯ ಎಲ್ಲಾ ನೌಕರರ ಸಮಸ್ಯೆಗಳು ಬಗೆಹರಿಯಲಿವೆ.

–ನಿಕೇತ್‌ರಾಜ್ ಮೌರ್ಯ, ಉಪಾಧ್ಯಕ್ಷ, ಬಿಎಂಟಿಸಿ

ಮೆರವಣಿಗೆ: ವೇದಿಕೆ ಕಾರ್ಯಕ್ರಮಕ್ಕೂ ಮುನ್ನ ಕುವೆಂಪುನಗರದ ಬನಶಂಕರಿ ಅಮ್ಮ ದೇವಸ್ಥಾನದಿಂದ ಚಿಕ್ಕಮಾನಿಕೇತನ ಕಲ್ಯಾಣ ಮಂಟಪದವರೆಗೆ ಅಲಂಕೃತ ಬೆಳ್ಳಿ ರಥದಲ್ಲಿ ಕನಕದಾಸರ ಪ್ರತಿಮೆಯನ್ನು ಮೆರವಣಿಗೆ ಮೂಲಕ ತರಲಾಯಿತು. ಮೆರವಣಿಗೆಯಲ್ಲಿ ಸಾಂಸ್ಕೃತಿಕ ಕಲಾತಂಡಗಳೊಂದಿಗೆ ನೂರಾರು ಮಂದಿ ಸಾಗಿದರು. ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಕರ್ನಾಟಕ ಪ್ರದೇಶ ಕುರುಬರ ಸಂಘದ ಮಾಜಿ ರಾಜ್ಯಾಧ್ಯಕ್ಷ ಬಿ.ಸುಬ್ರಹ್ಮಣ್ಯ, ಕೆಎಸ್‌ಆರ್‌ಟಿಸಿ ಮೈಸೂರು ವಿಭಾಗೀಯ ನಿಯಂತ್ರಣಾಧಿಕಾರಿ ಹೆಚ್.ಟಿ.ವೀರೇಶ್, ವಿಭಾಗೀಯ ಸಂಚಾಲನಾಧಿಕಾರಿ ಸಿ.ಹೇಮಂತ್ ಕುಮಾರ್, ರಾಮನಗರ ವಿಭಾಗೀಯ ಸಂಚಾಲನಾಧಿಕಾರಿ ಕೆ.ಶ್ರೀನಿವಾಸ್, ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮ ಶ್ರೀ ಕನಕದಾಸ ನೌಕರರ ಸಂಘದ ಗೌರವಾಧ್ಯಕ್ಷ ಕೆ.ಎನ್.ಕೃಷ್ಣೇಗೌಡ, ಅಧ್ಯಕ್ಷ ಬಿ.ಜವರೇಗೌಡ, ಜಯಂತ್ಯೋತ್ಸವ ಸಮಿತಿ ಅಧ್ಯಕ್ಷ ಲೋಕೇಶ್, ಕಾರ್ಯಾಧ್ಯಕ್ಷ ಎಂ.ಕುಮಾರ, ಸಂಸ್ಥಾಪಕ ಅಧ್ಯಕ್ಷ ಟಿ.ಎಂ.ದೊಡ್ಡೇಗೌಡ, ಉಪಾಧ್ಯಕ್ಷ ಹೇಮಣ್ಣ, ಕಾರ್ಯದರ್ಶಿ ಎಸ್.ಡಿ. ರಾಜು, ಖಜಾಂಚಿ ಎನ್.ರಘು, ಸಂಗೊಳ್ಳಿ ರಾಯಣ್ಣ ಕ್ರಿಕೆಟ್ ಸಮಿತಿ ಅಧ್ಯಕ್ಷ ಕೆ.ಸಿ.ಗೌಡ ಸೇರಿದಂತೆ ಮತ್ತಿತರರು ಉಪಸ್ಥಿತರಿದ್ದರು.

ಮಕ್ಕಳಿಗೆ ಮೈಸೂರು ಪರಂಪರೆ ಪರಿಚಯಿಸುವ ನಿಟ್ಟಿನಲ್ಲಿ ಹೆರಿಟೇಜ್ ಟ್ರೆಷರ್ ಹಂಟ್ ಆಯೋಜನೆ

ದೇಶಭಕ್ತಿ, ಜಾನಪದ ಗೀತೆಗಳಿಗೆ ಆಕರ್ಷಕ ನೃತ್ಯ ಪ್ರದರ್ಶಿಸಿದ ಮಕ್ಕಳು



ಮೈಸೂರು ಅರಮನೆ ಮುಂಭಾಗದ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಭಾನುವಾರ ಬೆಳಗ್ಗೆ ನಡೆದ ಫ್ಲಾಶ್ ಮೊಬ್ ಕಾರ್ಯಕ್ರಮದಲ್ಲಿ ಪೂರ್ಣ ಚೇತನ ಶಾಲೆಯ ವಿದ್ಯಾರ್ಥಿಗಳು ನೃತ್ಯ ಪ್ರದರ್ಶನ ಮಾಡಿದರು.

ಮೈಸೂರು, ಡಿ.21(ಎಂಟಿವೈ)– ಮೈಸೂರು ಅರಮನೆ ಮುಂಭಾಗ ಕೋಟೆ ಆಂಜನೇಯಸ್ವಾಮಿ ದೇವಾಲಯದ ಆವರಣದಲ್ಲಿ ಭಾನುವಾರ ಬೆಳಗ್ಗೆ ನೂರಾರು ವಿದ್ಯಾರ್ಥಿಗಳು ದೇಶ ಭಕ್ತಿ ಮತ್ತು ಜಾನಪದ ಗೀತೆಗಳಿಗೆ ನೃತ್ಯ ಪ್ರದರ್ಶಿಸುವ ಮೂಲಕ ಹೆರಿಟೇಜ್ ಟ್ರೆಷರ್ ಹಂಟ್‌ನಲ್ಲಿ ಪಾಲ್ಗೊಂಡು ಸಂಭ್ರಮಿಸಿದರು.

ಫ್ಲಾಶ್ ಮೊಬ್ ಕಾರ್ಯಕ್ರಮದಲ್ಲಿ ಪೂರ್ಣ ಚೇತನ ಶಾಲೆಯ 170 ವಿದ್ಯಾರ್ಥಿಗಳು ಜಾನಪದ, ಮತ್ತು ದೇಶ ಭಕ್ತಿ ಗೀತೆಗಳಿಗೆ ಆಕರ್ಷಕ ನೃತ್ಯ ಪ್ರದರ್ಶಿಸಿದರು. ನಂತರ ನಡೆದ ಹೆರಿಟೇಜ್ ಟ್ರೆಷರ್ ಹಂಟ್‌ಗೆ ಬಿಕೆಜಿ ಆವಾಂತ ಆಸ್ಪತ್ರೆಯ ಸಂಸ್ಥಾಪಕ ಡಾ. ಟಿ.ಎನ್.ಬಾಲಕೃಷ್ಣೇಗೌಡ ಚಾಲನೆ ನೀಡಿ ಮಾತನಾಡಿ, ಮೈಸೂರಿನ ಪರಂಪರೆಯ ರಕ್ಷಣೆ ನಮ್ಮೆಲ್ಲರ ಜವಾಬ್ದಾರಿ. ಇದನ್ನು ಸಂರಕ್ಷಿಸಿ ಮುಂದಿನ ಪೀಳಿಗೆಗೆ ಕೊಡುಗೆ ನೀಡಬೇಕಾಗಿದೆ ಎಂದರು.

ಇದೇ ವೇಳೆ ಶ್ವಾಸಕೋಶ ತಜ್ಞ ಡಾ.ಆರ್.ಲಕ್ಷ್ಮಿ ನರಸಿಂಹನ್ ಮಾತನಾಡಿ, ಮೈಸೂರು ಹೆರಿಟೇಜ್ ಟ್ರೆಷರ್ ಹಂಟ್‌ನಲ್ಲಿ ಮೈಸೂರಿನ ಇತಿಹಾಸ, ಪರಂಪರೆ ಹಾಗೂ ಸಂಸ್ಕೃತಿಯನ್ನು ಮಕ್ಕಳು ಮತ್ತು ಪೋಷಕರಿಗೆ ಪರಿಚಯಿಸಲಾಗುತ್ತಿದೆ ಎಂದರು.

ಪ್ರತಿ ತಂಡಕ್ಕೂ ಕಾರ್ಯಕ್ರಮದ ಆರಂಭದಲ್ಲೇ 10 ಸುಳಿವು ಒಳಗೊಂಡ ವಿಶೇಷ ಟ್ರೆಷರ್ ಕಿಟ್ ನೀಡಲಾಗಿತ್ತು. ಚೆಲುವಾಂಬ ಮ್ಯಾನ್ಷನ್, ರೈಲ್ವೆ ನಿಲ್ದಾಣ, ಓಆರ್‌ಐ, ಕ್ರಾಫರ್ಡ್ ಹಾಲ್, ಜಿಲ್ಲಾಧಿಕಾರಿಗಳ ಹಳೆ ಕಚೇರಿ, ಪುರಭವನ ಹೀಗೆ ನಗರದ ಪ್ರಮುಖ ಪಾರಂಪರಿಕ ಸ್ಥಳಗಳನ್ನು ಪತ್ತೆ ಹಚ್ಚುವ ಸವಾಲು ನೀಡಲಾಗಿತ್ತು. ಈ ಸ್ಪರ್ಧೆಯಲ್ಲಿ 1 ಗಂಟೆ 18 ನಿಮಿಷದಲ್ಲಿ ಈ ಸವಾಲು ಪೂರ್ಣಗೊಳಿಸಿದ ಪೂರ್ಣ ಚೇತನ ಶಾಲೆಯ ಏಳನೇ ತರಗತಿ ವಿದ್ಯಾರ್ಥಿನಿ ಹೃದ್ಯ ಹಾಗು ಅವರ ತಂದೆ ಭುವನೇಶ್ವರ್ ಪ್ರಥಮ ಸ್ಥಾನ ಪಡೆದರು. ಆಟೋ ಮೂಲಕ ಅವರು ಈ ಸವಾಲು ಪೂರ್ಣಗೊಳಿಸಿದರು. ಅದೇ ಶಾಲೆಯ ಏಳನೇ ತರಗತಿಯ ಇನ್ನೋರ್ವ ವಿದ್ಯಾರ್ಥಿನಿ ಆರೋಹಿ ಸಿಂಗ್ ಹಾಗೂ ಆಕೆಯ ತಂದೆ ಸಂತೋಷ್ ಕುಮಾರ್ ಸಿಂಗ್ ದ್ವಿತೀಯ ಪ್ರಶಸ್ತಿ ಪಡೆದರು. ಕೆ.ಆರ್. ನಗರದ ವಾಸವಿ ಸಾಂಸ್ಕೃತಿಕ ಶಾಲೆಯ ಐದನೇ ತರಗತಿ ವಿದ್ಯಾರ್ಥಿನಿ ಋತ್ವಿ ಹಾಗೂ ತೇಜೇಶ್ ಗೌಡ ತೃತೀಯ ಸ್ಥಾನ ಪಡೆದರು. ವಿಜೇತರು ಪ್ರಥಮ ಬಹುಮಾನ 10 ಸಾವಿರ ರೂ., ದ್ವಿತೀಯ ಬಹುಮಾನ ಪಡೆದವರಿಗೆ 7,500 ರೂ., ತೃತೀಯ ಬಹುಮಾನ ಪಡೆದವರಿಗೆ 5,000 ರೂ. ನಗದು ಬಹುಮಾನ ಹಾಗೂ ಟ್ರೋಫಿ ಪಡೆದರು. ಕಾರ್ಯಕ್ರಮದಲ್ಲಿ ಶಾಲೆಯ ಸಿಇಒ ದರ್ಶನ್‌ರಾಜ್, ಮುಖ್ಯ ಆಡಳಿತಾಧಿಕಾರಿ ಮಾಧುರ್ಯ ರಾಮಸ್ವಾಮಿ, ಕಾರ್ಯದರ್ಶಿ ಡಾ.ರಜಿನಿ, ಟ್ರಸ್ಟಿ ಪ್ರವೀಣ್ ಮತ್ತಿತರರಿದ್ದರು.

ಜಿಲ್ಲಾ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೆರೆಹಳ್ಳಿ ಬಿ.ದೊರೆಸ್ವಾಮಿಗೆ ಸನ್ಮಾನ...



ಮೈಸೂರಿನ ಸರ್ದಾರ್ ವಲ್ಲಭಭಾಯಿಪಟೇಲ್ ನಗರದ ನೇತಾಜಿ ಉದ್ಯಾನವನದಲ್ಲಿ ಸಮಾನ ಮನಸ್ಕರ ವೇದಿಕೆ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವದಲ್ಲಿ ಮೈಸೂರು ಜಿಲ್ಲಾ ಕನ್ನಡ ರಾಜ್ಯೋತ್ಸವ ಪ್ರಶಸ್ತಿ ಪುರಸ್ಕೃತ ಕೆರೆಹಳ್ಳಿ ಬಿ.ದೊರೆಸ್ವಾಮಿ ಅವರನ್ನು ಸನ್ಮಾನಿಸಲಾಯಿತು. ಈ ವೇಳೆ ಬಿಜೆಪಿ ಮುಖಂಡ ಕವೀಶ್ ಗೌಡ, ವೇದಿಕೆ ಅಧ್ಯಕ್ಷ ಥಾಮಸ್, ಕಾರ್ಯದರ್ಶಿ ನಾಗೇಂದ್ರ ಪ್ರಭು, ಉಪಾಧ್ಯಕ್ಷರಾದ ಶೋಭಾ, ಶಿವಸ್ವಾಮಿ ಹಾಗೂ ನಿರ್ದೇಶಕರು, ಪದಾಧಿಕಾರಿಗಳು ಉಪಸ್ಥಿತರಿದ್ದರು.

ಸಂಧಿವಾತ, ಮೂಳೆ ರೋಗ ಉಚಿತ ತಪಾಸಣೆ

ಮೈಸೂರು,ಡಿ.21–ಮೈಸೂರಿನ ಹಾರ್ಟ್ ಸಂಸ್ಥೆ ಹಾಗೂ ಸಂಧಿವಾತ ಮತ್ತು ಕೀಲು ರೋಗ ಚಿಕಿತ್ಸಾ ಕೇಂದ್ರದ ವತಿಯಿಂದ ಡಿ.25ರಂದು ಬೆಳಗ್ಗೆ 9ರಿಂದ 1 ಗಂಟೆಯವರೆಗೆ ಸಂಧಿವಾತ ಮತ್ತು ಮೂಳೆ ರೋಗ ಕುರಿತು ಉಚಿತ ತಪಾಸಣೆ, ರಕ್ತ ಪರೀಕ್ಷೆ ಮತ್ತು ಚಿಕಿತ್ಸಾ ಶಿಬಿರವನ್ನು ಅಗ್ರಹಾರದ ಸಂಧಿವಾತ ಮತ್ತು ಮೂಳೆ ರೋಗ ಕೇಂದ್ರದಲ್ಲಿ ಆಯೋಜಿಸಲಾಗಿದೆ.

ಸಂಧಿವಾತ, ಅಸ್ಥಿ ಸಂಧಿವಾತ, ಮೊಣಕಾಲು, ಮೊಣಕೈ, ಮಣಿಕಟ್ಟುಗಳಲ್ಲಿ ನೋವು, ಉರಿ ಕಂಡುಬರುವುದು, ಮಣಿಕಟ್ಟುಗಳು ಕೆಂಪಾಗುವುದು ಅಥವಾ ಊದಿಕೊಳ್ಳುವುದು, ಮಂಡಿ, ಬುಜದ ಕೀಲುಗಳಲ್ಲಿ ನೋವು/ಊತ ಕಂಡುಬರುವುದು ಏಳಲು ಮತ್ತು ಕುಳಿತುಕೊಳ್ಳಲು ಕಷ್ಟವಾಗುವುದು, ನಿಲ್ಲುವಾಗ ಮತ್ತು ನಡೆಯುವಾಗ ನೋವು ಕಂಡು ಬರುವುದು, ದೀರ್ಘಕಾಲದಿಂದ ಬೆರಳುಗಳಲ್ಲಿ ನೋವು ಕಾಣಿಸಿಕೊಳ್ಳುತ್ತಿರುವುದು, ದೀರ್ಘಕಾಲದ ಮಂಡಿನೋವು, ಮೊಣಕಾಲು ನೋವು, ಸ್ನಾಯು ನೋವು, ಬೆಳಗಿನ ಜಾವ ಎದ್ದ ನಂತರ, ಸ್ವಲ್ಪ ಹೊತ್ತು ವಿಶ್ರಾಂತಿಸಿದ ಬಳಿಕ ನಡೆಯಲು ಪ್ರಾರಂಭಿಸಿದಾಗ ನೋವು ಹೆಚ್ಚಾಗುವುದು ಹಾಗೂ ಚಿಕೂನ್ ಗುನ್ಯಾ ಬಂದು ಮೈ ಕೈ ನೋವು ಇನ್ನೂ ಉಳಿದಿರುವವರು, ಅಲರ್ಜಿ ಇರುವವರು ಈ ಶಿಬಿರದ ಅನುಕೂಲವನ್ನು ಪಡೆದುಕೊಳ್ಳಬಹುದು. ಹೆಚ್ಚಿನ ಮಾಹಿತಿಗೆ ಮೊ.733 8463486, 8867525114 ಸಂಪರ್ಕಿಸಬಹುದು ಎಂದು ಪ್ರಕಟಣೆ ತಿಳಿಸಿದೆ.

ಮಹಿಳೆ ನಾಪತ್ತೆ

ಮೈಸೂರು,ಡಿ.21– ಸುಮಾರು 25 ವರ್ಷದ ಶ್ರೀಮತಿ ಪತ್ರಿಮಾ ಎಂಬುವವರು ಆ.10 ರಂದು ಕಾಣೆಯಾಗಿದ್ದು, ಮೈಸೂರು ರೈಲ್ವೆ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 25 ವರ್ಷ ವಯಸ್ಸಾಗಿದ್ದು, 5.5 ಅಡಿ ಎತ್ತರ, ಗೋಧಿ ಮೈಬಣ್ಣ, ಕೋಲುಮುಖ, ಮರಾಠಿ ಮತ್ತು ಹಿಂದಿ ಭಾಷೆ ಮಾತನಾಡುತ್ತಾರೆ. ಕಾಣೆಯಾದ ಹೆಂಗಸು ಪತ್ತೆಯಾದಲ್ಲಿ ಮೈಸೂರು ರೈಲ್ವೆ ಪೊಲೀಸ್ ಠಾಣೆಯ ದೂ.ಸಂ: 0821–2516579, 948080 2122 ಅನ್ನು ಸಂಪರ್ಕಿಸಬಹುದು ಎಂದು ಮೈಸೂರು ರೈಲ್ವೆ ಪೊಲೀಸ್ ಠಾಣೆಯ ಆರಕ್ಷಕ ಉಪನಿರೀಕ್ಷಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.



ನಾಟಕಗಳಲ್ಲಿ ಬೊಂಬೆಗಳನ್ನು ಬಳಸಿಕೊಂಡು ರಂಗಾಸಕ್ತರನ್ನು ರಂಜಿಸಬಹುದು

ಹಿರಿಯ ರಂಗಕರ್ಮಿ ಪ್ರಸನ್ನ ಅಭಿಪ್ರಾಯ

ಮೈಸೂರು,ಡಿ.21(ಎಂಟಿವೈ)– ಸಾಂಸ್ಕೃತಿಕ ಪರಿಕರ ಎನಿಸಿರುವ ಬೊಂಬೆಗಳನ್ನು ನಾಟಕಗಳಲ್ಲಿ ಬಳಸಿಕೊಂಡು ರಂಗಾಸಕ್ತನ್ನು ರಂಜಿಸಬಹುದು ಎಂದು ಹಿರಿಯ ರಂಗಕರ್ಮಿ ಪ್ರಸನ್ನ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಹಾರ್ಡ್ವಿಕ್ ಶಾಲೆಯ ರಂಗಭೂಮಿ ಮಂದಿರದಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಆಯೋಜಿಸಿದ್ದ 'ರಾಷ್ಟ್ರೀಯ ಗೊಂಬೆಯಾಟ ಉತ್ಸವದ ಕಾರ್ಯಾಗಾರ'ದಲ್ಲಿ ಮಾತನಾಡಿದ ಅವರು, ಶಿಕ್ಷಣ ಕ್ಷೇತ್ರಕ್ಕೆ ಒದಗಿರುವ ಮುಖ್ಯವಾದ ಸಾಂಸ್ಕೃತಿಕ ಪರಿಕರ ಬೊಂಬೆಗಳೇ ಆಗಿವೆ. ಮಕ್ಕಳಿಗಾಗಿ ಕಥೆ ಹೇಳುವಾಗ, ನಾಟಕ ಮಾಡುವಾಗ ಗೊಂಬೆಗಳನ್ನು ಬಳಸಿ ಜನರನ್ನು ರಂಜಿಸಬಲ್ಲ ನಾಟಕಗಳನ್ನು ರೂಪಿಸಬಹುದು. ಮಕ್ಕಳಿಗೆ ಶಾಲೆಯಲ್ಲಿ ಪುಸ್ತಕದ ಹೊರೆಯನ್ನು ಇಳಿಸಿ ಅವರ ಕಲಿಕೆಯನ್ನು ನಲಿಕೆಯನ್ನಾಗಿ ಮಾಡಲು ನಾಟಕವನ್ನು ಬಳಸಿಕೊಳ್ಳಬೇಕು. ನಾಟಕದಲ್ಲಿ ಬೊಂಬೆಯಾಟದಂತಹ ಪರಿಕರಗಳನ್ನು ಬಳಸಿಕೊಂಡರೆ ಮಕ್ಕಳು ಸಂತೋಷದಿಂದ ಕುಣಿಯುತ್ತಾ ಕಲಿಯುತ್ತಾರೆ ಎಂದು ಹೇಳಿದರು.

ಮಕ್ಕಳಿಗೆ ಸಂತೋಷದಿಂದ ರಾಷ್ಟ್ರಕವಿ ಕುವೆಂಪು, ಬೇಂದ್ರೆಯವರ ಬಗ್ಗೆ ತಿಳಿಸಬೇಕು. ಮಕ್ಕಳ ಸಂತೋಷಕ್ಕಾಗಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯನ್ನು ಕಟ್ಟಲಾಗಿದೆ. ಈ ಸಂಸ್ಥೆಯು ಮೂರು ವರ್ಷಗಳಿಂದ ಕಾರ್ಯನಿರ್ವಹಿಸುತ್ತಿದ್ದರೂ ಇದೇ ಮೊದಲ ಬಾರಿಗೆ ಶಾಲೆಗಳೊಂದಿಗೆ ಕೆಲಸ ಮಾಡಲು ಹೆಜ್ಜೆ ಇಟ್ಟಿರುವುದು ಶ್ಲಾಘನೀಯ. ಗೊಂಬೆ ಯಾಟ ಮೈಸೂರಿಗೆ ಕೇಂದ್ರೀಕೃತವಾಗದೆ ಹೊರಗಿನ ಶಾಲೆಗಳ ಮಕ್ಕಳಿಗೂ ಕಲಿಸುವುದಕ್ಕೆ ಕ್ರಮ ಕೈಗೊಳ್ಳಲಾಗಿದೆ ಎಂದರು.



ಮೈಸೂರಿನ ಹಾರ್ಡ್ವಿಕ್ ಶಾಲೆಯ ರಂಗಭೂಮಿ ಮಂದಿರದಲ್ಲಿ ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆ ಆಯೋಜಿಸಿದ್ದ 'ರಾಷ್ಟ್ರೀಯ ಗೊಂಬೆಯಾಟ ಉತ್ಸವದ ಕಾರ್ಯಾಗಾರ'ಕ್ಕೆ ಹಿರಿಯ ರಂಗಕರ್ಮಿ ಪ್ರಸನ್ನ ಚಾಲನೆ ನೀಡಿದರು.

ಭಾರತೀಯ ಶೈಕ್ಷಣಿಕ ರಂಗಭೂಮಿ ಸಂಸ್ಥೆಯ ನಿರ್ದೇಶಕ ಚೆಲುವರಾಜು ಮಾತನಾಡಿ, ಡಿ.16ರಿಂದ 20ರವರೆಗೆ ರಾಷ್ಟ್ರೀಯ ಗೊಂಬೆಯಾಟ ಉತ್ಸವ ಕಾರ್ಯಾಗಾರವನ್ನು ಹಮ್ಮಿಕೊಳ್ಳಲಾಗಿದೆ. ಸಂಪನ್ಮೂಲ ವ್ಯಕ್ತಿಗಳಾಗಿ ಬಂದಿರುವ ಪಪೆಟ್ ವಿನ್ಯಾಸಕರೂ ಆದ ಶಶಿಧರ ಅಡಪ ಅವರು ಕಾರ್ಯಾಗಾರದ ನಿರ್ದೇಶಕರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ ಎಂದರು.

ಕೇರಳ, ತಮಿಳುನಾಡು, ಆಂಧ್ರಪ್ರದೇಶ ಸೇರಿದಂತೆ ಕಲಿಯಲು ಆಸಕ್ತಿ ಇರುವ ಸ್ಥಳೀಯರೂ ಸೇರಿದಂತೆ 10ರಿಂದ 15 ಜನ ಕಾರ್ಯಾಗಾರದಲ್ಲಿ ಭಾಗವಹಿಸಿ ಅಭ್ಯಾಸ ಮಾಡುತ್ತಿದ್ದಾರೆ ಎಂದರು.

ಡಿಸೆಂಬರ್ 19ರಿಂದ 21ರವರೆಗೆ ಸಾರ್ವಜನಿಕರಿಗಾಗಿ ಶೋಗಳನ್ನು ಹೆಚ್ಚಿನ ಸಂಖ್ಯೆಯಲ್ಲಿ ಮಕ್ಕಳು ನೋಡಬೇಕೆಂಬ ಉದ್ದೇಶದಿಂದ 7ರಿಂದ 8 ಶಾಲೆಗಳೊಂದಿಗೆ ಒಡಂಬಡಿಕೆ ಮಾಡಿಕೊಳ್ಳಲಾಗಿದೆ. ಅಲ್ಲದೆ ಸಂಜೆ ಬೊಂಬೆಯಾಟದ ಪ್ರದರ್ಶನವನ್ನು ಆಯೋಜಿಸಲಾಗಿತ್ತು ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಪಪೆಟ್ ವಿನ್ಯಾಸಕರು ಮತ್ತು ನಿರ್ಮಾಣ ವಿನ್ಯಾಸಕರೂ ಆದ ಶಶಿಧರ ಅಡಪ, ಹಿರಿಯ ರಂಗ ನಿರ್ದೇಶಕರಾದ ರಾಮೇಶ್ವರಿ ವರ್ಮಾ ಸೇರಿದಂತೆ ಇತರರು ಉಪಸ್ಥಿತರಿದ್ದರು.

ವಿವಿಧ ಯೋಜನೆಗಳಿಗೆ ಅರ್ಜಿ ಆಹ್ವಾನ

ಮೈಸೂರು,ಡಿ.21– ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ 2025–26ನೇ ಸಾಲಿನಲ್ಲಿ ವಿವಿಧ ಯೋಜನೆಯಡಿ ಇಲಾಖಾ ಸೌಲಭ್ಯವನ್ನು ಪಡೆಯಲು ಆನ್‌ಲೈನ್ ಮೂಲಕ ಅರ್ಜಿ ಆಹ್ವಾನಿಸಲಾಗಿದೆ. ವಿದ್ಯುತ್‌ಚಾಲಿತ ಬಾರ್ಬರ್ ಉಪಕರಣಗಳನ್ನು ಪಡೆಯುವವರು ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ಜಾತಿ ಪ್ರಮಾಣ ಪತ್ರ, ಬಾರ್ಬರ್ ಕಸುಬಿನ ಕುಶಲಕರ್ಮಿಯಾಗಿದ್ದಲ್ಲಿ ಆಯಾ ಗ್ರಾಪಂ ಅಭಿವೃದ್ಧಿ ಅಧಿಕಾರಿಯಿಂದ ಧೃಡೀಕರಣ ಪತ್ರ, ಕಾರ್ಮಿಕ ಇಲಾಖೆಯಿಂದ ವಿತರಿಸಿದ ಕುಶಲಕರ್ಮಿ ಗುರುತಿನ ಚೀಟಿ ಪ್ರತಿ. ದಾಖಲಾತಿಗಳನ್ನು ಸಲ್ಲಿಸಬೇಕು. ಕುಶಲಕರ್ಮಿಗಳಿಗೆ ಬಡ್ಡಿ ಸಹಾಯಧನ ಯೋಜನೆಯಡಿ ಸಹಾಯಧನ ಪಡೆಯುವವರು ಪಾಸ್‌ಪೋರ್ಟ್ ಗಾತ್ರದ ಭಾವಚಿತ್ರ, ಜಾತಿ ಪ್ರಮಾಣ ಪತ್ರ, ಆಧಾರ್ ಕಾರ್ಡ್, ಬ್ಯಾಂಕ್ ಪಾಸ್ ಪುಸ್ತಕ, ನಿಗದಿತ ನಮೂನೆಯಲ್ಲಿ ಬ್ಯಾಂಕ್‌ನಿಂದ ಸಾಲ ಮಂಜೂರಾತಿ ಹಾಗೂ ಬಿಡುಗಡೆಯಾಗಿರುವ ಪತ್ರ, ಉದ್ಯಮ ಆಧಾರ್, ಸ್ಥಳೀಯ ಸಂಸ್ಥೆಯಿಂದ ಪಡೆದ ಪರವಾನಿಗೆ ಪತ್ರ, ಬ್ಯಾಂಕಿನಿಂದ ಬಡ್ಡಿ ಸಹಾಯಧನದ ನಮೂನೆ ಪತ್ರ, ಬ್ಯಾಂಕಿನಿಂದ ಸಾಲದ ವಿವರದ ನಮೂನೆ ದಾಖಲೆಗಳನ್ನು ಸಲ್ಲಿಸಬೇಕು. ಅರ್ಜಿ ಸಲ್ಲಿಸಲು ಜನವರಿ 10 ಅಂತಿಮ ದಿನಾಂಕ.

ಮೈಸೂರು ವಿವಿ ವಿಶ್ರಾಂತ ಕುಲಪತಿ ಎಸ್.ಎನ್ ಹೆಗ್ಡೆ ನಿಧನಕ್ಕೆ ಸಂತಾಪ



ಮೈಸೂರು: ಮೈಸೂರು ವಿವಿ ವಿಶ್ರಾಂತ ಕುಲಪತಿ ಪ್ರೊ. ಎಸ್.ಎನ್.ಹೆಗ್ಡೆ ಅವರ ನಿಧನಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಸಿಂಡಿಕೇಟ್ ಮಾಜಿ ಸದಸ್ಯ ಡಾ.ಈ.ಸಿ.ನಿಂಗರಾಜ್‌ಗೌಡ ಸಂತಾಪ ಸೂಚಿಸಿದ್ದಾರೆ. ಪ್ರೊ. ಎಸ್.ಎನ್ ಹೆಗ್ಡೆ ಅವರು ಕುಲಪತಿಯಾಗಿದ್ದ ಅವಧಿಯಲ್ಲಿ ಮೈಸೂರು ವಿವಿಯ ಶೈಕ್ಷಣಿಕ ಹಾಗೂ ಮೂಲ ಸೌಕರ್ಯ ಅಭಿವೃದ್ಧಿಗೆ ಹೆಚ್ಚಿನ ಒತ್ತು ನೀಡಿದ್ದರು. ವಿಜ್ಞಾನ ವಿಭಾಗದ ಹಿನ್ನೆಲೆಯಾಗಿದ್ದರಿಂದ ವೈಜ್ಞಾನಿಕ ಸಂಶೋಧನೆಗೂ ಹೆಚ್ಚಿನ ಪ್ರೋತ್ಸಾಹ ನೀಡುವ ಮೂಲಕ ವಿಜ್ಞಾನದ ಅಭಿವೃದ್ಧಿಗೆ ಒತ್ತು ನೀಡಿದ್ದರು. ಎಸ್. ಎನ್ ಹೆಗ್ಡೆ ಅವರ ನಿಧನದಿಂದ ತುಂಬಲಾರದ ನಷ್ಟ ಉಂಟಾಗಿದೆ ಎಂದು ಡಾ.ಈ.ಸಿ.ನಿಂಗರಾಜ್ ಗೌಡ ಕಂಬನಿ ಮಿಡಿದಿದ್ದಾರೆ.


ದೇಶ - ವಿದೇಶ

ಭ್ರಷ್ಟಾಚಾರ: ಲೆಫ್ಟಿನೆಂಟ್ ಕರ್ನಲ್ ಬಂಧನ; 2.36 ಕೋಟಿ ನಗದು ವಶ



ನವದೆಹಲಿ: ರಕ್ಷಣಾ ಸಚಿವಾಲಯದ, ರಕ್ಷಣಾ ಉತ್ಪಾದನಾ ಇಲಾಖೆಗೆ ನಿಯೋಜನೆಗೊಂಡಿದ್ದ ಅಧಿಕಾರಿ ಲೆಫ್ಟಿನೆಂಟ್ ಕರ್ನಲ್ ದೀಪಕ್‌ಕುಮಾರ್ ಶರ್ಮಾ ಅವರನ್ನು ಭ್ರಷ್ಟಾಚಾರ ಪ್ರಕರಣದಲ್ಲಿ ಸಿಬಿಐ ಬಂಧಿಸಿದೆ. ಶರ್ಮಾ, ರಕ್ಷಣಾ ಉಪಕರಣಗಳ ತಯಾರಿಕೆ ಮತ್ತು ರಫ್ತಿಗೆ ಸಂಬಂಧಿಸಿದಂತೆ ಬೆಂಗಳೂರಿನ ಕಂಪನಿಯೊಂದರಿಂದ 3 ಲಕ್ಷ ಲಂಚಕ್ಕೆ ಬೇಡಿಕೆ ಇರಿಸಿದ್ದರು. ಸಿಬಿಐ ಶರ್ಮಾ ಅವರ ದೆಹಲಿ ನಿವಾಸದಲ್ಲಿ ಕೈಗೊಂಡ ಶೋಧ ಕಾರ್ಯಾಚರಣೆಯಲ್ಲಿ 2.23 ಕೋಟಿ ನಗದು ಪತ್ತೆಯಾಗಿದೆ. ರಕ್ಷಣಾ ಸಚಿವಾಲಯದ ಉತ್ಪಾದನಾ ಇಲಾಖೆಯ ಸಹಾಯಕ ಯೋಜನಾ ಅಧಿಕಾರಿಯಾಗಿ ಶರ್ಮಾ ಕಾರ್ಯನಿರ್ವಹಿಸುತ್ತಿದ್ದಾರೆ. ಅವರ ಪತ್ನಿ ಕರ್ನಲ್ ಕಾಜಲ್ ಬಾಲಿ ರಾಜಸ್ಥಾನದ ಗಂಗಾನಗರದಲ್ಲಿ 16ನೇ ಪದಾತಿ ದಳದ ಅಧಿಕಾರಿ ಆಗಿದ್ದಾರೆ. ಇಬ್ಬರ ವಿರುದ್ಧವೂ ಸಿಬಿಐ ಪ್ರಕರಣ ದಾಖಲಿಸಿದೆ. ಶರ್ಮಾ ರಕ್ಷಣಾ ಉಪಕರಣಗಳ ತಯಾರಿಕೆ, ರಫ್ತಿಗೆ ಸಂಬಂಧಿಸಿದಂತೆ ವಿವಿಧ ಖಾಸಗಿ ಕಂಪನಿಗಳ ಪ್ರತಿನಿಧಿಗಳೊಂದಿಗೆ ಕ್ರಿಮಿನಲ್ ಪಿತೂರಿ, ಭ್ರಷ್ಟಾಚಾರ ಮತ್ತು ಕಾನೂನುಬಾಹಿರ ಚಟುವಟಿಕೆಗಳಲ್ಲೂ ತೊಡಗಿಸಿಕೊಂಡಿದ್ದರು ಎಂದು ಸಿಬಿಐ ವಕ್ತಾರ ತಿಳಿದ್ದಾರೆ.

ಅಪರಿಚಿತನಿಂದ ಗುಂಡಿನ ದಾಳಿ; 10 ನಾಗರಿಕರ ಸಾವು



ಜೋಹಾನ್ಸ್ ಬರ್ಗ್: ದಕ್ಷಿಣ ಆಫ್ರಿಕಾದ ಬೆಕ್ಕರ್ಸ್ಡಾಲ್ ಪಟ್ಟಣದಲ್ಲಿ ಅಪರಿಚಿತ ವ್ಯಕ್ತಿಯೊಬ್ಬ ನಾಗರಿಕರ ಮೇಲೆ ಗುಂಡಿನ ದಾಳಿ ಮಾಡಿದ್ದು, ಘಟನೆಯಲ್ಲಿ 10 ಜನರು ಮೃತಪಟ್ಟಿದ್ದಾರೆ. 10ಕ್ಕೂ ಅಧಿಕ ಮಂದಿ ಗಾಯಗೊಂಡಿದ್ದಾರೆ ಎಂದು ಪೊಲೀಸರು ಭಾನುವಾರ ತಿಳಿಸಿದ್ದಾರೆ. ಜೋಹಾನ್ಸ್ ಬರ್ಗ್ ನಗರದಿಂದ 40 ಕಿ.ಮೀ ದೂರದಲ್ಲಿ ಬೆಕ್ಕರ್ಸ್ಡಾಲ್ ಪಟ್ಟಣವು ಚಿನ್ನದ ಗಣಿಗಾರಿಕೆಗೆ ಪ್ರಸಿದ್ಧವಾಗಿದೆ. ಬೆಕ್ಕರ್ಸ್ಡಾಲ್ ಪಟ್ಟಣದ ಹೋಟೆಲೊಂದರ ಬಳಿ ಘಟನೆ ಜರುಗಿದ್ದು, ಅಪರಿಚಿತ ಬಂದೂಕುಧಾರಿ ವ್ಯಕ್ತಿಯೊಬ್ಬ ರಸ್ತೆಯಲ್ಲಿದ್ದ ನಾಗರಿಕರ ಮೇಲೆ ಗುಂಡಿನ ದಾಳಿ ನಡೆಸಿದ್ದಾನೆ ಎಂದು ಪೊಲೀಸರು ಹೇಳಿದ್ದಾರೆ. ಘಟನೆಯಲ್ಲಿ 10 ಜನರು ಮೃತಪಟ್ಟಿದ್ದು, ದಾಳಿಗೆ ನಿಖರ ಕಾರಣ ತಿಳಿದುಬಂದಿಲ್ಲ. ಗಾಯಗೊಂಡವರನ್ನು ಆಸ್ಪತ್ರೆಗೆ ದಾಖಲಿಸಲಾಗಿದೆ ಎಂದು ತಿಳಿಸಿದ್ದಾರೆ. ಇದೇ ತಿಂಗಳಲ್ಲಿ ದಕ್ಷಿಣ ಆಫ್ರಿಕಾದಲ್ಲಿ ನಾಗರಿಕರ ಮೇಲೆ ನಡೆದ 2ನೇ ಗುಂಡಿನ ದಾಳಿ ಯಾಗಿದೆ. ಡಿ.6ರಂದು ಪ್ರಿಟೋರಿಯಾದ ಹೋಟೆಲ್ ಬಳಿ ಅಪರಿಚಿತ ವ್ಯಕ್ತಿಯೊಬ್ಬ ಗುಂಡಿನ ದಾಳಿ ನಡೆಸಿದ್ದ. ಡಿ.14ರಂದು ಆಸ್ಟ್ರೇಲಿಯಾದ ಬೋಂಡಿ ಬೀಚ್‌ನಲ್ಲಿ ಕೂಡ ಗುಂಡಿನ ದಾಳಿ ನಡೆದಿತ್ತು.

ಭಾರತೀಯ ಸೇನೆಗೆ 1 ಲಕ್ಷ 9 MM ಪಿಸ್ತೂಲ್ ಖರೀದಿ



ನವದೆಹಲಿ: ಶತ್ರುಗಳನ್ನು ಹತ್ತಿರದಿಂದ ಎದುರಿಸಲು ತನ್ನ ಸಿಬ್ಬಂದಿಯನ್ನು ಸಜ್ಜುಗೊಳಿಸಲು ಭಾರತೀಯ ಸೇನೆಯು ಒಂದು ಲಕ್ಷ 9–ಎಂಎಂ ಪಿಸ್ತೂಲ್‌ಗಳನ್ನು ಖರೀದಿಸುವ ಪ್ರಕ್ರಿಯೆ ಆರಂಭಿಸಿದೆ. ಇದರ ನಂತರ ಲೈಟ್ ಮೆಷಿನ್ ಗನ್‌ಗಳು ಮತ್ತು ಕ್ಲೋಸ್ ಕ್ವಾರ್ಟರ್ ಬ್ಯಾಟಲ್ ಕಾರ್ಬೈನ್‌ಗಳನ್ನು ಖರೀದಿಸಲಾಗುತ್ತದೆ. ಈ ಹೊಸ ಖರೀದಿಯು ರಕ್ಷಣಾ ವಲಯದಲ್ಲಿ ಮೇಕ್–ಇನ್–ಇಂಡಿಯಾ' ಮತ್ತು ಆತ್ಮನಿರ್ಭರ್ ಭಾರತ್ ಅಥವಾ ಸ್ವಾವಲಂಬನೆ ಉಪಕ್ರಮದ ಅಡಿಯಲ್ಲಿ ನಡೆಯಲಿದೆ.

ಇಶಾ ಪೋರ್‌ನ ರೈಫಲ್ ಫ್ಯಾಕ್ಟರಿಯಿಂದ ಅಸ್ತಿತ್ವದಲ್ಲಿರುವ 9mm ಸೆಮಿ–ಆಟೋಮ್ಯಾಟಿಕ್, ಮ್ಯಾಗಜೀನ್–ಫೆಡ್ ಪಿಸ್ತೂಲ್ ಅನ್ನು ಭವಿಷ್ಯದಲ್ಲಿ ಖರೀದಿಸಲಾಗುವ ಪಿಸ್ತೂಲ್‌ಗಳೊಂದಿಗೆ ಬದಲಾಯಿಸುವುದು ಈ ಯೋಜನೆ ಉದ್ದೇಶವಾಗಿದೆ. ಹೊಸ ಪಿಸ್ತೂಲ್‌ಗಳು ಹಳೆಯ ಶಸ್ತ್ರಾಸ್ತ್ರಗಳನ್ನು ಆಧುನೀಕರಿಸಲು ಆಂಬಿಡೆಕ್ಸ್ಟ್ರಸ್ ನಿಯಂತ್ರಣಗಳು, ಸಪ್ರೆಸರ್‌ಗಳು ಮತ್ತು ಆಕ್ಸೆಸರಿ ಟ್ರ್ಯಾಕ್ ಒಳಗೊಂಡಿರುವ ನಿರೀಕ್ಷೆಯಿದೆ.

ಚಿತ್ತಗಾಂಗ್‌ನಲ್ಲಿ ಅನಿರ್ದಿಷ್ಟಾವಧಿ ವೀಸಾ ಸೇವೆ ನಿಲ್ಲಿಸಿದ ಭಾರತ



ಢಾಕಾ: ಮತ್ತೆ ತೀವ್ರ ರೀತಿಯಲ್ಲಿ ಬಾಂಗ್ಲಾದೇಶ ಹೊತ್ತಿ ಉರಿಯುತ್ತಿರುವ ಹಿನ್ನೆಲೆಯಲ್ಲಿ ಭಾರತವು ಚಿತ್ತಗಾಂಗ್ ನಗರದಲ್ಲಿ ತನ್ನ ವೀಸಾ ಆಪರೇಷನ್ಸ್ ಅನ್ನು ಅನಿರ್ದಿಷ್ಟಾವಧಿಯವರೆಗೆ ಸ್ಥಗಿತಗೊಳಿಸಿದೆ. ಚಿತ್ತಾಂಗ್ ನಗರದಲ್ಲಿ ಭಾರತೀಯ ಉಪರಾಯಭಾರ ಕಚೇರಿ ಮೇಲೆ ಬಾಂಗ್ಲಾ ಪ್ರತಿಭಟನಕಾರರು ದಾಳಿ ನಡೆಸಿದ ಬೆನ್ನಲ್ಲೇ ಈ ನಿರ್ಧಾರ ಕೈಗೊಳ್ಳಲಾಗಿದೆ. ಬೃಹತ್ ಸಂಖ್ಯೆಯಲ್ಲಿದ್ದ ಜನರ ಗುಂಪು ಭಾರತದ ಈ ರಾಜತಾಂತ್ರಿಕ ಕಚೇರಿಗೆ ನುಗ್ಗಲು ಯತ್ನಿಸಿತ್ತಾದರೂ ಭದ್ರತಾ ಪಡೆಗಳು ಅದನ್ನು ವಿಫಲಗೊಳಿಸಿದ್ದವು. ಈಗ ಮುನ್ನೆಚ್ಚರಿಕೆಯಾಗಿ ಕಚೇರಿಯಲ್ಲಿನ ವೀಸಾ ಕಾರ್ಯವನ್ನು ಮುಂದಿನ ಸೂಚನೆಯವರೆಗೂ ನಿಲ್ಲಿಸಲಾಗಿದೆ. ಢಾಕಾದಲ್ಲಿರುವ ಭಾರತೀಯ ರಾಯಭಾರ ಕಚೇರಿ, ಚಿತ್ತಾಂಗ್, ಖುಲ್ನಾ ಮತ್ತು ರಾಜಷಾಹಿಯಲ್ಲಿರುವ ಉಪ ರಾಯಭಾರ ಕಚೇರಿಗಳ ಬಳಿ ತೀವ್ರ ಸ್ವರೂಪದಲ್ಲಿ ಪ್ರತಿಭಟನೆಗಳು ನಡೆದಿವೆ. ಬಂದರು ನಗರಿಯಾದ ಚಿತ್ತಗಾಂಗ್‌ನ ಭಾರತದ ಉಪರಾಯಭಾರ ಕಚೇರಿಯಲ್ಲಿ ದುರುಳರು ದಾಂದಲೆ ನಡೆಸಲು ಯತ್ನಿಸಿದ ಹಿನ್ನೆಲೆಯಲ್ಲಿ ಇವತ್ತಿನಿಂದಲೇ ಎಲ್ಲಾ ವೀಸಾ ಸಂಬಂಧಿತ ಕೆಲಸಗಳನ್ನು ಸ್ಥಗಿತಗೊಳಿಸಿದೆ.

ದೇವರ ಹಾಡು ಹಾಡಿದ್ದಕ್ಕೆ ಬಂಗಾಳಿ ಗಾಯಕಿ ಮೇಲೆ ಹಲ್ಲೆಗೆ ಯತ್ನ

ಕೋಲ್ಕತಾ: ಬಂಗಾಳಿ ಸಿನಿಮಾವೊಂದರ ಭಕ್ತಿ ಗೀತೆಯನ್ನು ಹಾಡಿದ್ದಕ್ಕೆ ಗಾಯಕಿ ಮೇಲೆ ಹಲ್ಲೆಗೆ ಯತ್ನಿಸಿದ ಆರೋಪದ ಮೇಲೆ ಒಬ್ಬ ವ್ಯಕ್ತಿಯನ್ನು ಪೊಲೀಸರು ಬಂಧಿಸಿದ್ದಾರೆ. ಪಶ್ಚಿಮ ಬಂಗಾಳದ ಪೂರ್ಬ ಮೇದಿನಿಪುರ್‌ನ ಭಾಗಬನ್‌ಪುರ್ ಎಂಬಲ್ಲಿನ ಶಾಲೆಯೊಂದರಲ್ಲಿ ಈ ಘಟನೆ ನಡೆದಿದೆ. ಖ್ಯಾತ ಬಂಗಾಳಿ ಗಾಯಕಿ ಲಗ್ನಜಿತಾ ಚಕ್ರಬರ್ತಿಯನ್ನು ನಿಂದಿಸಿ ಹಲ್ಲೆಗೆ ಯತ್ನಿಸಿದ ಎನ್ನಲಾಗಿದೆ.

ಭಾಗಬನ್‌ಪುರ್‌ನಲ್ಲಿರುವ ಸೌತ್ ಪಾಯಿಂಟ್ ಪಬ್ಲಿಕ್ ಸ್ಕೂಲ್‌ನಲ್ಲಿ ಲಗ್ನಿಜಿತಾ ಚಕ್ರಬರ್ತಿ ಅವರ ಗಾಯನ ಕಾರ್ಯಕ್ರಮವಿತ್ತು. ಮೊದಲ 45 ನಿಮಿಷ ಅವರು ವಿವಿಧ ಹಾಡುಗಳನ್ನು ಹಾಡಿದ್ದಾರೆ. ಈ ವೇಳೆ, ವೇದಿಕೆಗೆ ಏರಿ ಹೋದ ಮೆಹಬೂಬ್ ಮಲ್ಲಿಕ್ ಎನ್ನುವ ವ್ಯಕ್ತಿ, ಲಗ್ನಜಿತಾ ಅವರನ್ನು ನಿಂದಿಸಿ ಹೊಡೆಯಲು ಯತ್ನಿಸಿದ್ದಾನೆ. ಜಾಗೋ ಮಾ ಹಾಡಿದ್ದು ಸಾಕು. ಈಗ ಏನಾದರೂ ಸೆಕ್ಯೂಲರ್ ನಂಥದ್ದು ಹಾಡು ಎಂದು ಮಲ್ಲಿಕ್ ಜಬರ್ದಸ್ ಮಾಡಿದ್ದು ಮೈಕ್‌ನಲ್ಲಿ ಎಲ್ಲರಿಗೂ ಕೇಳಿಸಿದೆ. ಈ ಘಟನೆ ಬಳಿಕ ಲಗ್ನಜಿತಾ ಅವರು ಕಾರ್ಯಕ್ರಮವನ್ನು ಅಲ್ಲಿಗೇ ಇಳಿಸಿ ಹೊರಟು ಹೋಗಿದ್ದಾರೆ. ನಂತರ ಪೊಲೀಸ್ ಠಾಣೆಗೆ ಹೋಗಿ ದೂರು ಕೊಟ್ಟಿದ್ದಾರೆ. ಇದಾದ ಬಳಿಕ ಪೊಲೀಸರು ಮೆಹಬೂಬಾ ಮಲ್ಲಿಕ್‌ರನ್ನು ಬಂಧಿಸಿದ್ದಾರೆ.

ಕೊಡಗು ಜಿಲ್ಲೆಯಲ್ಲಿ ಪೋಲಿಯೋ ಲಸಿಕಾ ಕಾರ್ಯಕ್ರಮ ಯಶಸ್ವಿ

ಮಡಿಕೇರಿ, ಡಿ.21–ಇಂದಿನಿಂದ ಆರಂಭವಾದ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮ ಜಿಲ್ಲೆಯಾದ್ಯಂತ ಯಶಸ್ವಿಯಾಗಿ ನಡೆಯಿತು.

ಜಿಲ್ಲಾ ಕೇಂದ್ರ ಮಡಿಕೇರಿ ಸೇರಿದಂತೆ ತಾಲೂಕು ಕೇಂದ್ರಗಳಾದ ವಿರಾಜಪೇಟೆ, ಸೋಮವಾರಪೇಟೆ, ಕುಶಾಲನಗರ, ಪೊನ್ನಂಪೇಟೆ ಸೇರಿದಂತೆ ಗ್ರಾಮೀಣ ಭಾಗಗಳಲ್ಲಿ ಬೆಳಗ್ಗಿನಿಂದಲೆ 5 ವರ್ಷದ ಒಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿಯನ್ನು ನೀಡುವ ಕಾರ್ಯ ನಡೆಯಿತು. ಆಯಾ ಗ್ರಾಮೀಣ ಭಾಗದ ಅಂಗನವಾಡಿ ಕೇಂದ್ರಗಳು, ಶಾಲೆಗಳಲ್ಲಿ ತೆರೆಯಲಾಗಿದ್ದ ಲಸಿಕಾ ಕೇಂದ್ರಗಳಿಗೆ ಪೋಷಕರು ಉತ್ಸಾಹದಿಂದ ಆಗಮಿಸಿ ತಮ್ಮ ಮಕ್ಕಳಿಗೆ ಲಸಿಕೆಯನ್ನು ಹಾಕಿಸಿದರು. ಗೋಣಿಕೊಪ್ಪ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಶಾಸಕ ಎ ಎಸ್. ಪೊನ್ನಣ್ಣ ಮಗುವಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು.

ಜಿಲ್ಲೆಯಲ್ಲಿ 5 ವರ್ಷದ ಒಳಗಿನ ಒಟ್ಟು 32,702 ಮಕ್ಕಳಿದ್ದು, ನಗರ ವ್ಯಾಪ್ತಿಯಲ್ಲಿ 3,275 ಗ್ರಾಮೀಣ ವ್ಯಾಪ್ತಿಯಲ್ಲಿ 29,427 ಮಕ್ಕಳಿದ್ದು, ಎಲ್ಲರಿಗೂ ಲಸಿಕೆ ನಿಡುವ ಗುರಿಯನ್ನು ಹೊಂದಲಾಗಿದೆ. ಜಿಲ್ಲೆಯಲ್ಲಿ ಪಲ್ಸ್ ಪೋಲಿಯೊ ಲಸಿಕಾ ಕಾರ್ಯಕ್ರಮ 470 ಬೂತ್‌ಗಳು ಹಾಗೂ 32 ಸಂಚಾರಿ ಬೂತ್‌ಗಳ ಮೂಲಕ ನಡೆಯಿತು.

ಇಂದು ಬಿಟ್ಟು ಹೋಗಿರುವ, ಹೊಸದಾಗಿ ವಲಸೆ ಬಂದಿರುವ ಮಕ್ಕಳನ್ನು ಗುರುತಿಸಲು ಡಿ.22, 23 ರಂದು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ, ಡಿ.22 ರಿಂದ 24ರವರೆಗೆ ಮನೆಮನೆಗೆ ಭೇಟಿ ನೀಡಿ ಲಸಿಕೆ ನೀಡಲಾಗುತ್ತದೆ. 85 ಮೇಲ್ವಿಚಾರಕರು ಮತ್ತು 973 ಸಿಬ್ಬಂದಿಗಳು ಇಂದಿನ ಲಸಿಕಾ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದರು.

ಜಿಲ್ಲೆಗೆ ಆಗಮಿಸುವ ಎಲ್ಲಾ ವಲಸೆ ಕಾರ್ಮಿಕರ ಮೇಲೆ ಗಮನಹರಿಸಲಾಗಿತ್ತು. ಜಿಲ್ಲಾ ವ್ಯಾಪ್ತಿಯ ಬಸ್ ನಿಲ್ದಾಣಗಳಲ್ಲಿ ಲಸಿಕಾ ಕೇಂದ್ರದ ಸಿಬ್ಬಂದಿ, ವಿವಿದೆಡೆಗಳಿಂದ ಆಗಮಿಸುತ್ತಿದ್ದ ಪ್ರಯಾಣಿಕರು ಮತ್ತು ಅವರ ಮಕ್ಕಳನ್ನು ಗಮನಿಸಿ, ಲಸಿಕೆಗಳನ್ನು ಹಾಕಿದರು.

ಹಳೇ ತಾಲೂಕು ಅಂಗನವಾಡಿ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ



ನಾಪೋಕ್ಲು ಸಮೀಪದ ಹಳೇ ತಾಲೂಕು ಅಂಗನವಾಡಿ ಕೇಂದ್ರದಲ್ಲಿ ಪಂಚಾಯತ್ ಸದಸ್ಯರು, ಸ್ಥಳದಾನಿಗಳಾದ ಕುಲ್ಲೇಟಿರ ಅರುಣ ಬೇಬ, ಪಂಚಾಯಿತಿ ಸದಸ್ಯರಾದ ಹೇಮಾ ಅರುಣ್, ಎಎಸ್‌ಐ ರಾಮಕೃಷ್ಣ ಕಾರ್ಯಕ್ರಮ ಉದ್ಘಾಟಿಸಿದರು. ಈ ವೇಳೆ ಅಂಗನವಾಡಿ ಕಾರ್ಯಕರ್ತೆಯರಾದ ಭಾಗ್ಯವತಿ, ಪವಿತ್ರ, ಸುಜಾತಾ, ಆಶಾ ಕಾರ್ಯಕರ್ತೆ ರಮ್ಯ ಹಾಗೂ ಪೋಷಕರು, ಮಕ್ಕಳು ಹಾಜರಾಗಿದ್ದರು.

ಪಲ್ಸ್ ಪೋಲಿಯೋಗೆ ಶಾಸಕ ಪೊನ್ನಣ್ಣ ಚಾಲನೆ



ಶಾಸಕ ಅಜ್ಜಿಕುಟ್ಟಿರ ಎಸ್.ಪೊನ್ನಣ್ಣ ಮಗುವಿಗೆ ಪೋಲಿಯೋ ಹನಿ ಹಾಕುವ ಮೂಲಕ ಚಾಲನೆ ನೀಡಿದರು

ವಿರಾಜಪೇಟೆ, ಡಿ.21–ದೇಶಾದ್ಯಂತ ನಡೆಯುತ್ತಿರುವ ಮಹತ್ವಾಕಾಂಕ್ಷೆಯ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಪಟ್ಟಣದ ಸರಕಾರಿ ಆಸ್ಪತ್ರೆಯ ಆವರಣದಲ್ಲಿ ಹಮ್ಮಿಕೊಳ್ಳಲಾಗಿತ್ತು. ಶಾಸಕ ಅಜ್ಜಿಕುಟ್ಟಿರ ಎಸ್. ಪೊನ್ನಣ್ಣ ಮಗುವಿಗೆ ಪೋಲಿಯೋ ಹನಿ ಹಾಕುವ ಮೂಲಕ ಚಾಲನೆ ನೀಡಿದರು. ಭಾರತದಲ್ಲಿ ಪೋಲಿಯೋ ಪೀಡಿತ ಮಕ್ಕಳು ಇಲ್ಲವಾದರೂ ಬೇರೆ ದೇಶಗಳಲ್ಲಿರುವುದರಿಂದ ಸರಕಾರ ಪಲ್ಸ್ ಪೋಲಿಯೋವನ್ನು ಇಂದಿನಿಂದ ಡಿ.24ರವರೆಗೆ ಹಮ್ಮಿಕೊಂಡಿದ್ದು, ಆರೋಗ್ಯದ ದೃಷ್ಟಿಯಿಂದ ಐದು ವರ್ಷದೊಳಗಿನ ಎಲ್ಲಾ ಮಕ್ಕಳಿಗೂ ಕಡ್ಡಾಯವಾಗಿ ಪಲ್ಸ್ ಪೋಲಿಯೋ ಹಾಕಿಸುವಂತೆ ಕಿವಿಮಾತು ಹೇಳಿದರು.

ಸಾರ್ವಜನಿಕ ಆಸ್ಪತ್ರೆಯ ಮುಖ್ಯ ವೈದ್ಯ ಡಾ.ವಿಶ್ವನಾಥ್ ಸಿಂಪಿ ಮಾತನಾಡಿ, ನಗರ ವ್ಯಾಪ್ತಿಯಲ್ಲಿ ಐದು ವರ್ಷಕಿಂತ ಒಳಗಿರುವ ಸಾವಿರಕ್ಕೂ ಹೆಚ್ಚು ಮಕ್ಕಳಿದ್ದಾರೆ, ಪಟ್ಟಣದ ಇತರೆಡೆಗಳಲ್ಲಿ ಪಲ್ಸ್ ಪೋಲಿಯೋ ಹನಿ ಹಾಕಲು 11 ಬೂತ್‌ಗಳಲ್ಲಿ ಸಿಬ್ಬಂದಿ ನಿಯೋಜಿಸಿದ್ದು, ಪ್ರತಿಯೊಂದು ಮಗುವಿಗೂ ಪೋಲಿಯೋ ಹನಿ ಸಿಗುವಂತಾಗಬೇಕು ಎಂದರು

ವಿಧಾನ ಪರಿಷತ್ ಸದಸ್ಯ ಸುಜಾ ಕುಶಾಲಪ್ಪ, ರೋಟರಿ ಸಂಸ್ಥೆಯ ಪ್ರತಿನಿಧಿಯಾಗಿ ಡಾ. ಎಸ್.ವಿ.ನರಸಿಂಹನ್, ಸಾರ್ವಜನಿಕ ಆಸ್ಪತ್ರೆಯ ವೈದ್ಯರಾದ ಡಾ. ಸೌಮ್ಯ, ಡಾ. ಹಂಸ, ಮರಿಯಾ, ಮೀನಾಕ್ಷಿ ಹಾಗೂ ಸಿಬ್ಬಂದಿಗಳು ಹಾಜರಿದ್ದರು.

ಬೀದಿ ನಾಯಿಗಳ ದಾಳಿಗೆ ಎರಡು ಆಡು ಬಲಿ

ಕುಶಾಲನಗರ: ಪಟ್ಟಣದ ಪುರಸಭೆ ವ್ಯಾಪ್ತಿಯ ಚೌಡೇಶ್ವರಿ ಬಡಾವಣೆಯಲ್ಲಿ ಬೀದಿ ನಾಯಿಗಳ ದಾಳಿಯಿಂದಾಗಿ ಎರಡು ಆಡುಗಳು ಬಲಿಯಾಗಿವೆ

ಕೂಡುಮಂಗಳೂರು ಗ್ರಾ.ಪಂನ ಅಮರನಾಥ್ ಬಡಾವಣೆಯ ನಿವಾಸಿ ಪುಟ್ಟರಾಜುರಿಗೆ ಸೇರಿದ ಆಡುಗಳು ಮೇಯುತ್ತಿದ್ದ ಸಂದರ್ಭದಲ್ಲಿ ನಾಲ್ಕೈದು ಬೀದಿ ನಾಯಿಗಳು ಒಂದೇ ಸಮನೆ ದಾಳಿ ನಡೆಸಿದವು. ಆಡುಗಳನ್ನು ರಕ್ಷಿಸಲು ನಾವು ಎಷ್ಟೇ ಪ್ರಯತ್ನಿಸಿದರೂ ಸಾಧ್ಯವಾಗಲಿಲ್ಲ ಎಂದು ಸ್ಥಳೀಯರು 'ಮೈಸೂರು ಮಿತ್ರ'ನಿಗೆ ಹೇಳಿದರು. ಸ್ಥಳಕ್ಕೆ ಕುಶಾಲನಗರ ಪೊಲೀಸರು ಆಗಮಿಸಿ ಪರಿಶೀಲನೆ ನಡೆಸಿದ್ದಾರೆ. ಘಟನೆ ಬಗ್ಗೆ ಪುರಸಭೆ ಗಮನಕ್ಕೆ ತರಲಾಗಿದ್ದು, ಅಗತ್ಯ ಕ್ರಮ ವಹಿಸು ವಂತೆ ನಿವಾಸಿಗಳು ಆಗ್ರಹಿಸಿದ್ದಾರೆ.

ನಿಂತಿದ್ದ ವ್ಯಾನಿಗೆ ಗುದ್ದಿ ಮಗುಚಿ ಬಿದ್ದ ಲಾರಿ

ನಾಪೋಕ್ಲು, ಡಿ.21(ದುಗ್ಗಳ)–ನಿಂತಿದ್ದ ವ್ಯಾನಿಗೆ ಗುದ್ದಿದ ಲಾರಿ ಪಲ್ಟಿ ಆದ ಘಟನೆ ಗೊನಡ್ಕ ಎಂಬಲ್ಲಿ ಜರುಗಿದೆ.



ವ್ಯಾನಿಗೆ ಗುದ್ದಿದ ಲಾರಿ ಪಲ್ಟಿಯಾಗಿರುವುದು

ಮಡಿಕೇರಿ–ಮಂಗಳೂರು ರಾಷ್ಟ್ರೀಯ ಹೆದ್ದಾರಿಯ ಕೊಡಗು–ದಕ್ಷಿಣ ಕನ್ನಡ ಗಡಿಭಾಗದ ರಸ್ತೆಯಲ್ಲಿ ಮಡಿಕೇರಿ ಕಡೆಯಿಂದ ಪೈಪು ಹೇರಿಕೊಂಡು ಸುಳ್ಯದ ಕಡೆ ತೆರಳುತ್ತಿದ್ದ ಲಾರಿಯು ಬೇಕರಿ ತಿಂಡಿ ತಿನಿಸುಗಳನ್ನು ಮಾರಾಟ ಮಾಡಿಕೊಂಡು ಕಲ್ಲುಗುಂಡಿ ಕಡೆಗೆ ಬರುತ್ತಿದ್ದ ಮಾರುತಿ ಓಮಿನಿ ವ್ಯಾನ್‌ಗೆ ಗುದ್ದಿ ಪಲ್ಟಿಯಾಗಿದೆ. ಲಾರಿಯಡಿ ವ್ಯಾನ್ ಸಿಲುಕಿದೆ. ಸುದೈವವಶಾತ್ ವ್ಯಾನಿನ ಚಾಲಕ ಸಮೀಪದ ಅಂಗಡಿಯಲ್ಲಿದ್ದ ಕಾರಣದಿಂದಾಗಿ ಅಪಾಯದಿಂದ ಪಾರಾಗಿದ್ದಾರೆ.

ಜೆಸಿಬಿ ಯಂತ್ರದ ಮೂಲಕ ಲಾರಿಯನ್ನು ಮೇಲೆತ್ತಲಾಗಿದ್ದು ಲಾರಿ ಚಾಲಕನಿಗೆ ಗಂಭೀರ ಗಾಯಗಳಾಗಿವೆ. ಗಾಯಾಳುವನ್ನು ಸುಳ್ಯದ ಆಸ್ಪತ್ರೆಗೆ ದಾಖಲಿಸಲಾಗಿದ್ದು ಚಾಲಕ ಶಿವಮೊಗ್ಗದವನೆಂದು ತಿಳಿದುಬಂದಿದೆ. ಸುಳ್ಯ ಪೊಲೀಸರು ವಾಹನಗಳನ್ನು ವಶಪಡಿಸಿಕೊಂಡು ಮೊಕದ್ದಮೆ ದಾಖಲಿಸಿಕೊಂಡು ಮುಂದಿನ ತನಿಖೆ ನಡೆಸುತ್ತಿದ್ದಾರೆ.

ಚಾಲಕರಿಗೆ ದಂಡ ವಿಧಿಸಿ ಬಿಸಿ ಮುಟ್ಟಿಸಿದ ಪೊಲೀಸರು

ಮಡಿಕೇರಿ, ಡಿ.21–ಸೂಕ್ತ ದಾಖಲಾತಿಗಳಿಲ್ಲದೆ ರಸ್ತೆ ಸುರಕ್ಷತಾ ನಿಯಮ ಉಲ್ಲಂಘಿಸಿ ವಾಹನ ಚಲಾಯಿಸುತ್ತಿದ್ದ ಚಾಲಕರಿಗೆ ನಾಪೋಕ್ಲು ಪೊಲೀಸರು ದಂಡ ವಿಧಿಸಿ ಬಿಸಿ ಮುಟ್ಟಿಸಿದ್ದಾರೆ.

ಠಾಣಾಧಿಕಾರಿ ರಾಘವೇಂದ್ರ ನೇತೃತ್ವದಲ್ಲಿ ಪಟ್ಟಣದ ಹೊರವಲಯದ ನೆಲಜಿ, ಭಾಗಮಂಡಲ ಮುಖ್ಯ ರಸ್ತೆಯಲ್ಲಿ ವಾಹನಗಳ ಪರಿಶೀಲನೆ ನಡೆಸಿದ ಪೊಲೀಸರು, ದಾಖಲಾತಿಗಳಿಲ್ಲದೆ ರಸ್ತೆ ಸುರಕ್ಷತಾ ನಿಯಮ ಉಲ್ಲಂಘಿಸಿ ವಾಹನ ಚಲಾಯಿಸುತ್ತಿದ್ದ ಚಾಲಕರಿಗೆ, ಗೂಡ್ಸ್ ವಾಹನಗಳಲ್ಲಿ ನಿಯಮ ಉಲ್ಲಂಘಿಸಿ ಕಾರ್ಮಿಕರನ್ನು ಕರೆದೊಯ್ಯುತ್ತಿದ್ದ ಚಾಲಕರಿಗೆ ಹಾಗೂ ಇನ್ನಿತರ ವಾಹನ ಸವಾರರ ದಾಖಲಾತಿಗಳನ್ನು ಪರಿಶೀಲಿಸಿ, ದಂಡ ವಿಧಿಸಿದರು.



ಪೊಲೀಸರು ಚಾಲಕನ ಡ್ರಂಕ್ ಅಂಡ್ ಡ್ರೈವ್ ತಪಾಸಣೆ ನಡೆಸುತ್ತಿರುವುದು

ಇದೇ ವೇಳೆ ಡ್ರಂಕ್ ಅಂಡ್ ಡ್ರೈವ್ ಪರಿಶೀಲನೆ ನಡೆಸಿ ಸಿಕ್ಕಿಬಿದ್ದ ಚಾಲಕರಿಗೆ ದಂಡ ವಿಧಿಸಿ ವಾಹನವನ್ನು ವಶಕ್ಕೆ ಪಡೆದುಕೊಂಡರು. ಹೆಲ್ಮೆಟ್ ಧರಿಸದೆ ದ್ವಿಚಕ್ರ ವಾಹನ ಚಲಾಯಿಸುತ್ತಿದ್ದ ಸವಾರರನ್ನು ತಡೆದು ಹೆಲ್ಮೆಟ್ ಇಲ್ಲದೆ ಅಪಘಾತವಾದಾಗ ಉಂಟಾಗುವ ಪ್ರಾಣಹಾನಿ ಬಗ್ಗೆ ತಿಳಿವಳಿಕೆ ಹೇಳಿ ದಂಡ ವಿಧಿಸಿ ಕಡ್ಡಾಯವಾಗಿ ಹೆಲ್ಮೆಟ್ ಧರಿಸುವಂತೆ ಎಚ್ಚರಿಕೆ ನೀಡಿದರು. ಸಿಬ್ಬಂದಿ ವಿಜಯಕುಮಾರ್, ನಾಗರಾಜ್, ಆನಂದ, ರಂಜಿತ್, ವೆಂಕಟೇಶ್, ಚಾಲಕ ಸಂತೋಷ್ ಪಾಲ್ಗೊಂಡಿದ್ದರು.

ಪೊನ್ನಂಪೇಟೆಯ ಹಾಕಿ ಮಾಂತ್ರಿಕ ಪುಚ್ಚಿಮಡ ಹರೀಶ್ ನಿಧನ



ಗೋಣಿಕೊಪ್ಪ/ಮಡಿಕೇರಿ, ಡಿ.21–ಹಿರಿಯ ಹಾಕಿ ತರಬೇತಿದಾರರು, ಗ್ರಾಮ ಪಂಚಾಯತ್ ಮಾಜಿ ಸದಸ್ಯರಾದ ಪುಚ್ಚಿಮಡ ಹರೀಶ್(76) ಅನಾರೋಗ್ಯದಿಂದ ಇಂದು ಮೈಸೂರಿನ ಆಸ್ಪತ್ರೆಯಲ್ಲಿ ನಿಧನರಾದರು. ಮೃತರು ಪತ್ನಿ, ಪುತ್ರ, ಇಬ್ಬರು ಪುತ್ರಿಯರು ಹಾಗೂ ಅಪಾರ ಬಂಧು ಬಳಗವನ್ನು ಅಗಲಿದ್ದಾರೆ.

ಪೊನ್ನಂಪೇಟೆಯಲ್ಲಿ ಟ್ಯುಟೋರಿಯಲ್ ನಡೆಸುತ್ತಿದ್ದ ಸಂದರ್ಭದಲ್ಲಿ ಹಲವರಿಗೆ ವಿದ್ಯಾದಾನವನ್ನು ಮಾಡಿದ್ದಾರೆ. ಸ್ವತಃ ಹಾಕಿ ಪಟುವಾದ ಇವರು ಅಂದಿನ ದಿನಗಳಲ್ಲಿ ಹಲವು ತಂಡಗಳಲ್ಲಿ ಮುಂಚೂಣಿ ಆಟಗಾರರಾಗಿದ್ದು, ಪೊನ್ನಂಪೇಟೆ ಭಾಗದ ಹಾಕಿ ಮಾಂತ್ರಿಕ ಎಂಬ ಹೆಸರನ್ನು ಕೂಡ ಗಳಿಸಿದ್ದರು. ನಂತರ ಜೂನಿಯರ್ ಕಾಲೇಜ್ ಮೈದಾನದಲ್ಲಿ ಒಲಂಪಿಯನ್ ಸಿ.ಎಸ್ ಪೂಣಚ್ಚ ಸೇರಿದಂತೆ, ಕರ್ನಾಟಕ ತಂಡವನ್ನು ಪ್ರತಿನಿಧಿಸಿದ ರಿಕ್ಕಿ ಗಣಪತಿ, ಉತ್ತಯ್ಯ, ಸೇರಿದಂತೆ ಹಲವು ಕ್ರೀಡಾಪಟುಗಳಿಗೆ ಮೊದಲ ಗುರುವಾಗಿ, ತರಬೇತಿದಾರರಾಗಿದ್ದರು. ಪೊನ್ನಂಪೇಟೆಯಲ್ಲಿ ಕ್ರೀಡಾ ವಸತಿ ನಿಲಯ ಸ್ಥಾಪಿಸುವಲ್ಲಿ ಪ್ರಮುಖರಾಗಿದ್ದಾರೆ.

ಎರಡು ದಶಕಗಳ ಹಿಂದೆ ಪೊನ್ನಂಪೇಟೆ ಪ್ರತ್ಯೇಕ ತಾಲೂಕು ಹೋರಾಟವನ್ನು ಆರಂಭಿಸಲು ಕಾರಣಕರ್ತರಾದ ಇವರು, ಅಂದಿನ ದಿನಗಳಲ್ಲಿ ಇವರ ಮನೆಯಲ್ಲೇ ಹಲವು ಬಾರಿ ಸಮಿತಿ ಸಭೆಯನ್ನು ಚೆಪ್ಪುಡೀರ ಅರುಣ್ ಮಾಚಯ್ಯನವರ ನೇತೃತ್ವದಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿದ್ದರು. ಪೊನ್ನಂಪೇಟೆಯಲ್ಲಿ ನ್ಯಾಯಾಲಯಸ್ಥಾಪನೆಯ ಸಂದರ್ಭದಲ್ಲೂ ಇವರು ಕೈ ಜೋಡಿಸಿದ್ದರು. ಮಾಜಿ ಸಚಿವ ಎಂ. ಸಿ ನಾಣಯ್ಯನವರ ಒಡನಾಡಿಯಾಗಿ ಜೆಡಿಎಸ್‌ನಲ್ಲಿ ಗುರುತಿಸಿಕೊಂಡು, ಪೊನ್ನಂಪೇಟೆ ಗ್ರಾ.ಪಂ. ಸದಸ್ಯರಾಗಿಯೂ ಕಾರ್ಯ ನಿರ್ವಹಿಸಿದ್ದರು.

ಪೊನ್ನಂಪೇಟೆ ಬಸವೇಶ್ವರ ದೇವಸ್ಥಾನದ ಅಧ್ಯಕ್ಷರಾಗಿ, ಕರ್ನಾಟಕ ಪಬ್ಲಿಕ್ ಶಾಲೆಯ ಹಳೆಯ ವಿದ್ಯಾರ್ಥಿಗಳ ಸಂಘದ ಕಾರ್ಯದರ್ಶಿಯಾಗಿ ಬಡ ವಿದ್ಯಾರ್ಥಿಗಳಿಗಾಗಿ ಹಲವು ಯೋಜನೆಗಳನ್ನು ರೂಪಿಸಿದ್ದರು. ಕೊಡವ ಸಮಾಜ, ಐಟಿಐ ಸಂಸ್ಥೆ ಇನ್ನೂ ಅನೇಕ ಸಂಘ ಸಂಸ್ಥೆಗಳಲ್ಲಿ ಸೇವೆ ಸಲ್ಲಿಸಿದ್ದಾರೆ. 10 ತಿಂಗಳಿಂದ ಅನಾರೋಗ್ಯಕ್ಕೆ ತುತ್ತಾಗಿ ಸ್ವಲ್ಪ ಮಟ್ಟಿಗೆ ಚೇತರಿಸಿ ಕೊಂಡಿದ್ದರು. ಇದೀಗ ಮೈಸೂರು ನಾರಾಯಣ ಹೃದಯಾಲಯ ಆಸ್ಪತ್ರೆಯಲ್ಲಿ ಮೃತಪಟ್ಟಿದ್ದಾರೆ.

ಮೃತರ ಅಂತಿಮ ಸಂಸ್ಕಾರ ನಾಳೆ ಪೊನ್ನಂಪೇಟೆಯ ಅವರ ಕುಟುಂಬದ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಹುದಿಕೇರಿ ಕೊಡವ ಸಮಾಜದಲ್ಲಿ ವಾಲಗತಾಟ್‌ಗೆ ಚಾಲನೆ

ಮಡಿಕೇರಿ: ಪೊನ್ನಂಪೇಟೆ ತಾಲೂಕಿನ ಹುದಿಕೇರಿ ಕೊಡವ ಸಮಾಜದಲ್ಲಿ ಕೊಡವ ಸಂಸ್ಕೃತಿಯನ್ನು ಉತ್ತೇಜಿಸುವ ವಾಲಗತಾಟ್ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಹುದಿಕೇರಿಯ ಕೊಡವ ಸಮಾಜ ಸಭಾಂಗಣದಲ್ಲಿ ತೂಕ್ ಬೊಳಕ್ ಕಲೆ, ಕ್ರೀಡೆ ಸಾಹಿತ್ಯ ಅಕಾಡೆಮಿ ಆಯೋಜಿಸಿದ ಕಾರ್ಯಕ್ರಮದಲ್ಲಿ ಶಾಸಕ ಎ.ಎಸ್.ಪೊನ್ನಣ್ಣ ಚಾಲನೆ ನೀಡಿದರು.

ಸಂಸ್ಥೆ ಹಲವು ಸಮಯದಿಂದ ಕಲೆ ಕ್ರೀಡೆ ಹಾಗೂ ಸಾಹಿತ್ಯದ ಪ್ರಚಾರಕ್ಕಾಗಿ ಉತ್ತಮ ಕಾರ್ಯಕ್ರಮಗಳನ್ನು ಹಮ್ಮಿಕೊಂಡು ಬರುತ್ತಿದೆ. ಆ ಮೂಲಕ ಜನತೆಗೆ ಉತ್ತಮ ವೇದಿಕೆಯನ್ನು ಕಲ್ಪಿಸಿ ಕೊಡುತ್ತಿದೆ. ಇಂತಹ ಕಾರ್ಯಕ್ರಮಗಳು ಮತ್ತಷ್ಟು ನಡೆಯುವಂತಾಗಬೇಕು ಎಂದರು. ತೂಕ್ ಬೊಳಕ್ ಕಲೆ, ಕ್ರೀಡೆ ಸಾಹಿತ್ಯ ಅಕಾಡೆಮಿ ಅಧ್ಯಕ್ಷ ಮುಲ್ಲೇಂಗಡ ಶಂಕರಿ ಪೂವಯ್ಯ, ಮದೋಶ್ ಪೂವಯ್ಯ, ಹುದಿಕೇರಿ ಕೊಡವ ಸಮಾಜ ಅಧ್ಯಕ್ಷ ಮೀದೇರೀರ ಸವಿನ, ಪೊನ್ನಂಪೇಟೆಯ ಅಧ್ಯಕ್ಷ ಕಾಳಿಮಾಡ ಮೋಟಯ್ಯ, ಟಿ.ಶೆಟ್ಟಿಗೇರಿಯ ಅಧ್ಯಕ್ಷ ಕೈಬುಲೀರ ಹರೀಶ್ ಅಪ್ಪಯ್ಯ, ಕಾವೇರಿ ಎಜುಕೇಶನ್ ಸೊಸೈಟಿ ಅಧ್ಯಕ್ಷ ಮಂಡೆಪಂಡ ಸುಗುಣ ಮುತ್ತಣ್ಣ, ಸರ್ವೆ ಇಲಾಖೆ ಎಡಿಎಲ್‌ಆರ್ ಬಾನಂಗಡ ಅರುಣ್, ಬಯವಂಡ ಮಹಾಬಲ, ಕೈಬುಲೀರ ಪಾರ್ವತಿ ಬೋಪಯ್ಯ ಇದ್ದರು.

ಚಾ.ನಗರ ಜಿಲ್ಲಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ

5 ವರ್ಷದೊಳಗಿನ ಮಕ್ಕಳಿಗೆ ಶಾಸಕರು, ಜಿಪಂ ಸಿಇಓ ಅವರಿಂದ ಲಸಿಕೆ





ಚಾಮರಾಜನಗರದಲ್ಲಿ ಜಿಪಂ ಸಿಇಓ ಮೋನಾರೋತ್ ಹಾಗೂ ಕೊಳ್ಳೇಗಾಲದಲ್ಲಿ ಶಾಸಕ ಎ.ಆರ್.ಕೃಷ್ಣಮೂರ್ತಿ ಪಲ್ಸ್ ಪೋಲಿಯೋಗೆ ಚಾಲನೆ ನೀಡಿದರು.

ಚಾಮರಾಜನಗರ, ಡಿ.21– ಜಿಲ್ಲಾದ್ಯಂತ ಭಾನುವಾರ ನಡೆದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಶಾಸಕರು, ಜಿಪಂ ಸಿಇಓ ಸೇರಿದಂತೆ ಇತರರು ಚಾಲನೆ ನೀಡಿದರು.

ಚಾಮರಾಜನಗರ: ತಾಲೂಕಿನ ವೆಂಕಟಯ್ಯನ ಛತ್ರ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಜಿಲ್ಲಾಡಳಿತ, ಜಿಪಂ ಹಾಗೂ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಪಲ್ಸ್ ಪೋಲಿಯೋ ಕಾರ್ಯಕ್ರಮಕ್ಕೆ ಜಿಪಂ ಸಿಇಓ ಮೋನಾ ರೋತ್ ಅವರು ಗಿಡಕ್ಕೆ ನೀರೆರೆದು ಹಾಗೂ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ವಿದ್ಯುಕ್ತವಾಗಿ ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ನಮ್ಮ ಅಕ್ಕಪಕ್ಕದ ದೇಶಗಳಲ್ಲಿ ಪೋಲಿಯೋ ಪ್ರಕರಣ ಕಾಣಿಸಿಕೊಂಡಿದೆ. ಹೀಗಾಗಿ ಈ ವೈರಸ್ ವಿರುದ್ಧ ನಾವು ಮುನ್ನೆಚ್ಚರಿಕೆ ವಹಿಸಬೇಕಿದೆ. ಈ ಕಾರಣದಿಂದಲೇ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ವ್ಯಾಪಕವಾಗಿ ಹಮ್ಮಿಕೊಳ್ಳಲಾಗಿದೆ ಎಂದರು.

ಇಂದು ಬೂತ್‌ಗಳಲ್ಲಿ ಪೋಲಿಯೋ ಲಸಿಕೆ ನೀಡಲಾಗುತ್ತಿದೆ. ನಾಳೆ, ನಾಳಿದ್ದು ಮನೆ ಮನೆಗೆ ಭೇಟಿ ನೀಡಿ ಲಸಿಕೆ ಹಾಕಲಾಗುತ್ತದೆ. ಇಂದು ಮಕ್ಕಳಿಗೆ ಲಸಿಕೆ ಹಾಕಿಸದೇ ಇದ್ದಲ್ಲಿ ಮನೆ ಮನೆಗೆ ಭೇಟಿ ನೀಡುವ ವೇಳೆ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ತಪ್ಪದೇ ಲಸಿಕೆ ಹಾಕಿಸಬೇಕು. ಈ ಮಹತ್ವದ ಕಾರ್ಯಕ್ಕೆ ವಿವಿಧ ಇಲಾಖೆಗಳು, ಸಂಘ ಸಂಸ್ಥೆಗಳು ಕೈಜೋಡಿಸಿವೆ. ಇದಕ್ಕಾಗಿ ಧನ್ಯವಾದ ತಿಳಿಸಿದರು.

ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ್ ಮಾತನಾಡಿ, ಭಾರತದಲ್ಲಿ 2011ರಲ್ಲಿ ಪೋಲಿಯೋ ಪ್ರಕರಣ ವರದಿಯಾಗಿತ್ತು. ಬಳಿಕ ಯಾವುದೇ ಪ್ರಕರಣ ವರದಿಯಾಗಿಲ್ಲ. ವಿಶ್ವ ಆರೋಗ್ಯ ಸಂಸ್ಥೆ ಭಾರತವನ್ನು ಪೋಲಿಯೋ ಮುಕ್ತ ದೇಶವೆಂದು ಘೋಷಿಸಿತ್ತು. ಆದರೂ ನೆರೆಯ ರಾಷ್ಟ್ರಗಳಲ್ಲಿ ಪೋಲಿಯೋ ಪ್ರಕರಣಗಳು ಕಂಡು ಬಂದ ಹಿನ್ನೆಲೆಯಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮ ಹಮ್ಮಿಕೊಳ್ಳಲಾಗುತ್ತಿದೆ ಎಂದರು.

ಜಿಲ್ಲಾ ಆರ್‌ಸಿಹೆಚ್ ಅಧಿಕಾರಿ ರಾಜೇಶ್, ತಾಲೂಕು ಆರೋಗ್ಯಾಧಿಕಾರಿ ಡಾ.ಶ್ರೀನಿವಾಸ್, ವೆಂಕಟಯ್ಯನಛತ್ರದ ಆರೋಗ್ಯ ಕೇಂದ್ರದ ಅಧಿಕಾರಿ ಡಾ.ಸತೀಶ್, ಗ್ರಾಪಂ ಅಧ್ಯಕ್ಷೆ ಲಾವಣ್ಯ, ಉಪಾಧ್ಯಕ್ಷ ಕೃಷ್ಣಮೂರ್ತಿ, ಸದಸ್ಯರಾದ ಜಯಲಕ್ಷ್ಮಿ, ಚಂದ್ರಮ್ಮ, ಶಿವಮಲ್ಲು, ಶೈಲಜಾ ಉಮೇಶ್, ಶೇಖರ್, ಸೋಮಣ್ಣ, ಆರೋಗ್ಯ ಇಲಾಖೆ ಚಂದ್ರಶೇಖರ್, ಲೆಕ್ಕ ವ್ಯವಸ್ಥಾಪಕ ಹೇಮಂತ್, ಕಾರ್ಯಕ್ರಮ ವ್ಯವಸ್ಥಾಪಕ ದುಷ್ಯಂತ್, ಆರೋಗ್ಯ ಶಿಕ್ಷಣಾಧಿಕಾರಿ ದೊರೆಸ್ವಾಮಿ ನಾಯಕ ಇನ್ನಿತರರಿದ್ದರು.

ಕೊಳ್ಳೇಗಾಲ: ಪಟ್ಟಣದ ಉಪವಿಭಾಗ ಸರ್ಕಾರಿ ಆಸ್ಪತ್ರೆಯಲ್ಲಿ ಭಾನುವಾರ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಚಾಲನೆ ನೀಡಿದರು.

ಈ ವೇಳೆ ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಅಧ್ಯಕ್ಷ ರಾಜೇಂದ್ರ, ಆರೋಗ್ಯ ಇಲಾಖೆ ಉಪನಿರ್ದೇಶಕ ಡಾ.ಪ್ರಭುದೇವಗೌಡ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಡಾ.ಚಿದಂಬರ್, ತಾಪಂ ಇಓ ಗುರುಶಾಂತಪ್ಪ ಬೆಳ್ಳುಂಡಗಿ, ಆಡಳಿತ ವೈದ್ಯಾಧಿಕಾರಿ ಡಾ. ಲೋಕೇಶ್ವರಿ, ತಾಲೂಕು ಆರೋಗ್ಯಾಧಿಕಾರಿ ಡಾ.ಲೋಹಿತ್ ಇತರರಿದ್ದರು.

ಯಳಂದೂರು: 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸಬೇಕು ಎಂದು ಕೆಸ್ತೂರು ಗ್ರಾಪಂ ಮಾಜಿ ಅಧ್ಯಕ್ಷ ಪಿ.ಮರಿಸ್ವಾಮಿ ತಿಳಿಸಿದರು.

ಕೆಸ್ತೂರು ಗ್ರಾಪಂ ಆವರಣದಲ್ಲಿ ಪಲ್ಸ್ ಪೋಲಿಯೊ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದರು. ಈ ವೇಳೆ ಗ್ರಾಪಂ ಮಾಜಿ ಸದಸ್ಯರಾದ ಮಧು, ಮಾದೇಶ್, ದೊರೆಸ್ವಾಮಿ, ಬಿ.ಸಿದ್ದರಾಜು, ಗುರುಲಿಂಗಯ್ಯ, ಸಿಬ್ಬಂದಿಗಳಾದ ರಾಜಮ್ಮ, ನಂಜಮ್ಮಣಿ, ಯಶೋಧ, ನಾಗಮಣಿ ಸೇರಿದಂತೆ ಆಸ್ಪತ್ರೆ ಸಿಬ್ಬಂದಿ, ಆಶಾ, ಅಂಗನವಾಡಿ ಕಾರ್ಯಕರ್ತರು ಹಾಜರಿದ್ದರು.

ಕಡ್ಡಾಯವಾಗಿ ಲಸಿಕೆ ಹಾಕಿಸಿ ಅಂಗವೈಕಲ್ಯ ತಪ್ಪಿಸಿ

ಗುಂಡ್ಲುಪೇಟೆ: ಮಕ್ಕಳಿಗೆ ಕಡ್ಡಾಯವಾಗಿ ಲಸಿಕೆ ಹಾಕಿಸಿ ಅಂಗವೈಕಲ್ಯ ತಪ್ಪಿಸಿ ಎಂದು ಶಾಸಕ ಗಣೇಶ್ ಪ್ರಸಾದ್ ತಿಳಿಸಿದರು.



ಶಾಸಕ ಗಣೇಶ ಪ್ರಸಾದ್ ಮಗುವಿಗೆ ಲಸಿಕೆ ಹಾಕುವ ಮೂಲಕ ಪಲ್ಸ್ ಪೋಲಿಯೋಗೆ ಚಾಲನೆ ನೀಡಿದರು.

ಪಟ್ಟಣದ ತಾಯಿ ಮತ್ತು ಮಕ್ಕಳ ಆಸ್ಪತ್ರೆಯಲ್ಲಿ ಭಾನುವಾರ ಆರೋಗ್ಯ ಇಲಾಖೆ ವತಿಯಿಂದ ಆಯೋಜಿಸಿದ್ದ ಪೋಲಿಯೋ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಪೋಷಕರು 5 ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಹಾಕಿಸಬೇಕು. ಈ ಬಗ್ಗೆ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಪ್ರಚಾರ ನಡೆಸಿ, ಮಕ್ಕಳಿಗೆ ಲಸಿಕೆ ಹಾಕಿಸಲು ಪ್ರೇರೇಪಿಸಬೇಕು ಎಂದರು. ತಾಲೂಕು ವೈದ್ಯಾಧಿಕಾರಿ ಡಾ.ಅಲೀಂಪಾಷ ಮಾತನಾಡಿದರು. ಈ ವೇಳೆ ಜಿಪಂ ಮಾಜಿ ಉಪಾಧ್ಯಕ್ಷ ಕೆ.ಎಸ್.ಮಹೇಶ್, ಪುರಸಭೆ ಮಾಜಿ ಅಧ್ಯಕ್ಷ ಮಧುಸೂದನ್, ಮಾಜಿ ಉಪಾಧ್ಯಕ್ಷ ಅಣ್ಣಯ್ಯಸ್ವಾಮಿ, ಮಾಜಿ ಸದಸ್ಯರಾದ ಕುಮಾರ್, ಶ್ರೀನಿವಾಸ್ ಕಣ್ಣಪ್ಪ, ಸುರೇಶ್, ಆಸ್ಪತ್ರೆ ಆಡಳಿತಾಧಿಕಾರಿ ಡಾ.ಮಂಜುನಾಥ್ ಸೇರಿದಂತೆ ಮತ್ತಿತರರಿದ್ದರು

ತೊಂಡವಾಡಿಯಲ್ಲಿ ಪಲ್ಸ್ ಪೋಲಿಯೋ



ಗುಂಡ್ಲುಪೇಟೆ ತಾಲೂಕಿನ ತೊಂಡವಾಡಿ ಆಯುಷ್ಮಾನ್ ಆರೋಗ್ಯ ಕೇಂದ್ರದ ಅಂಗನವಾಡಿ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಗಣ್ಯರು ಉದ್ಘಾಟಿಸಿದರು. ಈ ವೇಳೆ ಗ್ರಾಪಂ ಸದಸ್ಯರಾದ ಟಿ.ಎಸ್.ಬಸವನಾಯ್ಕ, ಮಹದೇವನಾಯಕ, ರಾಚಪ್ಪ, ಆರೋಗ್ಯ ಇಲಾಖೆಯ ಸಿ.ಕೆ.ರಶ್ಮಿ, ಆಶಾ ಹಾಗೂ ಅಂಗನವಾಡಿ ಕಾರ್ಯಕರ್ತೆಯರಾದ ನಾಗಮಣಿ, ಆಶಾ, ನಾಗರತ್ನಮ್ಮ, ಯದುನಂದನ್, ತುಳಸಮ್ಮ, ಸುಜಾತ, ಕೃಷ್ಣ, ಹೊಣಕಾರನಾಯಕ ಇತರರಿದ್ದರು.

ಭೀಮನಬೀಡು, ನಂಜದೇವನಪುರದಲ್ಲಿ ಹುಲಿ ಪ್ರತ್ಯಕ್ಷ ಹಿನ್ನೆಲೆ

ಅರಣ್ಯ ಇಲಾಖೆಯಿಂದ ತೀವ್ರಗೊಂಡ ಕೂಂಬಿಂಗ್

ಚಾಮರಾಜನಗರ, ಡಿ.21– ಜಿಲ್ಲೆಯಲ್ಲಿ ಹುಲಿ ದಾಳಿ ಪ್ರಕರಣ ಹೆಚ್ಚಾಗುತ್ತಿದ್ದಂತೆ ಅರಣ್ಯ ಇಲಾಖೆಯೂ ಕೂಂಬಿಂಗ್ ಕಾರ್ಯಾಚರಣೆ ತೀವ್ರಗೊಳಿಸಿದೆ. ಗುಂಡ್ಲುಪೇಟೆ ತಾಲೂಕಿನ ಭೀಮನಬೀಡು ಗ್ರಾಮದಲ್ಲಿ ಬಂಡೀಪುರ ಅರಣ್ಯ ಸಿಬ್ಬಂದಿ ಹಾಗೂ ಚಾಮರಾಜನಗರ ತಾಲೂಕಿನ ನಂಜೇದೇವನಪುರ ಗ್ರಾಮದ ಸುತ್ತಮುತ್ತ ಬಿಆರ್‌ಟಿ ಸಿಬ್ಬಂದಿ ಕಾರ್ಯಾಚರಣೆ ಕೈಗೊಂಡಿದ್ದಾರೆ.

ಗುಂಡ್ಲುಪೇಟೆ ತಾಲೂಕಿನ ಭೀಮನಬೀಡು ಗ್ರಾಮದ ಸಿದ್ದಶೆಟ್ಟಿ ಎಂಬುವರಿಗೆ ಸೇರಿದ 2 ಹಸುಗಳು ಶುಕ್ರವಾರ ಬಾಳೆ ತೋಟದಲ್ಲಿ ಮೇಯುತ್ತಿದ್ದಾಗ ಹುಲಿ ದಾಳಿ ಮಾಡಿದೆ. ಒಂದು ಹಸುವಿನ ಮುಂದಿನ ಕಾಲು, ಮತ್ತೊಂದರ ಹಿಂಬದಿ ಕಾಲನ್ನು ಕಚ್ಚಿ ತೀವ್ರವಾಗಿ ಗಾಯಗೊಳಿಸಿತ್ತು. ಅಲ್ಲದೇ ಕಳೆದೊಂದು ವಾರದಿಂದ ಭೀಮನಬೀಡು ಸುತ್ತಮುತ್ತ ಹುಲಿ ಉಪಟಳ ಹೆಚ್ಚಿದ್ದು ಜಾನುವಾರು, ಮೇಕೆಗಳ ಮೇಲೆ ಹುಲಿ ದಾಳಿ ನಡೆಸಿ ಕೊಂದು ಹಾಕಿದೆ. ಮನುಷ್ಯರ ಮೇಲೆ ದಾಳಿ ಮಾಡುವ ಮುನ್ನ ಅರಣ್ಯ ಇಲಾಖೆಯವರು ಎಚ್ಚೆತ್ತುಕೊಂಡು ಕೂಂಬಿಂಗ್ ನಡೆಸುವ ಮೂಲಕ ಹುಲಿಯನ್ನು ಸೆರೆ ಹಿಡಿಯಬೇಕೆಂದು ರೈತರ ಒತ್ತಾಯಿಸಿದ್ದಾರೆ.

ಈ ಹಿನ್ನೆಲೆಯಲ್ಲಿ ಬಂಡೀಪುರ ಸಿಎಫ್ ಪ್ರಭಾಕರನ್ ಸೂಚನೆ ಮೇರೆಗೆ ಈಗಲ್ ಡ್ರೋನ್ ಮೂಲಕ ಹುಲಿ ಚಲನವಲನ ಹಾಗೂ ಹುಲಿ ಇರುವಿಕೆ ಲೋಕೇಷನ್ ಟ್ರ್ಯಾಕ್ ಮಾಡಲಾಗುತ್ತಿದೆ. ಹುಲಿ ಕಾರ್ಯಾಚರಣೆ ವೇಳೆ ಒಂದು ದೊಡ್ಡ ಹುಲಿ ಹಾಗೂ



ಅರಣ್ಯ ಅಧಿಕಾರಿಗಳು ಕಾರ್ಯಾಚರಣೆ ಕೈಗೊಂಡಿರುವುದು.

ಮತ್ತೊಂದು ಮರಿ ಹುಲಿಯ ಹೆಜ್ಜೆ ಗುರುತುಗಳು ಪತ್ತೆಯಾಗಿದ್ದು, ಎರಡು ಹುಲಿಗಳಿರುವುದು ದೃಢಪಟ್ಟಿದೆ.

ನಂಜದೇವನಪುರದಲ್ಲಿ ಕೂಂಬಿಂಗ್: ಚಾಮರಾಜನಗರ ತಾಲೂಕಿನ ನಂಜೇದೇವನಪುರದಲ್ಲಿ 5 ಹುಲಿಗಳು ಓಡಾಡಿದ್ದ ದೃಶ್ಯ ಸಿಸಿಟಿವಿಯಲ್ಲಿ ಸೆರೆಯಾಗಿದ್ದು, ಬಿಆರ್‌ಟಿ ಹುಲಿ ಸಂರಕ್ಷಿತ ಪ್ರದೇಶದ ಚಾಮರಾಜನಗರ ಬಫರ್ ಅರಣ್ಯಾಧಿಕಾರಿಗಳು ಹುಲಿ ಸೆರೆ ಕಾರ್ಯಾಚರಣೆ ನಡೆಸುತ್ತಿದ್ದಾರೆ.

ಈ ಹಿಂದೆಯೂ ನಂಜದೇವನಪುರ ಹಾಗೂ ಸುತ್ತಮುತ್ತಲಿನ 9 ಗ್ರಾಮಗಳಲ್ಲಿ ಇಲಾಖೆ ಸಿಬ್ಬಂದಿ ವಾಕ್ ಥ್ರೂ ಕೇಜ್ ಅಳವಡಿಸಿ ತೀವ್ರ ಕಾರ್ಯಾಚರಣೆ ನಡೆಸಿದ್ದರಾದರೂ ಹುಲಿ ಸೆರೆಯಾಗಿರಲಿಲ್ಲ. ಈಗ ಮತ್ತೆ ಹುಲಿ ಓಡಾಟದ ಹಿನ್ನೆಲೆಯಲ್ಲಿ ಕಾರ್ಯಾಚರಣೆ ಆರಂಭಿಸಿದ್ದು, ಹುಲಿ ಸೆರೆಗೆ ಹರಸಾಹಸ ಪಡುತ್ತಿದ್ದಾರೆ.

ಚಿರತೆ ದಾಳಿಗೆ ನಾಲ್ಕು ಹಸು ಸಾವು

ಯಳಂದೂರು: ಚಿರತೆ ದಾಳಿಗೆ ನಾಲ್ಕು ಹಸುಗಳು ಬಲಿಯಾದ ಘಟನೆ ಯಳಂದೂರು ತಾಲೂಕಿನ ಗಂಗವಾಡಿ ಗ್ರಾಮದಲ್ಲಿ ಶನಿವಾರ ರಾತ್ರಿ ನಡೆದಿದೆ.

ಗ್ರಾಮದ ರಾಮಯ್ಯ ಎಂಬುವರಿಗೆ ಈ ಹಸುಗಳು ಸೇರಿವೆ. ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ್ದಾಗ ಚಿರತೆ ತಂತಿ ಬೇಲಿ ಹಾರಿ ಒಳಬಂದು ಹಸುಗಳ ಮೇಲೆ ದಾಳಿ ಮಾಡಿ ಕೊಂದಿದೆ. ಒಂದು ಹಸುವನ್ನು ಎಳೆದೊಯ್ಯಲು ಪ್ರಯತ್ನಿಸಿ ವಿಫಲಗೊಂಡು ತಂತಿ ಬೇಲಿ ಬದಿಯಲ್ಲೇ ಮಾಂಸ ತಿಂದು ಪರಾರಿಯಾಗಿದೆ. ಚಿರತೆ ದಾಳಿ ಹಿನ್ನೆಲೆಯಲ್ಲಿ ರೈತರು ಬೆಚ್ಚಿ ಬಿದ್ದಿದ್ದು ಸ್ಥಳಕ್ಕೆ ಬಿಆರ್‌ಟಿ ಡಿಸಿಎಫ್ ಶ್ರೀಪತಿ, ಶಾಸಕ ಎ.ಆರ್. ಕೃಷ್ಣಮೂರ್ತಿ ಭೇಟಿ ನೀಡಿ ಪರಿಶೀಲಿಸಿ, ಬೋನಿಟ್ಟು ಚಿರತೆ ಹಿಡಿಯುವ ಭರವಸೆ ನಿಡುವ ಜೊತೆಗೆ ಜಾನುವಾರುಗಳನ್ನು ಕಳೆದುಕೊಂಡ ರೈತನಿಗೆ ಸೂಕ್ತ ಪರಿಹಾರ ಕೊಡಿಸುವುದಾಗಿ ತಿಳಿಸಿದ್ದಾರೆ.

ಗುಂಡ್ಲುಪೇಟೆ: ಬಾಳೆ ತೋಟದಲ್ಲಿದ್ದ ಹುಲಿ ಸೆರೆ

ಗುಂಡ್ಲುಪೇಟೆ: ತಾಲೂಕಿನ ಮುಕ್ತಿ ಕಾಲೋನಿ ಬಾಳೆ ತೋಟದಲ್ಲಿ ಬೀಡು ಬಿಟ್ಟಿದ್ದ ಗಂಡು ಹುಲಿಯನ್ನು ಅರಣ್ಯ ಇಲಾಖೆ ಯಶಸ್ವಿಯಾಗಿ ಸೆರೆ ಹಿಡಿದಿದೆ.



ಬಾಳೆ ತೋಟದಲ್ಲಿ ಅಡಗಿದ್ದ ಹುಲಿ ಸೆರೆ ಹಿಡಿಯಲಾಯಿತು.

ಬಂಡೀಪುರ ಹುಲಿ ಯೋಜನೆ ಕ್ಷೇತ್ರ ನಿರ್ದೇಶಕ ಎಸ್.ಪ್ರಭಾಕರನ್ ನೇತೃತ್ವದಲ್ಲಿ ನಡೆದ ಕಾರ್ಯಾಚರಣೆಯಲ್ಲಿ ಪಶು ವೈದ್ಯರಾದ ಡಾ.ವಾಸೀಂ ಹಾಗೂ ಡಾ.ರಮೇಶ್ ಹುಲಿಗೆ ಅರವಳಿಕೆ ಚುಚ್ಚು ಮದ್ದು ನೀಡುವ ಮೂಲಕ ಪ್ರಜ್ಞೆ ತಪ್ಪಿಸಿ, ಕೂಡಲೇ ಹುಲಿಯನ್ನು ವಶಕ್ಕೆ ಪಡೆದು ಮದ್ದೂರು ವಲಯಾರಣ್ಯ ಕಚೇರಿಗೆ ಕೊಂಡೊಯ್ಯಲಾಯಿತು. ಈ ವೇಳೆ ಅಧಿಕಾರಿಗಳು ಹುಲಿ ಆರೋಗ್ಯ ತಪಾಸಣೆ ನಡೆಸಿ ನಂತರ ಕಾಡಿಗೆ ಬಿಡುವುದಾಗಿ ತಿಳಿಸಿದರು.

ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರು ರಕ್ಷಣೆ

ಹನೂರು: ಕಸಾಯಿಖಾನೆಗೆ ಸಾಗಿಸುತ್ತಿದ್ದ ಜಾನುವಾರುಗಳನ್ನು ರಕ್ಷಿಸುವಲ್ಲಿ ಹನೂರು ಠಾಣೆ ಪೊಲೀಸರು ಯಶಸ್ವಿಯಾಗಿದ್ದಾರೆ.



ಬೊಲೆರೋ ವಾಹನದಲ್ಲಿ 14 ಜಾನುವಾರುಗಳನ್ನು ತಮಿಳುನಾಡಿನ ಕಸಾಯಿಖಾನೆಗೆ ಸಾಗಿಸುತ್ತಿರುವ ಬಗ್ಗೆ ಸಾರ್ವಜನಿಕರು ನೀಡಿದ ಮಾಹಿತಿ ಮೇರೆಗೆ ಹನೂರು ಸರ್ಕಲ್ ಇನ್ಸ್‌ಪೆಕ್ಟರ್ ಆನಂದ್ ಮೂರ್ತಿ ಮಾರ್ಗದರ್ಶನದಲ್ಲಿ ದಾಳಿ ನಡೆಸಿದ ಎಸ್‌ಐ ಮಂಜುನಾಥ್ ಪ್ರಸಾದ್, ಸಿಬ್ಬಂದಿ ತಾಲೂಕಿನ ಗಡಿ ಗ್ರಾಮವಾದ ಹುಣಸೇಪಾಳ್ಯ ಗ್ರಾಮದ ಬಳಿಯ ಮಾದಪ್ಪನ ದೊಡ್ಡಿ ಬಳಿ ಜಾನುವಾರುಗಳು ಹಾಗೂ ವಾಹನ ವಶಕ್ಕೆ ಪಡೆದು ಪ್ರಕರಣ ದಾಖಲಿಸಿಕೊಂಡು, ಮುಂದಿನ ತನಿಖೆ ಕೈಗೊಂಡಿದ್ದಾರೆ.

ವೀರನಪುರದಲ್ಲಿ ಹುಲಿ ಪತ್ತೆ

ಚಾಮರಾಜನಗರ: ತಾಲೂಕಿನ ವೀರನಪುರ ಗ್ರಾಮದ ಕರಿಕಲ್ಲು ಕ್ವಾರೆ ಬಳಿ ಹುಲಿ ಓಡಾಡುತ್ತಿರುವ ದೃಶ್ಯ ಅರಣ್ಯ ಇಲಾಖೆ ಕ್ಯಾಮರಾದಲ್ಲಿ ಸೆರೆಯಾಗಿದೆ.

ನಂಜೇದೇವನಪುರದಲ್ಲಿ ಕಾಣಿಸಿಕೊಂಡಿದ್ದ ಹುಲಿಗಳ ಪೈಕಿ ಒಂದು ಹುಲಿ ವೀರನಪುರದ ಬಳಿ ಕಾಣಿಸಿಕೊಂಡಿದೆ ಎಂದು ಹೇಳಲಾಗುತ್ತಿದ್ದು, ಹುಲಿ ಓಡಾಡಿದ್ದ ಸ್ಥಳದಲ್ಲಿ ಯಾರೂ ಬರಬಾರದು ಎಂದು ನಂಜೇದೇವನಪುರ ಹಾಗೂ ವೀರನಪುರ ಗ್ರಾಮಸ್ಥರಿಗೆ ಅರಣ್ಯ ಇಲಾಖೆ ಅಧಿಕಾರಿಗಳು ಸೂಚಿಸಿದ್ದು, ನಾಳೆಯಿಂದಲೇ ಆನೆಗಳನ್ನು ಕರೆಸಿಕೊಂಡು ಕೂಂಬಿಂಗ್ ನಡೆಸಲಾಗುತ್ತದೆ ಎಂದು ಎಸಿಎಫ್ ಮಂಜುನಾಥ್ 'ಮೈಸೂರು ಮಿತ್ರ'ನಿಗೆ ಮಾಹಿತಿ ನೀಡಿದರು.

ಭಾಷಣಗಳಿಂದ ಜಾತಿ ನಿರ್ಮೂಲನೆಯಾಗದು; ಮಹನೀಯರ ಆಶಯದಂತೆ ನಡೆದರೆ ಅದು ಸಾಧ್ಯ

- ಶಾಸಕ ಜಿ.ಟಿ.ದೇವೇಗೌಡರ ಪ್ರತಿಪಾದನೆ
- ಸಾಮಾಜಿಕ ಸಮಾನತೆ ಸಾರುವ ಶಿಕ್ಷಣ ಸಂಸ್ಥೆಗಳೇ ಸ್ವರ್ಗ



ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ನಡೆದ ಸಂಸ್ಥಾಪಕರ ದಿನಾಚರಣೆಯಲ್ಲಿ ಹಿರಿಯ ಶಾಸಕ ಜಿ.ಟಿ.ದೇವೇಗೌಡರು ಸೇರಿದಂತೆ ಹಲವು ಗಣ್ಯರು ಪಾಲ್ಗೊಂಡಿದ್ದರು.

ಮೈಸೂರು,ಡಿ.21– ಶಿಕ್ಷಣದ ಮೂಲಕ ಸಾಮಾಜಿಕ ಸಮಾನತೆ ಸೃಷ್ಟಿಸುವ ವಿದ್ಯಾ ಸಂಸ್ಥೆಗಳೇ ನಿಜವಾದ ಸ್ವರ್ಗವಿದ್ದಂತೆ ಎಂದು ಚಾಮುಂಡೇಶ್ವರಿ ಕ್ಷೇತ್ರದ ಶಾಸಕ ಜಿ.ಟಿ.ದೇವೇಗೌಡ ಅಭಿಪ್ರಾಯಿಸಿದರು.

ಬೆಂಗಳೂರಿನ ಡಾ.ಬಿ.ಆರ್.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದಲ್ಲಿ ಪಾಂಚಜನ್ಯ ವಿದ್ಯಾಪೀಠ ಕಲ್ಯಾಣ ದತ್ತಿ ವತಿಯಿಂದ ಆಯೋಜಿಸಿದ್ದ ಎಂ.ಎಚ್.ಜಯಪ್ರಕಾಶ್ ನಾರಾಯಣ್‌ರವರ 99ನೇ ಹುಟ್ಟುಹಬ್ಬ (ಸಂಸ್ಥಾಪಕರ ದಿನಾಚರಣೆ) ಸಮಾರಂಭವನ್ನು ಉದ್ಘಾಟಿಸಿ ಮಾತನಾಡಿದ ಅವರು, ಶಿಕ್ಷಣದ ಮೂಲಕ ಸಾಮಾಜಿಕ ಸಮಾನತೆ ಸೃಷ್ಟಿಸುವ ವಿದ್ಯಾಸಂಸ್ಥೆಗಳು ಸ್ವರ್ಗವಿದ್ದಂತೆ. ಈ ನಿಟ್ಟಿನಲ್ಲಿ ಡಾ.ಅಂಬೇಡ್ಕರ್ ತಾಂತ್ರಿಕ ಮಹಾವಿದ್ಯಾಲಯದ ಆಡಳಿತ ಮಂಡಳಿ ಹಾಗೂ ಶಿಕ್ಷಕ ವೃಂದ ಪ್ರಾಮಾಣಿಕ ಸೇವೆಯಿಂದ ಸಂಸ್ಥೆ ಎತ್ತರಕ್ಕೆ ಬೆಳೆದಿದ್ದು, ಇಲ್ಲಿ ಶಿಕ್ಷಣ ಪಡೆದ ಲಕ್ಷಾಂತರ ಮಂದಿ ಪ್ರಪಂಚದ ವಿವಿಧೆಡೆ ಸೇವೆ ಸಲ್ಲಿಸುತ್ತಿದ್ದಾರೆ ಎಂದು ಪ್ರಶಂಸಿಸಿದರು.

ಭಾಷಣಗಳಿಂದ ಜಾತೀಯತೆ ಅಳಿಯುವುದಿಲ್ಲ. ನಾವೆಲ್ಲರೂ ಬುದ್ಧ, ಬಸವಣ್ಣ, ಡಾ.ಬಿ.ಆರ್.ಅಂಬೇಡ್ಕರ್ ಅವರ ಆಶಯದಂತೆ ಎಲ್ಲಾ ಸಮಾಜವನ್ನು ಸಮಾನತೆಯಿಂದ ಕಂಡರೆ ಮಾತ್ರ ಜಾತಿ ನಿರ್ಮೂಲನೆಯಾಗುತ್ತದೆ. ನಾನು ಸಹಕಾರ ಕ್ಷೇತ್ರದಲ್ಲಿದ್ದೇನೆ. ರಾಜ್ಯದ 31 ಜಿಲ್ಲಾ ಯೂನಿಯನ್‌ಗಳಲ್ಲಿ ಪರಿಶಿಷ್ಟ ಸಮಾಜದವರು ಅಧ್ಯಕ್ಷರಾಗಿರಲಿಲ್ಲ. ನಾನು ಮೈಸೂರು ಜಿಲ್ಲಾ ಯೂನಿಯನ್ ಅಧ್ಯಕ್ಷನಾಗಿದ್ದಾಗ ರಾಜೀನಾಮೆ ನೀಡಿ, ಬನ್ನೂರಿನ ಪರಿಶಿಷ್ಟ ಸಮುದಾಯದ ಪದವೀಧರ ಯುವಕ ನಂಜುಂಡಸ್ವಾಮಿಗೆ ಅವಕಾಶ ಮಾಡಿಕೊಟ್ಟೆ, ಅವರು ರಾಜ್ಯದಲ್ಲೇ ಪರಿಶಿಷ್ಟ ಜಾತಿಯ ಪ್ರಥಮ ಅಧ್ಯಕ್ಷರಾದರು. ಡಾ.ಅಂಬೇಡ್ಕರ್ ಅವರು ಸಾಮಾಜಿಕ ನ್ಯಾಯದ ತೇರನ್ನು ಕಷ್ಟಪಟ್ಟು ಎಳೆದು ಇಲ್ಲಿವರೆಗೆ ತಂದು ನಿಲ್ಲಿಸಿದ್ದೇನೆ. ಈ ತೇರನ್ನು ಮುಂದಕ್ಕೆ ಎಳೆದುಕೊಂಡು ಹೋಗಬೇಕೇ ಹೊರತು ಹಿಂದಕ್ಕೆ ತಳ್ಳಬೇಡಿ ಎಂದಿದ್ದನ್ನು ಯಾರೂ ಮರೆಯಬಾರದು ಎಂದರು.

ರಾಜಕಾರಣದಲ್ಲಿ ನೇರವಾಗಿ ಮಾತನಾಡುವುದು ದೊಡ್ಡ ಕಂಟಕ. ಇದ್ದಿದ್ದನ್ನು ಇದ್ದ ಹಾಗೇ ಹೇಳಿದರೆ ರಾಜಕಾರಣದಲ್ಲಿ ಸಹಿಸುವುದಿಲ್ಲ. ನಾನು ಮತ್ತು ಎ.ಆರ್.ಕೃಷ್ಣಮೂರ್ತಿ ನೇರವಾಗಿ ಮಾತನಾಡಿ ಅನೇಕ ಬಾರಿ ಸಮಸ್ಯೆಗೆ ಸಿಲುಕಿಕೊಂಡಿದ್ದೇವೆ. ಕೆ.ಎನ್.ನಾಗೇಗೌಡರಿಗೆ ಕಾಂಗ್ರೆಸ್‌ನಲ್ಲಿ ಮಂತ್ರಿಗಿರಿ ಸಿಗದಿದ್ದಕ್ಕೆ ಜೆಡಿಎಸ್‌ಗೆ ಬಂದು ಸಚಿವರಾದರು. ಸಿದ್ದರಾಮಯ್ಯ ಅವರಿಗೆ ಜೆಡಿಎಸ್‌ನಿಂದ ಕಾಂಗ್ರೆಸ್‌ಗೆ ಸೇರಿದ ಮೇಲೆ ಮುಖ್ಯಮಂತ್ರಿ ಸ್ಥಾನ ದೊರೆಯಿತು. ಅಬ್ದುಲ್ ನಜೀರ್‌ಸಾಬ್ ಅವರೂ ಕಾಂಗ್ರೆಸ್‌ನಿಂದ ಜೆಡಿಎಸ್ ಸೇರಿದ ಮೇಲೆ ಗ್ರಾಮೀಣಾಭಿವೃದ್ಧಿ ಸಚಿವರಾಗಿ ಅತ್ಯುತ್ತಮ ಸೇವೆ ನೀಡಲು ಸಾಧ್ಯವಾಯಿತು. ನಾನು, ಉನ್ನತ ಶಿಕ್ಷಣ ಖಾತೆ ಬೇಡವೆಂದು 20 ದಿನ ಸುಮ್ಮನಿದ್ದೆ. ಬಳಿಕ ಹಲವರ ಸಲಹೆಯಂತೆ ಒಪ್ಪಿಕೊಂಡೆ. ಸಚಿವನಾಗಿದ್ದಾಗ ಕಾಲೇಜುಗಳ ಕಟ್ಟಡ ನಿರ್ಮಾಣಕ್ಕೆ ಅನುಮೋದನೆ, ಪ್ರಥಮ ದರ್ಜೆ ಕಾಲೇಜುಗಳಿಗೆ ಅನುದಾನ ಬಿಡುಗಡೆ ಮಾಡಿಸಿದ್ದೆ. ಹೀಯಾಳಿಸಿದ್ದವರಿಗೆ ಕೆಲಸದಿಂದ ಉತ್ತರ ನೀಡಿದ್ದೆ ಎಂದು ಸ್ಮರಿಸಿಕೊಂಡರು.

ಲಂಚ ಮುಕ್ತ ಕ್ಷೇತ್ರ: ಲಂಚವಿಲ್ಲದ ಕ್ಷೇತ್ರವಿದ್ದರೆ ಅದು ಶಿಕ್ಷಕರ ಕ್ಷೇತ್ರ ಮಾತ್ರ. ಭವಿಷ್ಯದ ಪ್ರಜೆಗಳನ್ನು ತಯಾರಿ ಮಾಡುವಲ್ಲಿ ಶಿಕ್ಷಣ ಕ್ಷೇತ್ರದ ಪಾತ್ರ ಅತ್ಯಂತ ಮಹತ್ವದ್ದು. ಗೋವಿಂದೇಗೌಡ ಅವರು ಶಿಕ್ಷಣ ಸಚಿವರಾಗಿದ್ದಾಗ ಒಂದು ರೂಪಾಯಿ ಇಲ್ಲದೆ ಒಂದು ಲಕ್ಷ ಶಿಕ್ಷಕರನ್ನು ಭರ್ತಿ ಮಾಡಿದರು. ಅಂದಿನ ಕಾಲದಿಂದ ಇಂದಿನವರೆಗೂ ನೇಮಕಗೊಂಡ ಶಿಕ್ಷಕರು ಪ್ರಾಮಾಣಿಕವಾಗಿ ಕೆಲಸ ಮಾಡುತ್ತಿದ್ದಾರೆ ಎಂದರು.

ಕಾರ್ಯಕ್ರಮದಲ್ಲಿ ಪಾಂಚಜನ್ಯ ವಿದ್ಯಾಪೀಠ ಕಲ್ಯಾಣದತ್ತಿ ಅಧ್ಯಕ್ಷ ಎಸ್.ಮರಿಸ್ವಾಮಿ ಅಧ್ಯಕ್ಷತೆ ವಹಿಸಿದ್ದರು. ಕಾರ್ಯದರ್ಶಿ ಪ್ರೊ.ಎಂ.ಮಹದೇವ, ಧರ್ಮದರ್ಶಿಗಳಾದ ಎಸ್.ಶಿವಮಲ್ಲು, ಡಾ.ಬಿ.ಎನ್.ಉಮೇಶ್, ಹಿರಿಯ ಮಾರ್ಗದರ್ಶಕ ಡಾ.ಎನ್.ಸಿ. ಶಿವಪ್ರಕಾಶ್, ಪ್ರಾಂಶುಪಾಲ ಡಾ.ಮಹಾಲಿಂಗ ವಿ.ಮಂಡಿ ಮತ್ತಿತರರು ಭಾಗವಹಿಸಿದ್ದರು.

ಜಿ.ಟಿ.ದೇವೇಗೌಡರು ಅಭಿವೃದ್ಧಿ ರೂವಾರಿ

ನಾನು ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ನಿವಾಸಿಯಾಗಿದ್ದು, ಶಾಸಕರಾದ ಜಿ.ಟಿ.ದೇವೇಗೌಡರನ್ನು ಚೆನ್ನಾಗಿ ಬಲ್ಲೆ. ಕಡಕೊಳ–ಜಯಪುರ ಮುಖ್ಯರಸ್ತೆ ಬಿಟ್ಟರೆ ಉತ್ತಮ ರಸ್ತೆಗಳೇ ಇರಲಿಲ್ಲ. ಜಿಟಿಡಿ ಅವರು ಶಾಸಕರಾದ ನಂತರ ಕ್ಷೇತ್ರದ ಪ್ರತಿ ಹಳ್ಳಿಗೂ ಅತ್ಯುತ್ತಮ ಸಂಪರ್ಕ ರಸ್ತೆ ನಿರ್ಮಿಸಿ, ಅಭಿವೃದ್ಧಿಯ ರೂವಾರಿಯಾದರು. ಕೆಲ ರಾಜಕಾರಣಿಗಳು ಮಾತ್ರ ಇವರಂತೆ ಸಾಧನೆ ಮೂಲಕ ಜನರ ಮನಸ್ಸಿನಲ್ಲಿ ಶಾಶ್ವತವಾಗಿ ನೆಲೆಸಲು ಸಾಧ್ಯ. ಪರಿಶಿಷ್ಟ ಜಾತಿಯವರೊಂದಿಗೆ ಉತ್ತಮ ಬಾಂಧವ್ಯ ಹೊಂದುವ ಮೂಲಕ ಸಾಮಾಜಿಕ ಬದಲಾವಣೆಯಲ್ಲೂ ಮಾದರಿಯಾಗಿದ್ದಾರೆ. ಉನ್ನತ ಶಿಕ್ಷಣ ಸಚಿವರಾಗಿದ್ದಾಗ ನಮ್ಮ ಸಂಸ್ಥೆಗೆ 47 ಕೋಟಿ ಅನುದಾನ ಬಿಡುಗಡೆ ಮಾಡಿ, ಮಹಾವಿದ್ಯಾಲಯದ ಉನ್ನತಿಗೆ ನೆರವಾಗಿದ್ದನ್ನು ಮರೆಯಲಾಗದು.

–ಡಾ.ಮಹದೇವ್, ಕಾರ್ಯದರ್ಶಿ, ಪಿವಿಪಿ ಟ್ರಸ್ಟ್

ಎಲ್‌ಕೆಜಿ, ಪಿಯುಸಿ ಮಕ್ಕಳಿಗೂ ಮಧ್ಯಾಹ್ನದ ಬಿಸಿಯೂಟ ವಿಸ್ತರಣೆ

ಪ್ರಾಥಮಿಕ ಶಿಕ್ಷಣ ಸಚಿವ ಮಧು ಬಂಗಾರಪ್ಪ ಘೋಷಣೆ

ಶಿವಮೊಗ್ಗ: ಅಪೌಷ್ಟಿಕತೆ ಹೋಗಲಾಡಿಸಿ ಮಕ್ಕಳ ಕಲಿಕೆಗೆ ನೆರವಾಗಲು ಮಧ್ಯಾಹ್ನದ ಬಿಸಿಯೂಟ ಯೋಜನೆಯನ್ನು ಮುಂದಿನ ಶೈಕ್ಷಣಿಕ ವರ್ಷದಿಂದ ಪೂರ್ವ ಪ್ರಾಥಮಿಕ ಹಾಗೂ ಪದವಿಪೂರ್ವ (ಪಿಯುಸಿ) ವಿದ್ಯಾರ್ಥಿಗಳಿಗೂ ವಿಸ್ತರಿಸಲಾಗುವುದು ಎಂದು ಶಾಲಾ ಶಿಕ್ಷಣ ಹಾಗೂ ಸಾಕ್ಷರತಾ ಇಲಾಖೆ ಸಚಿವ ಮಧು ಬಂಗಾರಪ್ಪ ಹೇಳಿದರು.



ನಗರದಲ್ಲಿ ಭಾನುವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಸರ್ಕಾರಿ ಶಾಲೆಗಳಲ್ಲಿ ಎಲ್ ಕೆಜಿ ಹಾಗೂ ಯುಕೆಜಿ ಓದುವ ಹಾಗೂ ಪಿಯುಸಿ ಓದುವ ಎಲ್ಲಾ ಮಕ್ಕಳಿಗೂ ನೆರವಾಗಲಿದೆ. ಇದರಿಂದ ಮಧ್ಯಾಹ್ನದ ಬಿಸಿಯೂಟ ಯೋಜನೆಗೆ ಹೆಚ್ಚುವರಿಯಾಗಿ, 200 ಕೋಟಿ ವೆಚ್ಚವಾಗಲಿದೆ ಎಂದರು.

ಹೊಸದಾಗಿ ಆರಂಭವಾಗುವ ಶಾಲೆಗಳು ಸೇರಿದಂತೆ ರಾಜ್ಯದ ಎಲ್ಲ ಕರ್ನಾಟಕ ಪಬ್ಲಿಕ್ ಶಾಲೆಗಳಿಗೆ ಸಂಗೀತ ಹಾಗೂ ದೈಹಿಕ ಶಿಕ್ಷಣ ಶಿಕ್ಷಕರನ್ನು ನೇಮಕ ಮಾಡಲಾಗುವುದು. ಸರ್ಕಾರಿ ಶಾಲೆಗಳಲ್ಲಿ ಸ್ಕೂಲ್ ಬ್ಯಾಂಡ್ ಕಡ್ಡಾಯವಾಗಿ ಆರಂಭಿಸಲಾಗುವುದು ಎಂದರು.

ದ್ವೇಷ ಭಾಷಣ ವಿರೋಧಿ ಕಾಯ್ದೆ ಜಾರಿಗೊಳಿಸುವ ಮೂಲಕ ದೇಶದಲ್ಲಿಯೇ ಮಾದರಿ ನಡೆ ರಾಜ್ಯದಲ್ಲಿ ಕಾಂಗ್ರೆಸ್ ಸರ್ಕಾರ ಮಾಡಿದೆ. ಆ ಮಸೂದೆಗೆ ಸದನದಲ್ಲಿ ಕರಾವಳಿ ಭಾಗದ ಬಿಜೆಪಿ ಶಾಸಕರು ವಿರೋಧಿಸಿದ್ದಾರೆ. ದ್ವೇಷ ಭಾಷಣಕ್ಕೆ ನಿಯಂತ್ರಣ ಹೇರಿದ್ದರಿಂದ ತಮ್ಮ ಬಂಡವಾಳ ಬರಿದಾಗುವ ಆತಂಕ ಅವರದ್ದು ಎಂದು ಛೇಡಿಸಿದ ಮಧು ಬಂಗಾರಪ್ಪ, ಇದೇ ಕಾನೂನನ್ನು ರಾಷ್ಟ್ರಮಟ್ಟದಲ್ಲಿ ಜಾರಿ ಮಾಡಲು ಪ್ರಧಾನಿ ನರೇಂದ್ರ ಮೋದಿ ಕೂಡ ಮನಸ್ಸು ಮಾಡಲಿ ಎಂದು ಸಲಹೆ ನೀಡಿದರು.

ಹಾಲಿ ಸೇವೆಯಲ್ಲಿರುವ ಶಿಕ್ಷಕರಿಗೆ ಟಿಇಟಿ ಕಡ್ಡಾಯಗೊಳಿಸಿರುವ ಸುಪ್ರೀಂ ಕೋರ್ಟ್ ತೀರ್ಪಿನ ವಿರುದ್ಧ ಮೇಲ್ಮನವಿ ಸಲ್ಲಿಸಲು ವಿಧಾನಮಂಡಲದ ಅಧಿವೇಶನದಲ್ಲಿ ನಿರ್ಧರಿಸಿ ಆ ಬಗ್ಗೆ ಸರ್ಕಾರಿ ಆದೇಶ ಕೂಡ ಹೊರಡಿಸಲಾಗಿದೆ ಎಂದು ಸಚಿವರು ತಿಳಿಸಿದರು.

ಹೊಸದಾಗಿ ಆರಂಭಿಸಲಾಗುತ್ತಿರುವ 900 ಕೆಪಿಎಸ್ ಶಾಲೆಗಳಿಗೆ ಜನವರಿ ಅಂತ್ಯದ ವೇಳೆಗೆ ಶಿವಮೊಗ್ಗದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ ಚಾಲನೆ ನೀಡಲಿದ್ದಾರೆ ಎಂದು ಪುನರುಚ್ಚರಿಸಿದ ಸಚಿವರು, ಹೊಸದಾಗಿ ಶಾಲೆಗಳನ್ನು ಅನುದಾನಕ್ಕೆ ಒಳಪಡಿಸಲು ಹಾಗೂ ಶಿಕ್ಷಕರ ನೇಮಕಾತಿಗೆ ಇಲಾಖೆಯಲ್ಲಿ ಯಾವುದೇ ರೀತಿಯ ಹಣದ ಸಮಸ್ಯೆ ಇಲ್ಲ ಎಂದರು.

ಸಾವಿತ್ರಮ್ಮ ನಿಧನ

ಮೈಸೂರು, ಡಿ.21–ಮೈಸೂರಿನ ಯರಗನಹಳ್ಳಿ ಶಿಕ್ಷಕರ ಬಡಾವಣೆಯ ಸಂಸ್ಥಾಪಕ ಅಧ್ಯಕ್ಷರಾಗಿದ್ದ ಲೇಟ್ ಡಿ ಇ.ರಾಮಲಿಂಗೇಗೌಡರ ಧರ್ಮಪತ್ನಿ ಸಾವಿತ್ರಮ್ಮ (80) ಇಂದು ರಾತ್ರಿ ತಮ್ಮ ಸ್ವಗೃಹದಲ್ಲಿ ನಿಧನರಾದರು




ಮೃತರು ದಿ ಮೈಸೂರು ಕೋ ಆಪರೇಟಿವ್ ಬ್ಯಾಂಕ್ ನಿರ್ದೇಶಕರಾದ ಆರ್ ಸೋಮಣ್ಣ ಸೇರಿದಂತೆ ಇಬ್ಬರು ಪುತ್ರರು, ಸೊಸೆಯಂದಿರು, ಮೊಮ್ಮಕ್ಕಳು, ಅಪಾರ ಬಂಧು–ಮಿತ್ರರನ್ನು ಅಗಲಿದ್ದಾರೆ ಇವರ ಅಂತ್ಯಕ್ರಿಯೆ ನಾಳೆ (ಡಿ.22) ಮಧ್ಯಾಹ್ನ 12 ಗಂಟೆಗೆ ಚಾಮುಂಡಿ ಬೆಟ್ಟದ ತಪ್ಪಲಿನ ರುದ್ರಭೂಮಿಯಲ್ಲಿ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಸಂತಾಪ : ಮೃತರ ನಿಧನಕ್ಕೆ ಮಾಜಿ ಶಾಸಕ ಎನ್. ನಾಗೇಂದ್ರ, ಕವೀಶ್‌ಗೌಡ, ಎಲ್.ಚೌಡಪ್ಪ, ದಿ ಮೈಸೂರು ಕೋ ಆಪ ರೇಟಿವ್ ಬ್ಯಾಂಕ್ ಅಧ್ಯಕ್ಷ ಉಮಾಶಂಕರ್, ನಿರ್ದೇಶಕ ಪಡುವಾರಹಳ್ಳಿ ಎಂ. ರಾಮಕೃಷ್ಣ ತೀವ್ರ ಸಂತಾಪ ವ್ಯಕ್ತಪಡಿಸಿದ್ದಾರೆ.

ಆರ್.ಸಿ.ವತ್ಸಲಾ

ಮೈಸೂರು, ಡಿ.21– ಮೈಸೂರಿನ ರಾಮಕೃಷ್ಣನಗರ ನಿವಾಸಿ, ಅಗ್ರಹಾರ ತ್ಯಾಗರಾಜ ರಸ್ತೆಯ ಅಕ್ಕನಬಳಗ ಶಾಲೆಯ ನಿವೃತ್ತ ಶಿಕ್ಷಕಿ ಆರ್.ಸಿ.ವತ್ಸಲಾ (84) ಅವರು ಭಾನುವಾರ ನಿಧನರಾದರು.



ಇವರು ಪುತ್ರಿ, ಸರಸ್ವತಿಪುರಂ ಜೆಎಸ್‌ಎಸ್ ಮಹಿಳಾ ಪದವಿ ಪೂರ್ವ ಕಾಲೇಜಿನ ನಿವೃತ್ತ ಪ್ರಾಂಶುಪಾಲೆ ಎಂ.ಪಿ. ರಾಜೇಶ್ವರಿ, ಅಳಿಯ ಟಿ.ಎಸ್.ಮಹದೇವಸ್ವಾಮಿ, ಮೊಮ್ಮಗಳು ಸೇರಿದಂತೆ ಅಪಾರ ಬಂಧು–ಬಳಗವನ್ನು ಅಗಲಿದ್ದಾರೆ. ಸೋಮವಾರ ಮಧ್ಯಾಹ್ನ 12ಕ್ಕೆ ವಿದ್ಯಾರಣ್ಯಪುರಂನಲ್ಲಿರುವ ವೀರಶೈವ ರುದ್ರಭೂಮಿಯಲ್ಲಿ ಅಂತ್ಯಕ್ರಿಯೆ ನೆರವೇರಿಸಲಾಗುವುದು ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಮಹಿಳೆ ನಾಪತ್ತೆ

ಮೈಸೂರು: ಸುಮಾರು 33 ವರ್ಷದ ಜೋಯ ಫಾತೀಮಾ ಎಂಬುವವರು ಕಾಣೆಯಾಗಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಸುಮಾರು 33 ವರ್ಷ ವಯಸ್ಸಾಗಿದ್ದು, 5 ಅಡಿ ಎತ್ತರ, ಸಾಧಾರಣ ಮೈಕಟ್ಟು, ಬಿಳಿ ಮೈಬಣ್ಣ, ಕೋಲು ಮುಖ, ಬಲಗಡೆಯ ಗದ್ದದ ಬಳಿ ಮತ್ತು ಮೂಗಿನ ಬಳಿ ಕಪ್ಪು ಕಾರಳ್ಳು, ಹಣೆಯ ಮೇಲೆ ಹಳೆ ಗಾಯದ ಗುರುತು ಇರುತ್ತದೆ.

ವ್ಯಕ್ತಿ ನಾಪತ್ತೆ : ಸುಮಾರು 46 ವರ್ಷದ ಶ್ರೀನಿವಾಸ ಬಿ.ಜೆ. ಎಂಬುವವರು ಕಾಣೆಯಾಗಿದ್ದು, ಮೈಸೂರು ದಕ್ಷಿಣ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ. ಸುಮಾರು 46 ವರ್ಷ ವಯಸ್ಸಾಗಿದ್ದು, ದೃಢಕಾಯ ಶರೀರ, ದುಂಡು ಮುಖ, ಎಣ್ಣೆಗೆಂಪು ಮೈಬಣ್ಣ, ಹಳದಿ ಬಣ್ಣದ ಟಿ–ಶರ್ಟ್, ನೀಲಿ ಬಣ್ಣದ ಟ್ರಾಕ್ ಪ್ಯಾಂಟ್ ಧರಿಸಿರುತ್ತಾನೆ.

ಕಾಣೆಯಾದ ವ್ಯಕ್ತಿಯ ಬಗ್ಗೆ ಮಾಹಿತಿ ಕಂಡುಬಂದಲ್ಲಿ ಮೈಸೂರು ದಕ್ಷಿಣ ಪೊಲೀಸ್ ಠಾಣೆಯ ದೂ.ಸಂ: 0821–2444955, 0821–2436600, 0821–2520040, 0821–2445168, 22212108, 9480805045 ನ್ನು ಸಂಪರ್ಕಿಸಬಹುದು.

ಮೈಸೂರು ಮಿತ್ರ 46 ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.
-ಜಾಹೀರಾತು ವ್ಯವಸ್ಥಾಪಕರು

ನಂಜನಗೂಡಲ್ಲಿ ಅದ್ದೂರಿ ಕನಕ ಜಯಂತಿ ಆಚರಣೆ




ನಂಜನಗೂಡಿನಲ್ಲಿ ಭಾನುವಾರ ನಡೆದ ಶ್ರೀ ಭಕ್ತ ಕನಕದಾಸರ ಜಯಂತಿಯನ್ನು ವಿಧಾನ ಪರಿಷತ್ ಸದಸ್ಯ ಡಾ.ಯತೀಂದ್ರ ಸಿದ್ದರಾಮಯ್ಯ ಉದ್ಘಾಟಿಸಿದರು. ಈ ವೇಳೆ ಭವ್ಯ ಮೆರವಣಿಗೆ ನಡೆಯಿತು(ಎಡಚಿತ್ರ).

ಜಾತಿ ವ್ಯವಸ್ಥೆಯ ವಿರುದ್ಧ ಹೋರಾಡಿ ಸಮ ಸಮಾಜ ನಿರ್ಮಿಸಿದವರು ಕನಕದಾಸರು

ನಂಜನಗೂಡು, ಡಿ.21– 15ನೇ ಶತಮಾನದ ಶ್ರೇಣಿಕೃತ ಸಮಾಜ ವ್ಯವಸ್ಥೆಯಲ್ಲಿ ಶ್ರೀ ಭಕ್ತ ಕನಕದಾಸರು ತಳ ಸಮುದಾಯದ ಧ್ವನಿಯಾಗಿ ಜಾತಿ ವ್ಯವಸ್ಥೆಯ ವಿರುದ್ಧ ಹೋರಾಟ ನಡೆಸಿ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದ ದಾಸ ಶ್ರೇಷ್ಠರು ಎಂದು ವಿಧಾನ ಪರಿಷತ್ ಸದಸ್ಯ ಡಾ. ಯತೀಂದ್ರ ಸಿದ್ದರಾಮಯ್ಯ ಬಣ್ಣಿಸಿದರು.

ನಗರದ ಶ್ರೀಕಂಠೇಶ್ವರ ದೇವಾಲಯದ ದಾಸೋಹ ಭವನದ ಆವರಣದಲ್ಲಿ ರಾಷ್ಟ್ರೀಯ ಹಬ್ಬಗಳ ಆಚರಣೆ ಸಮಿತಿ ಮತ್ತು ತಾಲೂಕು ಕನಕ ಸಮುದಾಯದ ಜಯಂತಿ ಮಹೋತ್ಸವ ಸಮಿತಿ ವತಿಯಿಂದ ಏರ್ಪಡಿಸಲಾಗಿದ್ದ ಅದ್ದೂರಿ ಶ್ರೀ ಭಕ್ತ ಕನಕದಾಸರ 538ನೇ ಅದ್ದೂರಿ ಜಯಂತಿ ಮಹೋತ್ಸವವನ್ನು ಉದ್ಘಾಟಿಸಿ ಅವರು ಮಾತನಾಡಿದರು.

ಶ್ರೀಭಕ್ತ ಕನಕದಾಸರು ಒಬ್ಬ ಸಾಹಿತಿಯಾಗಿ, ತಮ್ಮ ಕೀರ್ತನೆಗಳ ಮೂಲಕ ಜಾತಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ ಹೋರಾಟ ನಡೆಸಿ ಸಮ ಸಮಾಜದ ನಿರ್ಮಾಣಕ್ಕೆ ಶ್ರಮಿಸಿದರು. ಅವರ ಚಿಂತನೆಗಳನ್ನು ಕೇವಲ ಅವರ ಜಯಂತಿ ಮಹೋತ್ಸವಕ್ಕೆ ಸೀಮಿತಗೊಳಿಸದೆ ಅವರ ತತ್ವ ಸಿದ್ಧಾಂತಗಳನ್ನು ಮತ್ತು ಬೋಧನೆಗಳನ್ನು ನಮ್ಮ ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ಎಲ್ಲರೂ ಜಾತಿ ಪರಿಕಲ್ಪನೆಯಿಂದ ಹೊರಬಂದು ಎಲ್ಲಾ ಜಾತಿ ಜನಾಂಗದವರೊಂದಿಗೆ ಪ್ರೀತಿಯಿಂದ ಬೆರೆಯಬೇಕು. ಆ ಮೂಲಕ ಜಾತಿಯತೆಯನ್ನು ಎದುರಿಸಿ ಸಮಾಜದಲ್ಲಿ ಕ್ರಾಂತಿ ಮೂಡಿಸಬೇಕು ಎಂದರು.

ಸಿದ್ದರಾಮಯ್ಯರವರು ಜಾತಿ ಸಮೀಕ್ಷೆ ನಡೆಸಿ ತಳ ಸಮುದಾಯಗಳಿಗೆ ಶಕ್ತಿ ತುಂಬುವ ಕೆಲಸಕ್ಕೆ ಮುಂದಾಗಿದ್ದಾರೆ, ಆದರೆ ಪ್ರಬಲ ವರ್ಗದ ಪಟ್ಟಭದ್ರಾ ಹಿತಾಸಕ್ತಿಗಳು ಜಾತಿ ಸಮೀಕ್ಷೆಯನ್ನು ವಿರೋಧಿಸುತ್ತಿವೆ, ಆದ್ದರಿಂದ ಶೋಷಿತ ಸಮುದಾಯಗಳ ಪರವಾಗಿರುವ ಮುಖ್ಯಮಂತ್ರಿ ಸಿದ್ದರಾಮಯ್ಯರವರಿಗೆ ರಾಜಕೀಯ ಶಕ್ತಿ ತುಂಬಲು ನೀವೆಲ್ಲರೂ ಜೊತೆಯಾಗಿ ನಿಲ್ಲಬೇಕಿದೆ ಎಂದರು.

ಶಾಸಕ ದರ್ಶನ್ ಧ್ರುವನಾರಾಯಣ್ ಮಾತನಾಡಿ, ಶ್ರೀ ಭಕ್ತ ಕನಕದಾಸರು, ಕನ್ನಡ ಸಾಹಿತ್ಯ ಮತ್ತು ಸಂಗೀತ ಕ್ಷೇತ್ರಕ್ಕೆ ಅಪೂರ್ವವಾದ ಕೊಡುಗೆಯನ್ನು ನೀಡಿದ್ದಾರೆ, ಮುಖ್ಯವಾಗಿ ಅವರ ಕೀರ್ತನೆಸಾರಗಳಲ್ಲಿ ಜಾತಿ ವ್ಯವಸ್ಥೆಯ ವಿರುದ್ಧ ಧ್ವನಿ ಎತ್ತಿ ಸಾಮಾಜಿಕ ಸಮಾನತೆಯ ಸಂದೇಶವನ್ನು ಸಮಾಜಕ್ಕೆ ನೀಡಿದ್ದಾರೆ, ಅವರ ಕೀರ್ತನೆಗಳು ಇಂದಿಗೂ ಪ್ರಸ್ತುತವಾಗಿದ್ದು, ಭಕ್ತ ಕನಕದಾಸರ ತತ್ವ ಸಿದ್ಧಾಂತಗಳ ಬಗ್ಗೆ ಜನರಲ್ಲಿ ಜಾಗೃತಿ ಮೂಡಿಸಿ ಸಮಾಜದಲ್ಲಿ ಸಾಮರಸ್ಯ ಮತ್ತು ನ್ಯಾಯದ ಮೌಲ್ಯಗಳನ್ನು ಬೆಳೆಸಬೇಕಿದೆ ಎಂದರು.

ಜಯಂತಿ ಮಹೋತ್ಸವದಲ್ಲಿ ಚರ್ಚಾ ಸ್ಪರ್ಧೆಯಲ್ಲಿ ಭಾಗವಹಿಸಿ ವಿಜೇತರಾದ ವಿದ್ಯಾರ್ಥಿಗಳಿಗೆ ಲ್ಯಾಪ್‌ಟಾಪ್ ವಿತರಿಸಲಾಯಿತು ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳನ್ನು, ವಿವಿಧ ರಂಗದಲ್ಲಿ ಸಾಧನೆಗೈತ ಸಾಧಕರನ್ನು ಸನ್ಮಾನಿಸಿ ಗೌರವಿಸಲಾಯಿತು.

ಇದಕ್ಕೂ ಮುನ್ನ ಶ್ರೀ ಭಕ್ತ ಕನಕದಾಸರ ಭಾವಚಿತ್ರವನ್ನು ವಿವಿಧ ಜಾನಪದ ಕಲಾತಂಡಗಳೊಂದಿಗೆ ಬೆಳ್ಳಿರಥದಲ್ಲಿ ಅದ್ದೂರಿಯಾಗಿ ಮೆರವಣಿಗೆ ನಡೆಸಲಾಯಿತು. ಮೆರವಣಿಗೆಯು ಆರ್ಪಿ ರಸ್ತೆಯ ಮೂಲಕ ಸಾಗಿ ವೇದಿಕೆ ಕಾರ್ಯಕ್ರಮದಲ್ಲಿ ಅಂತ್ಯವಾಯಿತು.

ಸಮಾರಂಭದಲ್ಲಿ ಮಾಜಿ ಶಾಸಕ ಕಳಲೆ ಕೇಶವಮೂರ್ತಿ, ವಾಲ್ಮೀಕಿ ನಿಗಮ ಮಾಜಿ ಅಧ್ಯಕ್ಷ ಎಸ್.ಸಿ.ಬಸವರಾಜು, ಜಿಪಂ ಮಾಜಿ ಅಧ್ಯಕ್ಷ ಬಿ.ಎಂ.ರಾಮು, ಮೃಗಾಲಯ ಪ್ರಾಧಿಕಾರ ಅಧ್ಯಕ್ಷ ಹಾಡ್ಯ ರಂಗಸ್ವಾಮಿ, ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷ ಸಿ.ಎಂ. ಶಂಕರ್, ಗ್ಯಾರೆಂಟಿ ಅನುಷ್ಠಾನ ಸಮಿತಿ ತಾಲೂಕು ಅಧ್ಯಕ್ಷ ಕೆ.ಮಾರುತಿ, ತಾಲೂಕು ಕುರುಬ ಸಮುದಾಯದ ನಿಕಟ ಪೂರ್ವ ಅಧ್ಯಕ್ಷ ಕೆಂಪಣ್ಣ, ತಾಪಂ ಮಾಜಿ ಅಧ್ಯಕ್ಷ ತಮ್ಮಣ್ಣೇಗೌಡ, ಕನಕದಾಸ ಜಯಂತಿ ಮಹೋತ್ಸವ ಅಧ್ಯಕ್ಷ ಟಿ.ಎಲ್.ಮೋಹನ್‌ಕುಮಾರ್, ಮೆರವಣಿಗೆ ಸಮಿತಿ ಅಧ್ಯಕ್ಷ ಹುಣಸನಾಳು ಸಿದ್ದರಾಜು, ದಕ್ಷಿಣಮೂರ್ತಿ, ಚಿನ್ನದಗುಡಿ ಹುಂಡಿ ಕುಳ್ಳಯ್ಯ, ಕುರಿಹುಂಡಿರಾಜು, ವಿದ್ಯಾಸಾಗರ್, ಸೂರ್ಯಕುಮಾರ್, ನಿಂಗರಾಜು, ನಗರಸಭಾ ಮಾಜಿ ಸದಸ್ಯ ಗಂಗಾಧರ್, ಜಿಪಂ ಮಾಜಿ ಸದಸ್ಯೆ ಲತಾಸಿದ್ದಶೆಟ್ಟಿ, ಕಾಂಗ್ರೆಸ್ ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪ್ರದೀಪ್‌ಕುಮಾರ್ ಉಪಸ್ಥಿತರಿದ್ದರು.

ಚುಂಚನಕಟ್ಟೆಯಲ್ಲಿ ಅಕ್ರಮ ಗುಡಿಸಲು ತೆರವು



ಅಕ್ರಮ ಗುಡಿಸಲನ್ನು ಸಾಲಿಗ್ರಾಮ ತಹಸೀಲ್ದಾರ್ ರುಕೀಯ ಬೇಗಂ ತೆರವುಗೊಳಿಸಿದರು.

ಚುಂಚನಕಟ್ಟೆ, ಡಿ.21– ಮುಜರಾಯಿ ಇಲಾಖೆಗೆ ಸೇರಿರುವ ಜಾತ್ರೆ ಮಾಳದಲ್ಲಿ ಅನಧಿಕೃತವಾಗಿ ನಿರ್ಮಾಣ ಮಾಡಲಾಗುತ್ತಿದ್ದ ಗುಡಿಸಲೊಂದನ್ನು ಸಾಲಿಗ್ರಾಮ ತಹಸೀಲ್ದಾರ್ ರುಕೀಯ ಬೇಗಂ ತೆರವುಗೊಳಿಸಿದರು.

ಚುಂಚನಕಟ್ಟೆ ಗ್ರಾಮದಲ್ಲಿರುವ ಶ್ರೀರಾಮ ದೇವಸ್ಥಾನಕ್ಕೆ ಸೇರಿರುವ ಸರಕಾರಿ ಜಾತ್ರೆ ಮಾಳದಲ್ಲಿ ವ್ಯಕ್ತಿಯೊಬ್ಬರು ಅಕ್ರಮವಾಗಿ ಗುಡಿಸಲನ್ನು ನಿರ್ಮಾಣ ಮಾಡುತ್ತಿರುವ ಬಗ್ಗೆ ರೈತರು ದೂರು ನೀಡಿದ ಹಿನ್ನೆಲೆಯಲ್ಲಿ ಪೊಲೀಸ್ ಹಾಗೂ ಗ್ರಾಮ ಲೆಕ್ಕಿಗರೊಂದಿಗೆ ಸ್ಥಳಕ್ಕೆ ಭೇಟಿ ನೀಡಿ ಅಕ್ರಮವಾಗಿ ನಿರ್ಮಾಣ ಮಾಡುತ್ತಿದ್ದ ಗುಡಿಸಲನ್ನು ತೆರವು ಗೊಳಿಸುವ ಮೂಲಕ ಜಾತ್ರೆಗೆ ಬರುವ ರೈತರ ಜಾನುವಾರು ಕಟ್ಟಲು ಅನುಕೂಲ ಮಾಡಿಕೊಟ್ಟರು. ನಂತರ ಮಾತನಾಡಿದ ಅವರು, ಈ ಪ್ರದೇಶವನ್ನು ಜಾತ್ರೆಗೆ ಬರುವ ರೈತರ ಜಾನುವಾರು ಕಟ್ಟಲು ಕಾಯ್ದಿರಿಸಲಾಗಿದೆ ಎಂದು ರೈತರು ಮೊನ್ನೆ ನಡೆದ ಜಾತ್ರೆ ಸಭೆಯಲ್ಲೂ ಈ ಜಾಗದ ಬಗ್ಗೆ ಗಂಭೀರವಾಗಿ ಆರೋಪಿಸಿ ದೂರು ನೀಡಿದ್ದಾರೆ. ಹಾಗಾಗಿ ಈ ಜಾಗ ಜಾನುವಾರಗಳ ಜಾತ್ರೆ ಮಾಳ ಆಗಿರುವ ಕಾರಣ ಈ ಜಾಗದಲ್ಲಿ ಯಾರು ಕೂಡ ಈ ರೀತಿ ಅಕ್ರಮವಾಗಿ ಗುಡಿಸಲುಗಳನ್ನು ನಿರ್ಮಾಣ ಮಾಡ ಬಾರದು. ಅಲ್ಲದೆ ಇಲ್ಲಿ ಹಲವು ವರ್ಷಗಳಿಂದ ಮೂಲ ನಿವಾಸಿಗಳಾಗಿ ವಾಸಿಸುತ್ತಿರುವ ಬಡ ಜನತೆಗೆ ಸರಕಾರ ಪರ್ಯಾಯವಾಗಿ ನಿವೇಶನ ಕಲ್ಪಿಸುವುದಾಗಿ ಭರವಸೆ ನೀಡಿದರಲ್ಲದೇ ಮುಂದಿನ ದಿನಗಳಲ್ಲಿ ಈ ಜಾಗದಲ್ಲಿ ಹೊಸದಾಗಿ ಯಾವುದೇ ಕಟ್ಟಡ ನಿರ್ಮಾಣವಾಗಲಿ ಅಥವಾ ಜಾಗ ಒತ್ತುವರಿ ಆಗದಂತೆ ನೋಡಿಕೊಳ್ಳುವಂತೆ ಸ್ಥಳೀಯ ಮುಖಂಡರಿಗೂ ಹಾಗೂ ಪೊಲೀಸ್, ಕಂದಾಯ ಅಧಿಕಾರಿಗಳಿಗೆ ಎಚ್ಚರಿಕೆ ವಹಿಸುವಂತೆ ಸೂಚಿಸಿದರು.

ಈ ಸಂದರ್ಭದಲ್ಲಿ ಪೊಲೀಸ್ ಸಿಬ್ಬಂದಿ ಅವಿನಾಶ್, ಗ್ರಾಮ ಲೆಕ್ಕಿಕ ಮೌನೇಶ್, ಮಾಜಿ ಗ್ರಾ.ಪಂ. ಸದಸ್ಯ ಕುಮಾರ್, ಮುಖಂಡರಾದ ರವಿ, ಕೃಷ್ಣ, ಬಾಬು, ಸಂತೋಷ್, ಮಂಜು ಸೇರಿದಂತೆ ಮತ್ತಿತರರು ಇದ್ದರು.

ತಿ.ನರಸೀಪುರದಲ್ಲಿ ಯಶಸ್ವಿ ಪಲ್ಸ್ ಪೋಲಿಯೋ ಕಾರ್ಯಕ್ರಮ

ತಿ.ನರಸೀಪುರ.ಡಿ.21– ತಿ.ನರಸೀಪುರ ತಾಲೂಕಿನಾದ್ಯಂತ ಭಾನುವಾರ ಯಶಸ್ವಿಯಾಗಿ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ನಡೆಸಲಾಯಿತು. ಐದು ವರ್ಷದೊಳಗಿನ ಮಕ್ಕಳಿಗೆ ಪಲ್ಸ್ ಪೋಲಿಯೋ ಹನಿಗಳನ್ನು ಹಾಕಲಾಯಿತು.

ಪೋಲಿಯೋದಿಂದ ರಕ್ಷಿಸಿ : ಮಕ್ಕಳ ದೈಹಿಕ, ಮಾನಸಿಕ ಆರೋಗ್ಯದ ಹಿತದೃಷ್ಟಿಯಿಂದ ತಾಲೂಕಿನಾದ್ಯಂತ ಆರೋಗ್ಯ ಇಲಾಖೆ ವತಿಯಿಂದ ಹಮ್ಮಿಕೊಳ್ಳಲಾಗಿರುವ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನದಲ್ಲಿ ಪೋಷಕರು ತಮ್ಮ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಿಸುವ ಮೂಲಕ ಮಕ್ಕಳನ್ನು ಪೋಲಿಯೋದಿಂದ ರಕ್ಷಿಸಲು ಮುಂದಾಗುವಂತೆ ಹಿರಿಯ ಶ್ರೇಣಿ ನ್ಯಾಯಾಧೀಶ ಜೆ.ಎಚ್. ಹನುಮಂತ ತಿಳಿಸಿದರು.

ಪಟ್ಟಣದ ಸಾರ್ವಜನಿಕ ಆಸ್ಪತ್ರೆಯಲ್ಲಿ ಆಯೋಜಿಸಲಾಗಿದ್ದ ರಾಷ್ಟ್ರೀಯ ಪೋಲಿಯೋ ಕಾರ್ಯಕ್ರಮದಲ್ಲಿ ಮಗುವಿಗೆ ಪೋಲಿಯೋ ಹನಿ ಹಾಕುವ ಮೂಲಕ ಅಭಿಯಾನಕ್ಕೆ ಚಾಲನೆ ನೀಡಿ ಅವರು ಮಾತನಾಡಿದರು.

ತಾಲೂಕು ಆರೋಗ್ಯಾಧಿಕಾರಿ ಡಾ.ರವಿಕುಮಾರ್ ಮಾತನಾಡಿ ಪೋಲಿಯೋ ಮುಕ್ತ ಭಾರತ ಎಂದು ವಿಶ್ವ ಆರೋಗ್ಯ ಸಂಸ್ಥೆಯಿಂದ ದೃಢೀಕರಣವನ್ನು ಪಡೆಯಲಾಗಿದೆ. ಆರೋಗ್ಯವಂತ ಸಮಾಜವನ್ನು ನಿರ್ಮಾಣ ಮಾಡುವ ಉದ್ದೇಶದಿಂದ ರಾಜ್ಯ



ತಿ.ನರಸೀಪುರದ ಸಾರ್ವಜನಿಕ ಆಸ್ಪತ್ರೆಯಲ್ಲಿ ಹಮ್ಮಿಕೊಳ್ಳಲಾಗಿದ್ದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನಕ್ಕೆ ಪಟ್ಟಣದ ಹಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಕೆ.ಎಚ್. ಹನುಮಂತು ಮಗುವಿಗೆ ಪೋಲಿಯೋ ಹನಿ ಹಾಕುವ ಮೂಲಕ ಚಾಲನೆ ನೀಡಿದರು.



ತಿ. ನರಸೀಪುರ ಸೋಸಲೆ ಪ್ರಾಥಮಿಕ ಆರೋಗ್ಯದಲ್ಲಿ ಕೇಂದ್ರದಲ್ಲಿ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಸೋಸಲೇ ಗ್ರಾಪಂ ಅಧ್ಯಕ್ಷೆ ಭಾಗ್ಯ ಶಿವಕುಮಾರ್ ಬಡ್ಡು ಚಾಲನೆ ನೀಡಿದರು.

ಸರ್ಕಾರದ ಆರೋಗ್ಯ ಇಲಾಖೆ, ಜಿಲ್ಲೆ ಹಾಗೂ ತಾಲ್ಲೂಕು ಆರೋಗ್ಯ ಇಲಾಖೆ ವತಿಯಿಂದ ಡಿ.21 ರಿಂದ 24 ರವರೆಗೆ ಪಲ್ಸ್ ಪೋಲಿಯೋ ಲಸಿಕೆ ಅಭಿಯಾನವನ್ನು ಹಮ್ಮಿಕೊಳ್ಳಲಾಗಿದೆ. ತಾಲೂಕಿನ 224 ಹಳ್ಳಿಗಳಲ್ಲಿ 0–5 ವರ್ಷದ ಮಕ್ಕಳ ಸಂಖ್ಯೆ 18,810 ಇದ್ದು,181 ಪೋಲಿಯೋ ಬೂತ್ ನಿರ್ಮಿಸಲಾಗಿದೆ. 5 ಟ್ರಾನ್ ಬೂತ್‌ಗಳನ್ನು ಮಾಡಲಾಗಿದ್ದು, 724 ಮಂದಿ ಲಸಿಕೆ ನೀಡುವ ಸಿಬ್ಬಂದಿ ಯನ್ನು ನಿಯೋಜಿಸಲಾಗಿದೆ ಎಂದು ಮಾಹಿತಿ ನೀಡಿದರು.

ಕಿರಿಯ ಶ್ರೇಣಿ ಸಿವಿಲ್ ನ್ಯಾಯಾಧೀಶ ಸಚಿನ್, ತಾಲೂಕು ವಕೀಲರ ಸಂಘದ ಅಧ್ಯಕ್ಷ ಮಹದೇವಸ್ವಾಮಿ, ವೈದ್ಯಾಧಿಕಾರಿ ಅಭಿಲಾಷ್, ಮಕ್ಕಳ ತಜ್ಞೆ ಮಾನಸ, ರಾಜಣ್ಣ ಹಾಜರಿದ್ದರು.

ದೇಶ ಪೋಲಿಯೋ ಮುಕ್ತ : ಸೋಸಲೆ ಪ್ರಾಥಮಿಕ ಆರೋಗ್ಯ ಕೇಂದ್ರದಲ್ಲಿ ಗ್ರಾಮ ಪಂಚಾಯತಿಯ ಸಹಯೋಗದಲ್ಲಿ ಭಾನುವಾರ ನಡೆದ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಅಭಿಯಾನಕ್ಕೆ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಸೋಸಲೇ ಗ್ರಾಪಂ ಅಧ್ಯಕ್ಷ ಭಾಗ್ಯ ಶಿವ ಕುಮಾರ್ ಬಡ್ಡು ಚಾಲನೆ ನೀಡಿದರು.

ನಂತರ ಮಾತನಾಡಿದ ಅವರು, ಮಕ್ಕಳು ಅಂಗಾಂಗ ನ್ಯೂನತೆಗೆ ಒಳಗಾಗಬಾರದು ಎಂಬ ಮುನ್ನೆಚ್ಚರಿಕಾ ಕ್ರಮವಾಗಿ ಸರ್ಕಾರ ಪೋಲಿಯೋ ಲಸಿಕಾ ಅಭಿಯಾನ ಹಮ್ಮಿಕೊಂಡಿದ್ದು, ಪೋಷಕರು ಐದು ವರ್ಷದೊಳಗಿನ ಮಕ್ಕಳಿಗೆ ಕಡ್ಡಾಯವಾಗಿ ಪೋಲಿಯೋ ಲಸಿಕೆ ಹಾಕಿಸಬೇಕು ಹಾಗೂ ಎರಡು ಹನಿಗಳು ಪೋಲಿಯೋ ವಿರುದ್ಧ ನಿರಂತರ ಗೆಲುವು ಭಾರತವು ಪೋಲಿಯೋ ದೇಶ ಮುಕ್ತವಾಗಿದೆ. ಆದರೆ ಕೆಲವು ದೇಶಗಳಲ್ಲಿ ಪೋಲಿಯೋ ಇನ್ನೂ ಭೀತಿಯನ್ನು ಉಂಟು ಮಾಡುತ್ತಿದ್ದು ನಮ್ಮ ದೇಶದಲ್ಲೂ ಮರುಕಳಿಸುವ ಸಾಧ್ಯತೆ ಇದೆ. ನಿಮ್ಮ ಮಗುವಿಗೆ ಪ್ರತಿ ಬಾರಿ ಎರಡು ಪೋಲಿಯೋ ಹನಿ ಹಾಕಿಸಿ ಸಂಪೂರ್ಣ ರಕ್ಷಣೆಯನ್ನು ಖಚಿತಪಡಿಸಿಕೊಳ್ಳಿ ಪೋಲಿಯೋ ವಿರುದ್ಧ ಭಾರತ ಸಾಧಿಸಿರುವ ಗೆಲುವನ್ನು ಮುಂದುವರಿಸಲು ನಮ್ಮ ಜೊತೆ ಕೈಜೋಡಿಸಿ ಶಾಶ್ವತ ಅಂಗವಿಕಲತೆಯನ್ನು ತರಬಲ್ಲ ಪೋಲಿಯೋವನ್ನು ಲಸಿಕೆಯ ಮೂಲಕ ಪ್ರತಿರೋಧಿಸೋಣ ಎಂದು ತಿಳಿಸಿದರು


ವೈದ್ಯಾಧಿಕಾರಿ ಡಾ.ಚಂದ್ರಶೇಖರ್ ಸಿಸ್ಟರ್ ಮಹದೇವಮ್ಮ, ಸುಶ್ಮಿತಾ ನಾಗ್, ಅನಸೂಯ, ತನುಜ, ಅಂಗನವಾಡಿ ಕಾರ್ಯಕರ್ತರಾದ ಪಿ.ಎಂ.ಸರೋಜಮ್ಮ, ಎಂ.ಪುಷ್ಪ, ಬಂಗಾರಮ್ಮ, ಶಾಂತಮ್ಮ, ಆಶಾ ಕಾರ್ಯಕರ್ತರಾದ ಪುಷ್ಪಲತಾ, ಜ್ಯೋತಿ ಜೆಡಿಎಸ್ ಯುವ ಮುಖಂಡ ಶಿವಕುಮಾರ್ ಇದ್ದರು.

ನಂಜನಗೂಡಲ್ಲಿ ಕಪಿಲಾ ಆರತಿ, ಲಕ್ಷ ದೀಪೋತ್ಸವ

ನಂಜನಗೂಡು : ನಗರದ ಕಪಿಲಾ ನದಿ ತೀರದ ಸ್ನಾನ ಘಟ್ಟದಲ್ಲಿ ಯುವ ಬ್ರಿಗೇಡ್ ಭಾನುವಾರ ಆಯೋಜಿಸಿದ್ದ ಕಪಿಲಾ ಆರತಿ,ಲಕ್ಷ ದೀಪೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ರಾತ್ರಿ 7.30ರ ಸಮಯದಲ್ಲಿ ನದಿಯಲ್ಲಿನ ಹದಿನಾರು ಕಾಲು ಮಂಟಪದಲ್ಲಿ ಸ್ಥಾಪಿಸಲಾಗಿದ್ದ ಶಿವಲಿಂಗಕ್ಕೆ ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜೀ, ಸ್ವಾಮಿ ಪ್ರಮಥಾಧಿಪಾನಂದ ಹಾಗೂ ಗೋಪಾಲ್ ಜೀಯವರು ಅಷ್ಟತೀರ್ಥಗಳ ಅಭಿಷೇಕ ಮಾಡುವ ಮೂಲಕ ಕಾರ್ಯಕ್ರಮಕ್ಕೆ ಚಾಲನೆ ನೀಡಿದರು. ನಂತರ ದೋಣಿಯ ಮೂಲಕ ಗಣ್ಯರನ್ನು ನದಿಯ ಮಧ್ಯದಲ್ಲಿ ಕಟ್ಟಿದ್ದ ವೇದಿಕೆಗೆ ಕರೆದೊಯ್ಯಲಾಯಿತು.

ವೇದಿಕೆಯಲ್ಲಿನ ಭಾರತಾಂಬೆಯ ಭಾವಚಿತ್ರಕ್ಕೆ ಪುಷ್ಪಾರ್ಚನೆ ಮಾಡಿ ಮಾತನಾಡಿದ ವಿಶ್ವ ಹಿಂದೂ ಪರಿಷತ್ ಕಾರ್ಯದರ್ಶಿ ಗೋಪಾಲ್ ಜೀ ಹಾಲು ಕೊಡುವ ಗೋವನ್ನು ಗೋಮಾತೆ ಜೀವ ಜಲ ನೀಡುವ ನದಿಗಳನ್ನು ಗಂಗಾ ಮಾತಾ, ತುಂಗಾ ಮಾತಾ, ಕಪಿಲಾ ಮಾತಾ ಎಂದು ಕರೆದು ತಾಯಿಯ ಸ್ಥಾನ ನೀಡಿ ಪೂಜಿಸುವ ಶ್ರೇಷ್ಠ ಪರಂಪರೆ, ಸಂಸ್ಕೃತಿ ನಮ್ಮದು, ಇಂತಹ ನದಿಗಳಿಗೆ ತ್ಯಾಜ್ಯ, ಹಳೇ ಬಟ್ಟೆಗಳನ್ನು ಬಿಟ್ಟು ನದಿ ನೀರನ್ನು ಕಲುಷಿತಗೊಳಿಸಬಾರದು ಎಂದರು.



ಕಪಿಲಾ ನದಿ ತೀರದ ಸ್ನಾನ ಘಟ್ಟದಲ್ಲಿ ಕಪಿಲಾ ಆರತಿ, ಲಕ್ಷ ದೀಪೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ನೆರವೇರಿತು.

ಯುವ ಬ್ರಿಗೇಡ್ ಸಾರ್ವಜನಿಕರ ಸಹಕಾರದಿಂದ ಕಳೆದ 10 ವರ್ಷಗಳಿಂದ ಕಪಿಲಾನದಿಯನ್ನು ಸ್ವಚ್ಛಗೊಳಿಸಿ, ಕಪಿಲಾ ಆರತಿ ಕಾರ್ಯಕ್ರಮ ನಡೆಸುತ್ತಿದೆ, ಮೊದಲಿಗೆ ನದಿಯಲ್ಲಿ ಟನ್ ಗಟ್ಟಲೆ ತ್ಯಾಜ್ಯ ತೆಗೆಯಲಾಗುತ್ತಿತ್ತು. ಕಪಿಲಾ ಆರತಿ ಕಾರ್ಯಕ್ರಮ ನಡೆಸಿದ ಮೇಲೆ ನದಿಗೆ ತ್ಯಾಜ್ಯ ಎಸೆಯುವ ಪ್ರವೃತ್ತಿ ಕಡಿಮೆಯಾಗಿದೆ. ಹಲವು ಶತಮಾನಗಳ ಹೋರಾಟದ ಫಲವಾಗಿ ಅಯೋಧ್ಯೆಯಲ್ಲಿ ರಾಮಮಂದಿರ ಸಾಕಾರಗೊಂಡಿದೆ ಎಂದು ಹೇಳಿದರು.

ರಾಮಕೃಷ್ಣ ಆಶ್ರಮದ ಸ್ವಾಮಿ ಸರ್ವಜಯಾನಂದಜೀ ಮಾತನಾಡಿದರು. ಕಾರ್ಯಕ್ರಮದಲ್ಲಿ ಕೃಷ್ಣಜೋಯಿಸ್ ನೇತೃತ್ವದ 5 ಮಂದಿ ಋತ್ವಿಕರು ಕಪಿಲಾ ನದಿಗೆ ಧೂಪ, ದೀಪದ ಆರತಿ ಬೆಳಗಿದರು, ನದಿಯ ಸೋಪಾನ ಕಟ್ಟೆಯ ಮೇಲೆ ಮಹಿಳೆಯರು ಲಕ್ಷಾಂತರ ದೀಪಗಳನ್ನು ಹಚ್ಚಿ ದೇವರನ್ನು ಪ್ರಾರ್ಥಿಸಿದರು. ಯುವಕರು ಹದಿನಾರು ಕಾಲು ಮಂಟಪದಲ್ಲಿ ಪಟಾಕಿ ಸಿಡಿಸಿ ಸಂಭ್ರಮಿಸಿದರು. ಕಾರ್ಯಕ್ರಮದಲ್ಲಿ ಯುವ ಬ್ರಿಗೇಡ್ ರಾಜ್ಯ ಸಂಚಾಲಕ ಎಸ್. ಚಂದ್ರಶೇಖರ್, ತಾಲೂಕು ಸಂಚಾಲಕ ನಿತೀನ್, ಗಿರೀಶ್, ಸುನೀಲ್, ಸುರೇಶ್, ಎನ್.ವಿ. ರವಿಶಾಸ್ತ್ರಿ, ಚರಣ್, ಕಿಶೋರ್, ಅರ್ಜುನ್, ಮಹದೇವ ಉಪಸ್ಥಿತರಿದ್ದರು.

ಹೆಚ್.ಡಿ.ಕೋಟೆ ಬಳಿ ಚಿರತೆ ದಾಳಿಗೆ ಮೇಕೆ ಬಲಿ



ಹೆಚ್.ಡಿ.ಕೋಟೆ, ಡಿ.21– ಹೆಚ್.ಡಿ. ಕೋಟೆಯಲ್ಲಿ ಮತ್ತೆ ಚಿರತೆ ದಾಳಿ ನಡೆಸಿದ್ದು, ಮೇಕೆಯೊಂದನ್ನು ಬಲಿ ಪಡೆದಿದ್ದು,ಸಾರ್ವಜನಿಕರು ಆತಂಕಗೊಂಡಿದ್ದಾರೆ. ವಾರ್ಡ್ ನಂಬರ್ 21ರ ವಡ್ಡರಗುಡಿಯಲ್ಲಿ ಶನಿವಾರ ರಾತ್ರಿ ರೈತ ಬೀರೇಗೌಡರ ಮನೆಯ ಕೊಟ್ಟಿಗೆಯಲ್ಲಿ ಕಟ್ಟಿ ಹಾಕಿದ 30 ಕೆಜಿ ತೂಕದ ಮೇಕೆಯನ್ನು ಚಿರತೆ ದಾಳಿ ಮಾಡಿ ಕೊಂದು ಹಾಕಿದೆ.

ವಿಚಾರ ತಿಳಿಯುತ್ತಿದ್ದಂತೆ ಅರಣ್ಯ ಇಲಾಖೆಯವರು ಸ್ಥಳ ಪರಿಶೀಲನೆ ಮಾಡಿ ಚಿರತೆಗೆ ಬೋನ್ ಇಡಲಾಗುತ್ತದೆ ಎಂದು ತಿಳಿಸಿದ್ದಾರೆ. ಗ್ರಾಮದ ಅಕ್ಕ ಪಕ್ಕದ ಮನೆಯವರು ಹಾಗೂ ವಾರ್ಡಿನ ಜನಸಾಮಾನ್ಯರು ಜಾಗರೂಕತೆಯಿಂದ ಇರಬೇಕು ಹಾಗೂ ಹಸು ಕುರಿ ಮೇಕೆಗಳನ್ನು ಸ್ವಲ್ಪ ಜವಾಬ್ದಾರಿಯಾಗಿ ಕಟ್ಟಿಕೊಳ್ಳಬೇಕು ಎಂದು ಇಲಾಖೆಯವರು ತಿಳಿಸಿದ್ದಾರೆ.

ಇದೇ ಸಂದರ್ಭದಲ್ಲಿ ಮಾಜಿ ಪುರಸಭಾ ಸದಸ್ಯ ಸೋಮಶೇಖರ್, ರೈತ ಬೀರೇಗೌಡ, ಇಲಾಖೆ ಸಿಬ್ಬಂದಿ ಇದ್ದರು.

ಅಕ್ರಮ ದಂಧೆ ತಡೆಯದಿದ್ದರೆ ಸಿಎಂಗೆ ದೂರು

ಹೆಚ್.ಡಿ.ಕೋಟೆ, ಡಿ.21– ತಾಲೂಕಿನಲ್ಲಿ ದಿನದಿಂದ ದಿನಕ್ಕೆ ಹೆಚ್ಚಾಗುತ್ತಿರುವ ಗಾಂಜಾ, ಜೂಜಾಟ, ಕೇರಳ ಲಾಟರಿ ಸೇರಿದಂತೆ ಅಕ್ರಮ ದಂಧೆಗಳನ್ನು ಸಂಪೂರ್ಣ ಕಡಿವಾಣ ಹಾಕಲು ಪೊಲೀಸ್ ಇಲಾಖೆ ಕಟ್ಟುನಿಟ್ಟಿನ ಕ್ರಮ ಕೈಗೊಳ್ಳಬೇಕು, ಇಲ್ಲದಿದ್ದರೆ ತಮ್ಮಗಳ ವಿರುದ್ಧ ಕಠಿಣ ಕ್ರಮ ಕೈಗೊಳ್ಳಲು ಪೊಲೀಸ್ ಮಹಾ ನಿರ್ದೇಶಕರು ಹಾಗೂ ಮುಖ್ಯಮಂತ್ರಿಗಳಿಗೆ ದೂರು ನೀಡಲಾಗುವುದು ಎಂದು ಶಾಸಕ ಅನಿಲ್ ಚಿಕ್ಕಮಾದು ಎಚ್ಚರಿಕೆ ನೀಡಿದ್ದಾರೆ.

ಪಟ್ಟಣದ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಇಲಾಖೆಯ ಅಧಿಕಾರಿಗಳ ಜೊತೆ ತಾಲೂಕಿನಲ್ಲಿ ವ್ಯಾಪಕವಾಗಿ ನಡೆಯುತ್ತಿರುವ ಮಾದಕ ವಸ್ತುಗಳು ಮತ್ತು ಅಕ್ರಮ ಚಟುವಟಿಕೆಗಳ ಬಗ್ಗೆ ನಡೆದ ಮಹತ್ವದ ಸಭೆಯಲ್ಲಿ ಮಾತನಾಡಿದ ಅವರು ಪಟ್ಟಣದಲ್ಲಿ ಕಳೆದ ವಾರ ಗಾಂಜಾ ನಶೆಯಿಂದ ಪಟ್ಟಣದ ಯುವಕನನ್ನು ಕೊಲೆಗೈದ ಘಟನೆ ನಡೆದಿದ್ದು, ತಾಲೂಕಿನ ಜನರಲ್ಲಿ ಆತಂಕ ಉಂಟು ಮಾಡಿದೆ ಪಟ್ಟಣ ಹಾಗೂ ತಾಲೂಕಿನಾದ್ಯಂತ ಗಾಂಜಾ ಮಾರಾಟ ಮತ್ತು ಸೇವನೆ ಹೆಚ್ಚಾಗಿದ್ದು, ಸಮಾಜದ ಸ್ವಾಸ್ಥ್ಯ ಹಾಳಾಗುತ್ತಿದೆ ಇದರಿಂದ ತಾಲೂಕಿಗೆ ಹಾಗೂ ನನಗೆ ಕೆಟ್ಟ ಹೆಸರು ಬರುವಂತಾಗಿದೆ ಎಂದರು.

ಮೈಸೂರು ಸೇರಿದಂತೆ ಬೇರೆ ಬೇರೆ ನಗರಗಳಿಂದ ಮಾದಕ ವಸ್ತುಗಳು ಸರಬರಾಜು ಆಗುತ್ತಿರುವ ಬಗ್ಗೆ ಮತ್ತು ಪಟ್ಟಣದಲ್ಲಿ ಜೂಜಾಟಗಳು ಹಾಗೂ ಕೇರಳ ಲಾಟರಿಗಳು ದಂಧೆ ಹೆಚ್ಚಾಗುತ್ತಿರುವ ಬಗ್ಗೆ ಸಾರ್ವಜನಿಕರಿಂದ ಸಾಕಷ್ಟು ದೂರುಗಳು ನನಗೆ ಬಂದಿದೆ. ಇತ್ತೀಚಿನ ದಿನಗಳಲ್ಲಿ ಕೆಲವೊಂದು ದುಷ್ಟಗಳಿಂದ ಯುವಕರು ದಾರಿ ತಪ್ಪುವ ಕೆಲಸವಾಗುತ್ತಿದ್ದು, ಪೋಷಕರು ತಮ್ಮ ಮಕ್ಕಳು, ಚಟುವಟಿಕೆಗಳ ಬಗ್ಗೆ ಹೆಚ್ಚು ಗಮನ ಹರಿಸಿ ಜಾಗೃತರಾಗಿರಬೇಕು, ಇಂಥ ಒಂದು ಘಟನೆಗಳ ವಿಚಾರ ತಿಳಿದಲ್ಲಿ ಪೊಲೀಸರ ಗಮನಕ್ಕೆ ತರಬೇಕು ಎಂದರು.



ಹೆಚ್.ಡಿ.ಕೋಟೆ ಪೊಲೀಸ್ ಠಾಣೆಯಲ್ಲಿ ಪೊಲೀಸ್ ಅಧಿಕಾರಿಗಳ ಜೊತೆ ಮಾದಕ ವಸ್ತುಗಳು ಮತ್ತು ಅಕ್ರಮ ಚಟುವಟಿಕೆಗಳ ಬಗ್ಗೆ ಶಾಸಕ ಅನಿಲ್ ಚಿಕ್ಕಮಾದು ಸಭೆ ನಡೆಸಿದರು

ಪುರಸಭಾ ಮಾಜಿ ಉಪಾಧ್ಯಕ್ಷ ಆಸಿಫ್ ಇಕ್ಬಾಲ್ ಮಾತನಾಡಿ, ಮುಸ್ಲಿಂ ಬ್ಲಾಕ್, ಪಟ್ಟಣ ವ್ಯಾಪ್ತಿಯಲ್ಲಿ ಇತ್ತೀಚಿನ ದಿನಗಳಲ್ಲಿ ಯುವಕರುಗಳು ಗಾಂಜಾ, ವೈಟ್ನರ್, ಸಲ್ಯೂಷನ್ ಇನ್ನಿತರ ಮಾದಕ ವಸ್ತುಗಳಿಗೆ ಒಳಗಾಗಿ, ಸಮಾಜದಲ್ಲಿ ಶಾಂತಿ ಕದಡುವ ಕೆಲಸ ಮಾಡುತ್ತಿದ್ದಾರೆ, ತಿಳುವಳಿಕೆ ನೀಡಲು ಹೋದವರಿಗೆ ಗಾಂಜಾ ನಶೆಯಲ್ಲಿ ಅವರ ವಿರುದ್ಧವಾಗಿ ಗಲಾಟೆ ಮಾಡಿರುವ ಪ್ರಕರಣಗಳು ಪಟ್ಟಣದಲ್ಲಿ ನಡೆದಿದೆ ನಿವಾಸಿಗಳು ತುಂಬಾ ಆತಂಕದಲ್ಲಿ ಇರುವುದನ್ನ ಗಮನಿಸಲಾಗಿದೆ. ಹಾಗಾಗಿ ಪೊಲೀಸ್ ಇಲಾಖೆ ಗಸ್ತು ಮಾಡುವ ಕೆಲಸ ಹೆಚ್ಚಾಗಬೇಕು ಎಂದು ಮನವಿ ಮಾಡಿದರು.

ಇದೇ ಸಂದರ್ಭದಲ್ಲಿ ಎಎಸ್ಪಿ ಮಲ್ಲಿಕ್, ಡಿವೈಎಸ್‌ಪಿ ರವಿ, ಕೋಟೆ ಸರಗೂರು ಸರ್ಕಲ್ ಇನ್ಸ್‌ಪೆಕ್ಟರ್‌ಗಳಾದ ಗಂಗಾಧರ್, ಪ್ರಸನ್ನ ಕುಮಾರ್, ಎಸ್‌ಐಗಳಾದ, ಚಂದ್ರಹಾಸ ಚಿಕ್ಕನಾಯಕ, ಸುರೇಶ್ ನಾಯಕ, ಕಿರಣ್, ಮುಖಂಡರಾದ ಮಧು ಕುಮಾರ್, ಆಸಿಫ್ ಇಕ್ಬಾಲ್, ಹೋಂಡಾ ನಯಾಜ್, ಇದ್ದರು.

ಹುಣಸೂರಿನಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮ



ಹುಣಸೂರು ತಾಲೂಕಿನಾದ್ಯಂತ ಪಲ್ಸ್ ಪೋಲಿಯೋ ಕಾರ್ಯಕ್ರಮವನ್ನು ಐದು ವರ್ಷದೊಳಗಿನ ಮಕ್ಕಳಿಗೆ ಪೋಲಿಯೋ ಹನಿಗಳನ್ನು ಹಾಕುವ ಮೂಲಕ ಉದ್ಘಾಟಿಸಲಾಯಿತು.

ಹುಣಸೂರು,ಡಿ.21– ನಗರದ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣದಲ್ಲಿ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಡಾ.ಸರೋಜಿನಿ ವಿಕ್ರಮ್ ಉದ್ಘಾಟಿಸಿದರು.

ಈ ವೇಳೆ ಮಾತನಾಡಿದ ಅವರು, ಸರಕಾರ ಸಾರ್ವಜನಿಕರಿಗೆ ಏನೇ ಉಚಿತವಾಗಿ ನೀಡಿದರೂ ಅದನ್ನು ಮನೆ, ಮನೆಗೆ ಮುಟ್ಟಿಸುವ ಕಾರ್ಯ ಪತ್ರಕರ್ತರಿಂದ ಕಾರಣವಾಗಿದ್ದು, ಪೋಲಿಯೋ ಹನಿ ಇಷ್ಟಟರ ಮಟ್ಟಿಗೆ ಯಶಸ್ವಿಯಾಗಲು ಪತ್ರಿಕೆಗಳು ನೀಡಿದ ಪ್ರಚಾರ ಶ್ಲಾಘನೀಯವೆಂದರು.

ರೋಟರಿ ಕ್ಲಬ್ ಅಧ್ಯಕ್ಷ ಹೆಚ್.ಆರ್. ಕೃಷ್ಣ ಕುಮಾರ್ ಮಾತನಾಡಿ, ಪ್ರತಿ ವರುಷ ಅಂತರಾಷ್ಟ್ರೀಯ ರೋಟರಿ ಸಂಸ್ಥೆ ಆರೋಗ್ಯ ವಿಶ್ವಸಂಸ್ಥೆಯೊಂದಿಗೆ ಹಾಗೂ ಸರಕಾರದ ಜತೆಗೆ ಇಡೀ ವಿಶ್ವದಲ್ಲೇ ಮಕ್ಕಳ ಮೇಲೆ ಪರಿಣಾಮ ಬೀರುವ ಪೋಲಿಯೋ ನಿರ್ಮೂಲನೆಯಲ್ಲಿ ರೋಟರಿ ಕ್ಲಬ್ ಕಟುಬದ್ಧವಾಗಿ ನಿಂತಿದೆ ಎಂದರು.

ಆರೋಗ್ಯ ಶಿಕ್ಷಣಾಧಿಕಾರಿ ರಾಜೇಶ್ವರಿ ಮಾಹಿತಿ ನೀಡಿ, ತಾಲೂಕು ಆರೋಗ್ಯ ಇಲಾಖೆವತಿಯಿಂದ, ಸುಮಾರು 32 ಬೂತುಗನ್ನು, ಸ್ಥಾಪಿಸಿ. ಪೋಷಕರು ಮಕ್ಕಳಗೆ ಲಸಿಕೆ ಹಾಕಲು ತೊಂದರೆಯಾಗದಂತೆ. ದೇವರಾಜ ಅರಸು ಸಾರ್ವಜನಿಕ ಆಸ್ಪತ್ರೆ ಆವರಣ, ಹಳೇ ಬಸ್ ಸ್ಟ್ಯಾಂಡ್, ಸೇತುವೆ, ಕಲ್ಕುಣಿಕೆ ಸರ್ಕಲ್, ಸರಕಾರಿ ಶಾಲೆಗಳು ಹಾಗೂ ಹೋಬಳಿ ಕೇಂದ್ರಗಳು ಹೀಗೆ ಎಲ್ಲಡೆ ಸೂಕ್ತ ವ್ಯವಸ್ಥೆ ಮಾಡಲಾಗಿತ್ತು.

ಮುಂಬರುವ ದಿನಾಂಕ 21ರಿಂದ 24ರ ಬುಧವಾರದವರೆಗೂ ನಗರ ಮತ್ತು ಹೋಬಳಿ ಮಟ್ಟದ ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ. ಪಲ್ಸ್ ಪೋಲೀಯೋ ಹನಿ ಲಸಿಕೆ ದೊರೆಯಲಿದ್ದು, ಗ್ರಾಮೀಣ ಭಾಗದ ಪ್ರತಿಯೊಬ್ಬರೂ ಇದರೆ ಸದ್ಬಳಕೆ ಮಾಡಿಕೊಂಡು. ಮಾರಕ ರೋಗದಿಂದ ದೂರವಿರಬೇಕು ಎಂದರು.

ಕಾರ್ಯಕ್ರಮದಲ್ಲಿ ರೋಟರಿ ಹಿರಿಯ ಸದಸ್ಯ ರಾಜಶೇಖರ್, ಕಾರ್ಯದರ್ಶಿ ಶ್ಯಾಮಣ್ಣ ಧರ್ಮಾಪುರ, ಹಿರಿಯ ಆರೋಗ್ಯ ನಿರೀಕ್ಷಕ ಮಹದೇವ್, ವಿಜಯಶ್ರೀ, ಸಮಾಜ ಸೇವಕ ಪ್ರಸಾದ್, ಇದ್ದರು.

ಸಾರ್ವಜನಿಕ ಆಸ್ಪತ್ರೆ: ತಹಸೀಲ್ದಾರ್ ಮಂಜುನಾಥ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಪಲ್ಸ್ ಪೋಲಿಯೋ ಬೂತ್‌ಗೆ ಭೇಟಿ ನೀಡಿ ಮಕ್ಕಳಿಗೆ ಲಸಿಕೆ ನೀಡಿದರು.

ನಂತರ ಮಾತನಾಡಿದ ಅವರು, ಪಲ್ಸ್ ಪೋಲಿಯೋ ಲಸಿಕೆ ಕಾರ್ಯಕ್ರಮವನ್ನು ಸರಕಾರ ಪ್ರತಿವರ್ಷವು ಸಮರ್ಪಕವಾಗಿ ಯೋಜನೆ ರೂಪಿಸಿ. ಪೋಲಿಯೋ ಕಡಿವಾಣಕ್ಕೆ ಕಾರಣವಾಗಿದೆ. ಇದರ ಸದುಪಯೋಗವನ್ನು ಪ್ರತಿ ಕುಟುಂಬವು ಉಪಯೋಗಿಸುವ ಪ್ರಯತ್ನ ಮಾಡಲಿ ಎಂದರು. ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಯಾಗಿ ಭಾಗವಹಿಸಿದ ಡಿಎಚ್‌ಓ ಡಾ.ಸುಧಾಕರ್ ಮೇಲ್ವಿಚಾರಣೆ ಹಾಗೂ ಕಾರ್ಯಕ್ರಮದ ನಿಗದಿತ ಗುರಿ 17582 ಮಕ್ಕಳಿಗೆ ಲಸಿಕೆ ಹಾಕುವ ಮೂಲಕ ಶೇಕಡಾ 102 ಸಾಧನೆಯ ಗುರಿಯನ್ನು ಮೀರಿ ಇಷ್ಟು ಸಾಧಿಸಿರುವುದು ಅಭಿನಂದನೀಯ ವೆಂದರು ಕಾರ್ಯಕ್ರಮದಲ್ಲಿ ನಗರದಭೆ ಪೌರಾಯುಕ್ತೆ ಮಾನಸ ಪೋಲಿಯೋ ಕುರಿತು ಮಾತನಾಡಿದರು.

ಕಾರ್ಯಕ್ರಮ ಕುರಿತು ಡಾ. ಶಿವಶಂಕರ್ ಮಾಹಿತಿ ನೀಡಿದರು. ಕಾರ್ಯಕ್ರಮದಲ್ಲಿ ಪ್ರಭಾರ ತಾಲೂಕು ಆಡಳಿತಧಾಧಿಕಾರಿ ಡಾ.ದರ್ಶನ್, ತಾಲೂಕು ಆರೋಗ್ಯ ಶಿಕ್ಷಣಾಧಿಕಾರಿ ರಾಜೇಶ್ವರಿ, ರಕ್ಷಾ ಸಮಿತಿ ಸದಸ್ಯರಾದ ನಿಲವಾಗಿಲು ಪ್ರಭಾಕರ್, ಆರೋಗ್ಯ ಇಲಾಖೆ ಸಿಬ್ಬಂದಿ ಹಾಜರಿದ್ದರು.



ಹುಣಸೂರು ತಹಸೀಲ್ದಾರ್ ಮಂಜುನಾಥ್ ಸಾರ್ವಜನಿಕ ಆಸ್ಪತ್ರೆಯಲ್ಲಿ ಪಲ್ಸ್ ಪೋಲಿಯೋ ಬೂತ್‌ಗೆ ಭೇಟಿ ನೀಡಿ ಮಕ್ಕಳಿಗೆ ಲಸಿಕೆ ನೀಡಿದರು.

ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಚಾಲನೆ



ಸುತ್ತೂರು, ಡಿ.21– ನಂಜನಗೂಡು ತಾಲೂಕು ಸುತ್ತೂರು ಹಾಗೂ ಬಿಳುಗಲಿ ಗ್ರಾಮದ ಪ್ರಾಥಮಿಕ ಆರೋಗ್ಯ ಕೇಂದ್ರದ ವತಿಯಿಂದ ವಿವಿಧ ಪಲ್ಸ್ ಪೋಲಿಯೋ ಲಸಿಕೆ ಕಾರ್ಯ ಕ್ರಮವನ್ನು ಐದು ವರ್ಷದ ಒಳಗಿನ ಮಕ್ಕಳಿಗೆ ಪೋಲಿಯೋ ಹನಿ ಹಾಕುವ ಮೂಲಕ ಗ್ರಾಪಂ ಅಧ್ಯಕ್ಷ ರಂಗಸ್ವಾಮಿ ಉದ್ಘಾಟಿಸಿದರು. ಸುತ್ತೂರು ಗ್ರಾಮ ಪಂಚಾಯತಿ ವ್ಯಾಪ್ತಿಗೆ ಸೇರಿದ ಜಿ ಮಾರಳ್ಳಿ, ಬಿಳುಗಲಿ ಗ್ರಾಮಗಳಲ್ಲಿ 1250 ಮಕ್ಕಳಿಗೆ ಪೋಲಿಯೋ ನಿರ್ಮೂಲನ ಲಸಿಕೆ ಹಾಕಲಾಯಿತು.

ಈ ಸಂದರ್ಭದಲ್ಲಿ ಗ್ರಾಪಂ ಅಧ್ಯಕ್ಷ ರಂಗಸ್ವಾಮಿ ಮಾತನಾಡಿ, ನಮ್ಮ ದೇಶವು ಆರೋಗ್ಯವಾಗಿ ಮುಂದುವರೆಯಲು ಪ್ರತಿಯೊಂದು ಕುಟುಂಬದಲ್ಲೂ ಆರೋಗ್ಯವಂತ ಮಗು ಇರಬೇಕು. ಇಂದಿನ ಮಕ್ಕಳೇ ಮುಂದಿನ ಪ್ರಜೆಗಳು. ಮಕ್ಕಳು ಆರೋಗ್ಯವಾಗಿದ್ದರೆ, ಇಡೀ ಕುಟುಂಬ ಮತ್ತು ಮನೆಗಳು ಆರೋಗ್ಯವಂತರಾಗಲು ಸಾಧ್ಯ ಎಂದರು.

ವೈದ್ಯಾಧಿಕಾರಿ ಡಾ.ರಮ್ಯಾ, ಗ್ರಾಮ ಪಂಚಾಯತಿ ಉಪಾಧ್ಯಕ್ಷೆ ಪ್ರತಿಮಾ ಪರಮೇಶ್, ಆರೋಗ್ಯ ಇಲಾಖೆ ಅಧಿಕಾರಿಗಳು, ಅಂಗನವಾಡಿ ಕಾರ್ಯಕರ್ತರು, ಆಶಾ ಕಾರ್ಯಕರ್ತರು ಕಾರ್ಯಕ್ರಮಗಳಲ್ಲಿ ಭಾಗವಹಿಸಿದ್ದರು.

ಮೈಸೂರಲ್ಲಿ ಯಶಸ್ವಿ ಪಲ್ಸ್ ಪೋಲಿಯೋ ಅಭಿಯಾನ

● ಮೈಸೂರು ಜಿಲ್ಲೆಯಲ್ಲಿ 2,25,128 ಲಕ್ಷ ಮಕ್ಕಳಿಗೆ ಪೋಲಿಯೋ ಲಸಿಕೆ ● ಪೋಲಿಯೋ ಮುಕ್ತ ಭಾರತಕ್ಕೆ ಸರ್ಕಾರದ ದಿಟ್ಟ ಹೆಜ್ಜೆ ● 1,648 ಬೂತ್‌ಗಳಲ್ಲಿ ಪೋಲಿಯೋ ಹನಿ ● ಅರಮನೆ, ಮೃಗಾಲಯ ಸೇರಿ ಪ್ರವಾಸಿ ತಾಣಗಳಲ್ಲಿ ಲಸಿಕೆ ● ಇದಕ್ಕೆ ವೈದ್ಯರು ಸೇರಿ 4 ಸಾವಿರ ಸಿಬ್ಬಂದಿ ನಿಯೋಜನೆ ● ಈಗಾಗಲೇ ಲಸಿಕೆ ಹಾಕಿಸಿದ್ದರೂ ಮತ್ತೆ ಹಾಕಿಸಲು ಸೂಚನೆ




ಮೈಸೂರಿನ ಜಯಲಕ್ಷ್ಮಿ ಪುರಂನ ಲಕ್ಷ್ಮಿ ದೇವಮ್ಮ ಶಂಕರ ಶೆಟ್ಟಿ ಹೆರಿಗೆ ಆಸ್ಪತ್ರೆಯಲ್ಲಿ ಭಾನುವಾರ ಶಾಸಕ ಕೆ.ಹರೀಶ್ ಗೌಡರು ಮಗುವಿಗೆ ಪೋಲಿಯೋ ಲಸಿಕೆ ಹಾಕುವ ಮೂಲಕ ಪೋಲಿಯೋ ಲಸಿಕಾ ಅಭಿಯಾನಕ್ಕೆ (ಎಡಚಿತ್ರ) ಚಾಲನೆ ನೀಡಿದರು. ಮೈಸೂರು ಅರಮನೆಯಲ್ಲಿ ಪ್ರವಾಸಿಗರ ಮಗುವಿಗೆ ಪೋಲಿಯೋ ಲಸಿಕೆ ನೀಡಲಾಯಿತು.

ಮೈಸೂರು, ಡಿ.21(ಬಿಎಲ್‌ಯು)– ಪೋಲಿಯೋ ಮುಕ್ತ ಭಾರತ ಘೋಷಣೆಯಾಗಿದ್ದರೂ ಅಗತ್ಯ ಮುನ್ನೆಚ್ಚರಿಕಾ ಕ್ರಮವಾಗಿ ಇಂದು ಮೈಸೂರು ಸೇರಿದಂತೆ ದೇಶದ ಎಲ್ಲೆಡೆ ರಾಷ್ಟ್ರೀಯ ಪಲ್ಸ್ ಪೋಲಿಯೋ ಅಭಿಯಾನ ಆರಂಭಿಸಲಾಯಿತು. ಮೈಸೂರು ನಗರ ಹಾಗೂ ಜಿಲ್ಲೆಯಲ್ಲಿ 2,25,128 (ಶೇ.101.37) ಮಕ್ಕಳಿಗೆ ಇಂದು ಪೋಲಿಯೋ ಲಸಿಕೆ ಹಾಕಲಾಯಿತು.

ಮೈಸೂರಿನ ಜಯಲಕ್ಷ್ಮಿ ಪುರಂನ ಲಕ್ಷ್ಮಿ ದೇವಮ್ಮ ಶಂಕರ ಶೆಟ್ಟಿ ಹೆರಿಗೆ ಆಸ್ಪತ್ರೆಯಲ್ಲಿ ಇಂದು ಶಾಸಕ ಕೆ.ಹರೀಶ್‌ಗೌಡ ಅವರು ಮಗುವಿಗೆ ಸಾಂಕೇತಿಕವಾಗಿ ಪೋಲಿಯೋ ಲಸಿಕೆ ಹಾಕುವ ಮೂಲಕ ಪಲ್ಸ್ ಪೋಲಿಯೋ ಅಭಿಯಾನಕ್ಕೆ ಚಾಲನೆ ನೀಡಿದರು.

ಈ ವೇಳೆ ಮಾತನಾಡಿದ ಮೈಸೂರು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಪಿ.ಸಿ.ಕುಮಾರಸ್ವಾಮಿ ಅವರು, ಮೊದಲ ದಿನ ಶೇಕಡ 95ರಷ್ಟು ಪೋಲಿಯೋ ಲಸಿಕೆ ಹಾಕುವ ಗುರಿ ಹೊಂದಲಾಗಿದೆ. ಇದಕ್ಕಾಗಿ 1,648 ಬೂತ್ ಹಾಗೂ ಕಾರ್ಯಪಡೆ ರಚನೆ ಮಾಡಲಾಗಿದೆ. ಆರೋಗ್ಯ ಇಲಾಖೆಯ ವೈದ್ಯರು, ಸಿಬ್ಬಂದಿ ಲಸಿಕಾ ಕಾರ್ಯದಲ್ಲಿ ತೊಡಗಿದ್ದಾರೆ ಎಂದು ಮಾಹಿತಿ ನೀಡಿದರು.

ಮೈಸೂರು ಜಿಲ್ಲೆಯಲ್ಲಿ 4,000ಕ್ಕೂ ಹೆಚ್ಚು ಆರೋಗ್ಯಾಧಿಕಾರಿಗಳು ಹಾಗೂ ಸಿಬ್ಬಂದಿಯನ್ನು ನಿಯೋಜಿಸಲಾಗಿದೆ. ಈ ಮೂಲಕ ಪೋಲಿಯೋ ಲಸಿಕೆ ಗುರಿ ಮುಟ್ಟಲಾಗುವುದು ಎಂದು ಜಿಲ್ಲಾ ಆರೋಗ್ಯಾಧಿಕಾರಿ ಡಾ.ಕುಮಾರಸ್ವಾಮಿ ತಿಳಿಸಿದರು.

ಇಂದಿನಿಂದ ಮನೆ ಮನೆಯಲ್ಲಿ ಲಸಿಕೆ

ಮೈಸೂರು ಜಿಲ್ಲೆಯಲ್ಲಿ ನಾಳೆ (ಡಿಸೆಂಬರ್ 23) ಯಿಂದ ಮೂರು ದಿನಗಳ ಕಾಲ ವೈದ್ಯ ಸಿಬ್ಬಂದಿ ಮನೆ ಮನೆಗೆ ಭೇಟಿ ನೀಡಿ 5 ವರ್ಷದೊಳಗಿನ ಎಲ್ಲಾ ಮಕ್ಕಳಿಗೆ ಪೋಲಿಯೋ ಲಸಿಕೆ ಹಾಕಲಿದ್ದಾರೆ. ಇದಕ್ಕಾಗಿ 824 ತಂಡಗಳನ್ನು ರಚನೆ ಮಾಡಲಾಗಿದ್ದು, 323 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. ಇವರ ಜೊತೆ ಎರಡು ಮೊಬೈಲ್ ಬೂತ್‌ಗಳು ಕೂಡ ಕಾರ್ಯ ನಿರ್ವಹಿಸಲಿವೆ. ಈ ವೇಳೆ ಹಾಡಿ, ಬುಡಕಟ್ಟು ಹಾಗೂ ಇನ್ನಿತರ ಪ್ರದೇಶಗಳಲ್ಲಿ ಪೋಲಿಯೋ ಲಸಿಕೆ ಹಾಕಬೇಕೆಂದು ಆರೋಗ್ಯ ಇಲಾಖೆಯ ಹಿರಿಯ ಅಧಿಕಾರಿಗಳು ಸಿಬ್ಬಂದಿಗೆ ತಾಕೀತು ಮಾಡಿದ್ದಾರೆ. ಐದು ವರ್ಷದೊಳಗಿನ ಮಕ್ಕಳಿಗೆ ಈ ಮೊದಲು ಲಸಿಕೆ ಹಾಕಿದ್ದರೂ ಮತ್ತೆ ಲಸಿಕೆ ಹಾಕಿಸಬೇಕೆಂದು ಪೋಷಕರಿಗೆ ಕರೆ ನೀಡಿದ್ದಾರೆ.

ಪೋಲಿಯೋ ಅಭಿಯಾನ ಪುನರಾವರ್ತನೆಗೆ ಕಾರಣ...

ಭಾರತ ಪೋಲಿಯೋ ಮುಕ್ತವಾಗಿದ್ದರೂ ಆಗಾಗ ಪೋಲಿಯೋ ಲಸಿಕೆ ಅಭಿಯಾನಕ್ಕೆ ಬಂದು ಪ್ರಮುಖ ಕಾರಣವಿದೆ. ಭಾರತದಲ್ಲಿ ಕೊನೆಯ ಬಾರಿಗೆ ಪೋಲಿಯೋ ಪ್ರಕರಣ 2011ರ ಜನವರಿಯಲ್ಲಿ ದಾಖಲಾಗಿತ್ತು. ಅಲ್ಲಿಂದ ಇಲ್ಲಿವರೆಗೆ ಪ್ರಕರಣಗಳು ಕಂಡುಬರದೇ ಇದ್ದರೂ ಮುನ್ನೆಚ್ಚರಿಕಾ ಕ್ರಮವಾಗಿ ಅಭಿಯಾನ ಮುಂದುವರೆಸಲಾಗಿದೆ. ಈಗಾಗಲೇ ವಿಶ್ವಸಂಸ್ಥೆ ಮಾರ್ಚ್ 27, 2014ರಲ್ಲಿ ಪೋಲಿಯೋ ಮುಕ್ತ ಭಾರತ ಎಂದು ಘೋಷಣೆ ಮಾಡಿದೆ. ಆದರೆ ನಮ್ಮ ನೆರೆಯ ದೇಶಗಳಾದ ಪಾಕಿಸ್ತಾನದಲ್ಲಿ 51 ಹಾಗೂ ಅಫ್ಘಾನಿಸ್ತಾನದಲ್ಲಿ 10 ಪೋಲಿಯೋ ಪ್ರಕರಣ ಪತ್ತೆಯಾಗಿವೆ. ವಲಸಿಗರ ಮೂಲಕ ಭಾರತಕ್ಕೂ ಹರಡುವ ಸಾಧ್ಯತೆ ಹಿನ್ನೆಲೆಯಲ್ಲಿ ರಾಷ್ಟ್ರೀಯ ಪಲ್ಸ್ ಪೋಲಿಯೋ ಲಸಿಕಾ ಕಾರ್ಯಕ್ರಮವನ್ನು ಮುಂದುವರೆಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ 1007072 ಮನೆಗಳಿದ್ದು, 1,388 ಹೈ ರಿಸ್ಕ್ ಪ್ರದೇಶಗಳಿದ್ದು, ಇಲ್ಲಿ ಪೋಲಿಯೋ ಲಸಿಕೆ ಕಾರ್ಯಕ್ರಮವನ್ನು ಪರಿಣಾಮಕಾರಿಯಾಗಿ ಅನುಷ್ಠಾನಗೊಳಿಸಲಾಗಿದೆ.

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ, ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ಎಸ್,ಯುಕೇಶ್ ಕುಮಾರ್, ಜಿಲ್ಲಾ ಆಸ್ಪತ್ರೆಯ ಶಸ್ತ್ರ ಚಿಕಿತ್ಸಕ ಡಾ.ಸತೀಶ್ ಸೇರಿದಂತೆ ಹಲವರು ಈ ವೇಳೆ ಹಾಜರಿದ್ದರು. ಮೈಸೂರು ರೈಲ್ವೆ ನಿಲ್ದಾಣ ಸೇರಿದಂತೆ ಇತರೆಡೆಯ ಬೂತ್‌ಗಳಲ್ಲಿ ಬೆಳಿಗ್ಗೆಯಿಂದ ಸಂಜೆವರೆಗೆ ನೂರಾರು ಮಕ್ಕಳಿಗೆ ಲಸಿಕೆ ಹಾಕಲಾಯಿತು. ಗ್ರಾಮಾಂತರ ಬಸ್ ನಿಲ್ದಾಣದಲ್ಲಿ ಸ್ಥಾಪಿಸಿದ್ದ ಮೂರು ಬೂತ್‌ಗಳಲ್ಲಿ ವೈದ್ಯ ಸಿಬ್ಬಂದಿ ಸಾವಿರಾರು ಮಕ್ಕಳಿಗೆ ಲಸಿಕೆ ಹಾಕಿದರು. ಅಲ್ಲದೆ ಮೈಸೂರು ಅರಮನೆ, ಮೃಗಾಲಯ ಸೇರಿದಂತೆ ಜನ ಸಂದಣಿ ಹೆಚ್ಚಾಗಿರುವ ಸ್ಥಳಗಳಲ್ಲಿ ಲಸಿಕೆ ಹಾಕಲಾಯಿತು. ಬಹಳಷ್ಟು ಪೋಷಕರು ಸ್ವಯಂ ಪ್ರೇರಣೆಯಿಂದ ಪ್ರಾಥಮಿಕ ಆರೋಗ್ಯ ಕೇಂದ್ರಕ್ಕೆ ಭೇಟಿ ನೀಡಿ ಮಗುವಿಗೆ ಪೋಲಿಯೋ ಲಸಿಕೆ ಹಾಕಿಸಿದರು. ಆದರೆ ಕೆಲವು ಪೋಷಕರಿಗೆ ಪೋಲಿಯೋ ಲಸಿಕೆ ಬಗ್ಗೆ ಮಾಹಿತಿ ಇಲ್ಲದ ಕಾರಣ ರೈಲ್ವೆ ನಿಲ್ದಾಣ, ಬಸ್ ನಿಲ್ದಾಣ ಸೇರಿದಂತೆ ಇತರೆಡೆ ವೈದ್ಯ ಸಿಬ್ಬಂದಿ ಪೋಲಿಯೋ ಲಸಿಕೆ ಬಗ್ಗೆ ಪೋಷಕರಿಗೆ ಮಾಹಿತಿ ನೀಡಿ, ಆ ಮಗುವಿಗೆ ಪೋಲಿಯೋ ಹನಿ ಹಾಕಿದರು.

ಮೈಸೂರು ಚಿತ್ರಮಂದಿರಗಳಲ್ಲಿ

ಪದ್ಮ	(ದೂ: 2521923)
ಪಡೆಯಪ್ಪ (ತ)	4 ಪ್ರದರ್ಶನಗಳು
ವುಡ್‌ಲ್ಯಾಂಡ್ಸ್	(ದೂ: 2422871)
ಅವತಾರ್ 3ಡಿ (ಕ–1 + ಇಂ–2)	3 ಪ್ರದರ್ಶನಗಳು
ಬಾಲಾಜಿ	(ದೂ: 2497199)
ಧುರಂಧರ್ (ಹಿ)	3 ಪ್ರದರ್ಶನಗಳು
ಮಹದೇಶ್ವರ	(ಮೊ:9900820093)
ಡೆವಿಲ್ (ಕ)	4 ಪ್ರದರ್ಶನಗಳು
ಗಾಯಿತ್ರಿ	
ಡೆವಿಲ್ (ಕ)	4 ಪ್ರದರ್ಶನಗಳು
ರಾಜಕಮಲ್	
ಅಖಂಡ–2 (ತೆ)	4 ಪ್ರದರ್ಶನಗಳು
ಸಂಗಂ	
ಡೆವಿಲ್ (ಕ)	3 ಪ್ರದರ್ಶನಗಳು
ಲಿಡೋ	
ಅಖಂಡ–2 (ಕ)	4 ಪ್ರದರ್ಶನಗಳು
ತಿಬ್ಬಾದೇವಿ	
–	–
ಪ್ರಭಾ	
ಕಾಂತಾರ–2 (ಕ)	4 ಪ್ರದರ್ಶನಗಳು

ಬಸವ ಮಾರ್ಗ ಫೌಂಡೇಷನ್ ಉಚಿತ ವಿದ್ಯಾರ್ಥಿನಿಲಯಕ್ಕೆ ಕರ್ನಾಟಕ ಬ್ಯಾಂಕ್‌ನಿಂದ ಸ್ಮಾರ್ಟ್ ಟಿವಿ ಕೊಡುಗೆ



ಬಸವಮಾರ್ಗ ಫೌಂಡೇಷನ್‌ನ ಉಚಿತ ವಿದ್ಯಾರ್ಥಿನಿಲಯಕ್ಕೆ ಕರ್ನಾಟಕ ಬ್ಯಾಂಕ್‌ನಿಂದ 3 ಲಕ್ಷ ರೂ.ಗಳ ಸ್ಮಾರ್ಟ್ ಟಿವಿ ಕೊಡುಗೆ ನೀಡಲಾಯಿತು.

ಮೈಸೂರು, ಡಿ.21(ಎಂಕೆ)– ಮೈಸೂರಿನ ಸರಸ್ವತಿಪುರಂನಲ್ಲಿರುವ ಬಸವ ಮಾರ್ಗ ಫೌಂಡೇಷನ್‌ನ ಉಚಿತ ವಿದ್ಯಾರ್ಥಿನಿಲಯಕ್ಕೆ ಕರ್ನಾಟಕ ಬ್ಯಾಂಕ್ ವತಿಯಿಂದ 3 ಲಕ್ಷ ರೂ.ಗಳ ಸ್ಮಾರ್ಟ್ ಟಿವಿ ಕೊಡುಗೆ ನೀಡಲಾಯಿತು.

ನಿಲಯದ ಆವರಣದಲ್ಲಿ ಆಯೋಜಿಸಿದ್ದ ಸರಳ ಕಾರ್ಯಕ್ರಮದಲ್ಲಿ ಕರ್ನಾಟಕ ಬ್ಯಾಂಕಿನ ಸಹಾಯಕ ಪ್ರಧಾನ ವ್ಯವಸ್ಥಾಪಕ ಡಾ.ಟಿ.ಆರ್.ಅರುಣ್ ಹಾಗೂ ಸಂಕ್ರಾಂತಿ ವೃತ್ತ ಶಾಖೆಯ ವ್ಯವಸ್ಥಾಪಕ ಎನ್.ಅನಿನಾಶ್ ವಿದ್ಯಾರ್ಥಿಗಳ ಸಮ್ಮುಖದಲ್ಲಿ ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು ಅವರಿಗೆ ಸ್ಮಾರ್ಟ್ ಟಿವಿಯನ್ನು ಹಸ್ತಾಂತರಿಸಿದರು.

ಬಳಿಕ ಕರ್ನಾಟಕ ಬ್ಯಾಂಕಿನ ಸಹಾಯಕ ಪ್ರಧಾನ ವ್ಯವಸ್ಥಾಪಕ ಡಾ.ಟಿ.ಆರ್. ಅರುಣ್ ಮಾತನಾಡಿ, ಬ್ಯಾಂಕಿನ ಸಿಎಸ್‌ಆರ್ ನಿಧಿ ಅಡಿಯಲ್ಲಿ ಮಕ್ಕಳಿಗೆ ಸ್ಮಾರ್ಟ್ ಟಿವಿಯನ್ನು ಕೊಡುಗೆಯಾಗಿ ನೀಡಲಾಗಿದೆ. ಈ ಸ್ಮಾರ್ಟ್ ಟಿವಿಗೆ ವಿದ್ವತ್ ಎಂಬ ತಂತ್ರಾಂಶವನ್ನು ಅಳವಡಿಸಲಾಗಿದ್ದು, ಇದು ವಿದ್ಯಾರ್ಥಿಗಳ ವ್ಯಾಸಂಗಕ್ಕೆ ಅನುಕೂಲವಾಗಿದೆ. ವಿದ್ಯಾರ್ಥಿಗಳ ಸ್ಮಾರ್ಟ್ ಟಿವಿಯನ್ನು ಸದ್ಬಳಕೆ ಮಾಡಿಕೊಳ್ಳುವುದರ ಜೊತೆಗೆ ಚೆನ್ನಾಗಿ ಓದಿ ಪೋಷಕರಿಗೆ, ನಿಲಯಕ್ಕೆ ಒಳ್ಳೆಯ ಹೆಸರು ತರುವಂತೆ ಕಿವಿಮಾತು ಹೇಳಿದರು.

ಬಸವಮಾರ್ಗ ಫೌಂಡೇಷನ್ ಸಂಸ್ಥಾಪಕ ಎಸ್.ಬಸವರಾಜು ಮಾತನಾಡಿ, ಮಕ್ಕಳ ಶೈಕ್ಷಣಿಕ ಪ್ರಗತಿಗೆ ಬಸವಮಾರ್ಗ ಸಂಸ್ಥೆ ಎಲ್ಲಾ ರೀತಿಯಲ್ಲೂ ಒತ್ತಾಸೆಯಾಗಿ ನಿಂತಿದೆ. ವಿದ್ಯಾರ್ಥಿಗಳ ಶೈಕ್ಷಣಿಕ ದೃಷ್ಟಿಯಿಂದ ಸ್ಮಾರ್ಟ್ ಟಿವಿಗೆ ಮನವಿ ಮಾಡಿದ್ದರ ಮೇರೆಗೆ ಕರ್ನಾಟಕ ಬ್ಯಾಂಕ್ ಒದಗಿಸಿಕೊಡುವ ಮೂಲಕ ಮಕ್ಕಳ ಕಲಿಕೆಗೆ ಪ್ರೇರಣೆಯನ್ನು ನೀಡಿದೆ ಎಂದು ಶ್ಲಾಘಿಸಿದರು. ಕುಕ್ಕರಹಳ್ಳಿ ಸರ್ಕಾರಿ ಪ್ರಾಥಮಿಕ ಮತ್ತು ಪ್ರೌಢಶಾಲೆ ಮುಖ್ಯ ಶಿಕ್ಷಕ ಆರ್.ಚಂದ್ರು, ಶಿಕ್ಷಕರಾದ ಮಹೇಶ್, ಮಹೇಶ್‌ಕುಮಾರ್, ವಜ್ರಮುನಿ, ಸಾವಿತ್ರಿ, ಭಾರ್ಗವಿ, ವಸಂತ ಲಕ್ಷ್ಮಿ ಮತ್ತಿತರರಿದ್ದರು.

ಸನಾತನ ಧರ್ಮದ ಶ್ರೇಷ್ಠತೆ ಬಿಂಬಿಸುವ ಶಿವಾರ್ಚಕರು ಸಂಸ್ಕೃತಿಯ ಕೊಂಡಿ

ಶಿವಾರ್ಚಕರ ಪ್ರಗತಿಪರ ಸಂಘದ ಕನ್ನಡ ರಾಜ್ಯೋತ್ಸವದಲ್ಲಿ ರಘು ಅಭಿಪ್ರಾಯ



ಸುವರ್ಣ ರಾಜ್ಯ ಶಿವಾರ್ಚಕರ ಪ್ರಗತಿಪರ ಸಂಘದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಕಾರ್ಯಕ್ರಮವನ್ನು ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಉದ್ಘಾಟಿಸಿದರು.

ಮೈಸೂರು, ಡಿ.21(ಜಿಎ)–ಶಿವಾರ್ಚಕರು ಸಂಸ್ಕೃತಿಯ ಕೊಂಡಿ, ಸನಾತನ ಧರ್ಮದ ಶ್ರೇಷ್ಠತೆಯನ್ನು ತಮ್ಮ ವೃತ್ತಿಯ ಮೂಲಕ ಜನರು ಹಾಗೂ ಧಾರ್ಮಿಕ ಶ್ರದ್ಧೆಯ ನಡುವೆ ಸೇತುವೆಯಂತೆ ಕೆಲಸ ಮಾಡುತ್ತಿದ್ದಾರೆ ಎಂದು ಬಿಜೆಪಿ ರಾಜ್ಯ ಹಿಂದುಳಿದ ವರ್ಗಗಳ ಮೋರ್ಚಾ ಅಧ್ಯಕ್ಷ ಆರ್.ರಘು ಅಭಿಪ್ರಾಯಪಟ್ಟರು.

ಮೈಸೂರಿನ ದಿ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಸುವರ್ಣ ರಾಜ್ಯ ಶಿವಾರ್ಚಕರ ಪ್ರಗತಿಪರ ಸಂಘದ ವತಿಯಿಂದ ಆಯೋಜಿಸಿದ್ದ ಕನ್ನಡ ರಾಜ್ಯೋತ್ಸವ ಹಾಗೂ ಸಾಧಕರಿಗೆ ಸನ್ಮಾನ, ಪ್ರತಿಭಾ ಪುರಸ್ಕಾರ ಸಮಾರಂಭದಲ್ಲಿ ಮಾತನಾಡಿದ ಅವರು, ಸಂಸ್ಕೃತಿಯ ಭಾಗವಾಗಿರುವ ಇವರನ್ನು ಸರ್ಕಾರ ವಿಶೇಷವಾಗಿ ಪರಿಗಣಿಸಬೇಕು. ಸಂಖ್ಯೆಯಲ್ಲಿ ಕಡಿಮೆ ಇರುವುದರಿಂದ ಇವರು ಮೀಸಲಾತಿಗೆ ಅತ್ಯಂತ ಅರ್ಹರು. ಅತೀ ಹಿಂದುಳಿದ ವರ್ಗಕ್ಕೆ ಸಿಗುವ ಮೀಸಲಾತಿ ಇವರಿಗೂ ಸಿಗಬೇಕು ಎಂದರು.


ರಾಜಕೀಯ, ಆರ್ಥಿಕ, ಸಾಮಾಜಿಕವಾಗಿ ಹಿಂದುಳಿದಿರುವ ಶಿವಾರ್ಚಕರು ಸಂಘಟಿತರಾಗುವ ಮೂಲಕ ನಿಮ್ಮ ಹಕ್ಕುಗಳಿಗೆ ಹೋರಾಡಬೇಕು. ಈ ಸಮುದಾಯ ಕೂಡ ಸಂಘಟಿತರಾಗಬೇಕು. ರಾಜಕೀಯವಾಗಿ ಅಲಕ್ಷಿತರು ಎಂಬ ಭಾವನೆ ಬೇಡ. ಕಡಿಮೆ ಸಂಖ್ಯೆಯಲ್ಲಿ ಮತದಾರರಿದ್ದರೂ ಪ್ರಜಾಪ್ರಭುತ್ವದಲ್ಲಿ ಒಂದು ಮತ, ನೂರು ಮತಗಳು, ಒಬ್ಬ ಶಾಸಕ, ಸಂಸದರ ಹಣೆಬರಹ ಬರೆಯಬಲ್ಲದು. ಇದನ್ನು ಅರಿತು ನೀವು ಸಂಘಟಿತರಾಗಬೇಕು ಕರೆ ನೀಡಿದರು.

ಕಾರ್ಯಕ್ರಮದಲ್ಲಿ ಹಾಸ್ಯನಟ ವೈಜನಾಥ್ ಬೀರಾದಾರ್ ಅವರಿಗೆ 'ಹಾಸ್ಯಸಿಂಹ' ಎಂಬ ಬಿರುದು ಪ್ರದಾನ ಮಾಡಲಾಯಿತು. ವಿವಿಧ ಕ್ಷೇತ್ರಗಳಲ್ಲಿ ಸಾಧಕರನ್ನು ಸನ್ಮಾನಿಸಲಾಯಿತು. ಎಸ್‌ಎಸ್‌ಎಲ್‌ಸಿ, ಪಿಯುಸಿಯಲ್ಲಿ ಹೆಚ್ಚು ಅಂಕಗಳಿಸಿದ್ದ ಪ್ರತಿಭಾವಂತ ಮಕ್ಕಳಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು. ಆಲಗೂಡು ಶಿವಾರ್ಚಕ ನಿಂಗಪ್ಪ ದಿವ್ಯಸಾನ್ನಿಧ್ಯ ವಹಿಸಿದ್ದರು. ಸಂಸ್ಥೆ ಅಧ್ಯಕ್ಷ ಬನ್ನೂರು ನಾಗರಾಜು, ಮಹೇಶ್ ನಾಯಕ್, ಕುಮಾರಸ್ವಾಮಿ, ಪ್ರಭು ಸೂರ್ಯ, ಮಧುಸೂದನ್ ಇದ್ದರು.

ನ್ಯಾಯಕ್ಕೆ ಸಿಕ್ಕ ಜಯ

ಮೈಸೂರು: ದೇಶದ ಸ್ವಾತಂತ್ರ್ಯ ಹೋರಾಟ ವೇಳೆ ನೆಹರು ಅವರು ಹುಟ್ಟು ಹಾಕಿದ್ದ ನ್ಯಾಷನಲ್ ಹೆರಾಲ್ಡ್ ಪತ್ರಿಕೆಗೆ ಸಂಬಂಧಿಸಿದಂತೆ ಸತ್ಯಾಂಶ ಇಲ್ಲದೇ ಪ್ರಕರಣ ದಾಖಲು ಮಾಡಿರುವುದು ಖಂಡನೀಯ. ಆರೋಪ ಪಟ್ಟಿಯನ್ನೆ ನ್ಯಾಯಾಲಯವು ತಿರಸ್ಕರಿಸುವ ಮೂಲಕ ಸತ್ಯಕ್ಕೆ ಜಯ ಸಿಕ್ಕಿದಂತಾಗಿದೆ. ತನ್ಮೂಲಕ ಬಿಜೆಪಿ ಪಿತೂರಿ ಬಯಲಾಗಿದೆ ಎಂದು ಇಂದಿರಾ ಗಾಂಧಿ ಬ್ಲಾಕ್ ಅಧ್ಯಕ್ಷ ಮಂಚೇಗೌಡನ ಕೊಪ್ಪಲು ರವಿ ತಿಳಿಸಿದ್ದಾರೆ. ಈ ಕುರಿತು ಪ್ರಕಟಣೆ ನೀಡಿರುವ ಅವರು, 1937ರಲ್ಲಿ ನೆಹರು ಅವರು ಈ ಪತ್ರಿಕೆ ಹುಟ್ಟು ಹಾಕಿದ್ದರು. ನಂತರ ಯಂಗ್ ಇಂಡಿಯಾ ಸ್ವಾಮ್ಯಕ್ಕೆ ಒಳಪಟ್ಟಿತು. ಸುಖಾಸುಮ್ಮನೇ ಬಿಜೆಪಿ ಹಾಗೂ ಪ್ರಧಾನಿ ನರೇಂದ್ರ ಮೋದಿ ಅಧಿಕಾರ ದುರುಪಯೋಗಪಡಿಸಿಕೊಂಡು ಇಡಿ ತನಿಖೆ ಮಾಡಿಸಿತು. ಈಗ ತನಿಖಾ ಸಂಸ್ಥೆ ಸಲ್ಲಿಸಿದ್ದ ಆರೋಪ ಪಟ್ಟಿ ಕೋರ್ಟ್ ತಿರಸ್ಕಾರ ಮಾಡಿದೆ. ಸುಖಾಸುಮ್ಮನೆ ಸೋನಿಯಾ ಗಾಂಧಿ, ರಾಹುಲ್ ಗಾಂಧಿ ಅವರ ತೇಜೋವಧೆ ಮಾಡಿದ್ದಾರೆ. ಬಿಜೆಪಿ ಅಧಿಕಾರ ದುರುಪಯೋಗ ದೇಶಕ್ಕೆ ಗೊತ್ತಾಗಿದೆ. ಕೊನೆಗೂ ಸತ್ಯಕ್ಕೆ ಜಯ ಸಿಕ್ಕಿದೆ ಎಂದು ಹೇಳಿದ್ದಾರೆ.

ಸನ್ನಿಧಾನಂಗಳ ಸನ್ನಿಧಿಯಲ್ಲಿ 'ಮೈಸೂರು ಮಿತ್ರ'



ಶನಿವಾರ ಮೈಸೂರಿನ ಅರಮನೆ ಆವರಣದಲ್ಲಿ ಜರುಗಿದ ಲೋಕ ಕಲ್ಯಾಣಾರ್ಥವಾಗಿ ಜಗದ್ಗುರು ಶ್ರೀ ಶಂಕರಾಚಾರ್ಯರು ರಚಿಸಿದ ಶ್ಲೋಕದ ಸ್ತುತಿಶಂಕರ ಮಹಾಸಮರ್ಪಣೆ ಕಾರ್ಯಕ್ರಮದ ಸಂದರ್ಭದಲ್ಲಿ 'ಮೈಸೂರು ಮಿತ್ರ' ಪತ್ರಿಕೆಯಲ್ಲಿ ಪ್ರಕಟವಾದ ಅಂಕಣವನ್ನು ಶೃಂಗೇರಿ ಶ್ರೀ ಶಾರದಾ ಪೀಠದ ಜಗದ್ಗುರು ಶ್ರೀ ಶ್ರೀ ವಿಧುಶೇಖರ ಭಾರತೀ ಸನ್ನಿಧಾನಂಗಳವರಿಗೆ ಅಂಕಣಕಾರ ನಂ ಶ್ರೀಕಂಠ ಕುಮಾರ್ ಸಮರ್ಪಿಸಿದರು.

ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡರಿಗೆ ಹುಟ್ಟುಹಬ್ಬದ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಮುಡಾ ಮಾಜಿ ಅಧ್ಯಕ್ಷ ಕೆ.ಮರೀಗೌಡರನ್ನು ಗ್ರಾಪಂ ಮಾಜಿ ಅಧ್ಯಕ್ಷ ದೊಡ್ಡಹುಂಡಿ ಸೋಮಣ್ಣ, ಸಿ.ಚಿಕ್ಕಣ್ಣ, ಮೈಮುಲ್ ನಿರ್ದೇಶಕರಾದ ಸಿ.ಗುರುಸ್ವಾಮಿ, ಧನಗಳ್ಳಿ ಬಸವರಾಜು, ಬಿಎಸ್‌ಎನ್‌ಎಲ್ ಮಾದೇಗೌಡ, ಕೆ.ಸಾಲುಂಡಿ ಮಹದೇವು, ಗೋಪಾಲಪುರದ ರವಿಶಂಕರ್, ಬಸವರಾಜು, ಶಂಕರ್, ರಾಜೇಗೌಡ ಅಭಿನಂದಿಸಿ, ಶುಭ ಕೋರಿದರು.

ಪಲ್ಸ್ ಪೋಲಿಯೋ ಅಭಿಯಾನ



ಮೈಸೂರು ತಾಲೂಕು ಜಯಪುರ ಸಮುದಾಯ ಆರೋಗ್ಯ ಕೇಂದ್ರದಲ್ಲಿ ಪಲ್ಸ್ ಪೋಲಿಯೋ ಲಸಿಕೆ ಹಾಕುವ ಅಭಿಯಾನಕ್ಕೆ ಸಮಾಜ ಸೇವಕ ಎಸ್.ಶ್ರೀಕಾಂತ್ ಚಾಲನೆ ನೀಡಿದರು. ಈ ವೇಳೆ ಆಡಳಿತ ವೈದ್ಯಾಧಿಕಾರಿ ಡಾ.ಗಾಯಿತ್ರಿ, ಹಿರಿಯ ವೈದ್ಯಾಧಿಕಾರಿ ಡಾ.ಮಹದೇವಪ್ರಸಾದ್, ಸ್ತ್ರೀ ಮತ್ತು ಪ್ರಸೂತಿ ತಜ್ಞರಾದ ಡಾ.ಪ್ರತಿಭಾ ನಾಯಕ್, ಮಕ್ಕಳ ತಜ್ಞರು ಡಾ.ಶ್ರೀಚಂದ್, ದಂತ ವೈದ್ಯಾಧಿಕಾರಿ ಡಾ.ಚೈತ್ರಶ್ರೀ, ಆಶಾ ಮತ್ತು ಅಂಗನವಾಡಿ ಕಾರ್ಯಕರ್ತರು, ಆಸ್ಪತ್ರೆ ಸಿಬ್ಬಂದಿ ಉಪಸ್ಥಿತರಿದ್ದರು.

ಶಿಕ್ಷಣ ಸಂವಾದ: ಮೈಸೂರು–ಕೊಡಗು ಶೈಕ್ಷಣಿಕವಾಗಿ ಮಾದರಿ ಜಿಲ್ಲೆಗಳಾಗಿಸಲು ಯುವಶಕ್ತಿ, ಸಂಘ–ಸಂಸ್ಥೆಗಳು ಸಹಕರಿಸಿ

● ಸಂಸದ ಯದುವೀರ್ ಒಡೆಯರ್ ಕರೆ ● ಶಿಕ್ಷಣ ನವಚೇತನ, ಯುವ ಹೆಜ್ಜೆ ಪ್ರಶಸ್ತಿ ಪ್ರದಾನ

ಮೈಸೂರು, ಡಿ.21(ಎಂಕೆ)– ಶೈಕ್ಷಣಿಕ ಕ್ಷೇತ್ರದಲ್ಲಿ ಮೈಸೂರು ಮತ್ತು ಕೊಡಗು ಜಿಲ್ಲೆಯಲ್ಲಿ ಮಾದರಿ ಜಿಲ್ಲೆಗಳನ್ನಾಗಿ ಮಾಡಲು ಯುವಶಕ್ತಿ ಹಾಗೂ ಸ್ಥಳಿಯ ಸಂಸ್ಥೆಗಳು ಒಗ್ಗೂಡುವುದು ಮುಖ್ಯವಾಗಿದ್ದು, ಮಕ್ಕಳ ಧ್ವನಿಗೆ ಮಾನ್ಯತೆ ದೊರೆಯಬೇಕಿದೆ ಎಂದು ಸಂಸದ ಯದುವೀರ್ ಕೃಷ್ಣದತ್ತ ಚಾಮರಾಜ ಒಡೆಯರ್ ಹೇಳಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಶಿಕ್ಷಾಗ್ರಹ ಮೂವ್‌ಮೆಂಟ್‌ನಿಂದ ಆಯೋಜಿಸಿದ್ದ 'ಶಿಕ್ಷಣ ಸಂವಾದ: ಮೈಸೂರು ಮತ್ತು ಕೊಡಗು' ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಗುವಿನ ಕಲಿಕಾ ಯಶಸ್ಸಿಗೆ ಪೂರಕವಾದ ಶೈಕ್ಷಣಿಕ ಪರಿಸರ ಒದಗಿಸುವುದು ಸಮಾಜದ ಕರ್ತವ್ಯ ಎಂದು ತಿಳಿಸಿದರು.



ಮೈಸೂರು ವಿವಿ ರಾಣಿಬಹದ್ದೂರ್ ಸಭಾಂಗಣದಲ್ಲಿ ಶಿಕ್ಷಾಗ್ರಹ ಮೂವ್‌ಮೆಂಟ್ ವತಿಯಿಂದ 'ಶಿಕ್ಷಣ ಸಂವಾದ: ಮೈಸೂರು ಮತ್ತು ಕೊಡಗು' ಶೈಕ್ಷಣಿಕ ಕಾರ್ಯಕ್ರಮ ಭಾನುವಾರ ನಡೆಯಿತು.

ಶಿಕ್ಷಣ ಸಂವಾದವು ಸಾಮೂಹಿಕ ದೃಷ್ಟಿಕೋನವನ್ನು ರೂಪಿಸುವ ಮೊದಲ ಹೆಜ್ಜೆ. ಇದಕ್ಕಾಗಿ ವೈಯಕ್ತಿಕ ಪ್ರಯತ್ನಗಳನ್ನು ಮೀರಿ, ಸಾಮೂಹಿಕ ಹೊಣೆಗಾರಿಕೆಯೊಂದಿಗೆ ಎಲ್ಲರೂ ಕೂಡಿ ಕಾರ್ಯನಿರ್ವಹಿಸಬೇಕಾಗಿದೆ. ಸರ್ಕಾರ, ಸಮುದಾಯ ಹಾಗೂ ಎನ್‌ಜಿಓ ಸಂಸ್ಥೆಗಳು ಪರಸ್ಪರ ಸಹಕರಿಸಬೇಕು ಎಂದರು.

ಪ್ರತಿಯೊಂದು ಮಗುವೂ ಹುಟ್ಟಿನಿಂದ ವೃತ್ತಿ ಜೀವನದವರೆಗೆ ಬೆಳೆಯಲು, ಕಲಿಯಲು ಮತ್ತು ಯಶಸ್ಸು ಸಾಧಿಸಲು ಅನುಕೂಲಕರವಾದ ಶೈಕ್ಷಣಿಕ ಪರಿಸರವನ್ನು ನಿರ್ಮಿಸಲು ಅಗತ್ಯವಾದ ಅಡಿಪಾಯ ಹಾಗೂ ಹಿನ್ನಲೆಯನ್ನು ಮೈಸೂರು ಮತ್ತು ಕೊಡಗು ಜಿಲ್ಲೆ ಒಳಗೊಂಡಿದೆ. ಈ ಎರಡು ಜಿಲ್ಲೆಯು ಪರಂಪರೆ ಹಾಗೂ ಪ್ರಕೃತಿಯೊಂದಿಗೆ ನಿಕಟ ಸಂಬಂಧ ಹೊಂದಿವೆ ಎಂದು ತಿಳಿಸಿದರು. ಇದೇ ವೇಳೆ ಶಿಕ್ಷಾಗ್ರಹ ಮೂವ್‌ಮೆಂಟ್ ವತಿಯಿಂದ ಶಿಕ್ಷಣ ಕ್ಷೇತ್ರದಲ್ಲಿ ಉತ್ತಮ ಸಾಧನೆ ಮಾಡಿದವರಿಗೆ 'ಶಿಕ್ಷಣ ನವಚೇತನ ಪ್ರಶಸ್ತಿ' ಪ್ರದಾನ ಹಾಗೂ 'ಯುವ ಹೆಜ್ಜೆ' ಸ್ಪರ್ಧೆಯ ವಿಜೇತರಿಗೆ ಪ್ರಶಸ್ತಿ ಪತ್ರ ನೀಡಿ ಅಭಿನಂದಿಸಲಾಯಿತು. ಜಿಲ್ಲಾ ಶೈಕ್ಷಣಿಕ ಮತ್ತು ತರಬೇತಿ ಸಂಸ್ಥೆ ಉಪ ನಿರ್ದೇಶಕ ನಾಗರಾಜ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಉಪ ನಿರ್ದೇಶಕ ಬಸವರಾಜು, ಒಎಸ್‌ಎಟಿ ಸಂಸ್ಥೆಯ ಸುಧೀರ್ ಉಳ್ಳಮನೆ ನಿಮಾನ್ಸ್, ಸಂಪನ್ಮೂಲ ವ್ಯಕ್ತಿ ಡಾ.ಚೈತ್ರಾ, ಶಿಕ್ಷಾಗೃಹದ ಸಂಸ್ಥಾಪಕಿ ಖುಷ್ಬೂ ಅವಸ್ಥಿ ಮತ್ತಿತರರಿದ್ದರು.

> "ನಮ್ಮ ಸಂಸ್ಕೃತಿ ಮತ್ತು ಪರಂಪರೆಗೆ ಹೊರತಾದ ಶಿಕ್ಷಣವು ಮಕ್ಕಳ ಜೀವನಕ್ಕೆ ನೆಲೆಗಟ್ಟನ್ನು ಒದಗಿಸುವುದಿಲ್ಲ. ಪರಂಪರೆಯನ್ನು ಬದಿಗಿರಿಸುವ ಆಧುನಿಕ ಶಿಕ್ಷಣ ಪದ್ಧತಿಯು ಅನಾನುಕೂಲ ಸೃಷ್ಟಿಸುತ್ತದೆ. ಆದ್ದರಿಂದಲೇ ವಿದೇಶಗಳಲ್ಲಿ ತಮ್ಮ ಸಂಸ್ಕೃತಿಯತ್ತ ಮಕ್ಕಳನ್ನು ಮರಳಿಸುವ ಕೆಲಸ ನಡೆಯುತ್ತಿದೆ.
> –ಯದುವೀರ್ ಒಡೆಯರ್, ಸಂಸದ

ಅನ್ನದಾನಕ್ಕೆ ಚಾಲನೆ...



ಮೈಸೂರಿನ ಜನತಾನಗರದ ಗಣೇಶ್ ಭಂಡಾರ್ 1ನೇ ಕ್ರಾಸ್‌ನಲ್ಲಿ ಜರುಗಿದ ಸಂತಶ್ರೇಷ್ಠ ಭಕ್ತ ಕನಕದಾಸರ ಜಯಂತ್ಯುತ್ಸವ ಮತ್ತು ಅನ್ನಸಂತರ್ಪಣೆ ಕಾರ್ಯಕ್ರಮಕ್ಕೆ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಚಾಲನೆ ನೀಡಿದರು. ಈ ವೇಳೆ ಅಧ್ಯಕ್ಷರಾದ ಬೀರೇಗೌಡ, ಮಹದೇವಯ್ಯ, ಎಸ್.ಮಹದೇವು (ಲಕ್ಷ್ಮಯ್ಯ), ರವಿಕುಮಾರ್ ಮೊಳ್ಳಯ್ಯ, ರಾಜು, ಮೀಸೆ ಮರಿಯಪ್ಪ, ಗುರುಮಲ್ಲು, ಯುವ ಮಿತ್ರರು ಉಪಸ್ಥಿತರಿದ್ದರು.

ಬೀದಿನಾಯಿಗಳ ಆಹಾರ ಪೂರೈಸಲು ಅರ್ಜಿ ಆಹ್ವಾನ

ಮೈಸೂರು,ಡಿ.21– ಹೂಟಗಳ್ಳಿ ನಗರಸಭೆ ವ್ಯಾಪ್ತಿಯಲ್ಲಿ ಬೀದಿ ನಾಯಿಗಳನ್ನು ದತ್ತು ಪಡೆದು ಅವುಗಳನ್ನು ಪೋಷಣೆ ಮಾಡಲು ಇಚ್ಛಿಸುವವರು ಪ್ರಾಣಿಗಳ ಸಂರಕ್ಷಣೆ ಸಂಕಲ್ಪ ಹೊಂದಿರುವವರು, ಪ್ರಾಣಿಗಳ ಮೇಲೆ ದಯೆ ಇರುವವರು ಬೀದಿನಾಯಿಗಳನ್ನು ದತ್ತು ಪಡೆಯಲು ಹಾಗೂ ಆಶ್ರಯ ತಾಣದಲ್ಲಿರುವ ಬೀದಿ ನಾಯಿಗಳಿಗೆ ಆಹಾರ ಪೂರೈಸಲು ಇಚ್ಛಿಸುವವರು ಹೆಚ್ಚಿನ ಮಾಹಿತಿಗಾಗಿ ಕಚೇರಿ ವೇಳೆಯಲ್ಲಿ ಹೂಟಗಳ್ಳಿ ನಗರಸಭೆಯ ಆರೋಗ್ಯ ಶಾಖೆಯಲ್ಲಿ ಸಂಪರ್ಕಿಸಬಹುದು.

ಯೋಗಾಭ್ಯಾಸದಿಂದ ಅನಾರೋಗ್ಯ ಸಮಸ್ಯೆ ದೂರ

ಶ್ರೀ ಶಿರಡಿ ಸಾಯಿ ಭಿಕ್ಷಾ ಕೇಂದ್ರದ ಸಂಸ್ಥಾಪಕ ಲಕ್ಷ್ಮೀ ಶ್ರೀನಿವಾಸ ಗುರೂಜಿ ಅಭಿಮತ



ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ನಡೆದ ವಿಶ್ವಮಾನವ ಯೋಗ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವವನ್ನು ಬೆಂಗಳೂರು ಶ್ರೀ ಶಿರಡಿ ಸಾಯಿ ಭಿಕ್ಷಾ ಕೇಂದ್ರದ ಸಂಸ್ಥಾಪಕರಾದ ಡಾ.ಲಕ್ಷ್ಮೀ ಶ್ರೀನಿವಾಸ ಗುರೂಜಿ ಉದ್ಘಾಟಿಸಿದರು.



ರಾಷ್ಟ್ರೀಯ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್‌ನಲ್ಲಿ ವಿವೇಕಾನಂದ ಯೋಗ ಕೇಂದ್ರದ ವಿದ್ಯಾರ್ಥಿಗಳು ವಿವಿಧ ಭಂಗಿ ಪ್ರದರ್ಶಿಸಿದರು.

ಮೈಸೂರು, ಡಿ.21(ಎಂಟಿವೈ)– ಯೋಗಾಭ್ಯಾಸ ಹಾಗೂ ಪ್ರಾಣಾಯಾಮದಿಂದ ಅನಾರೋಗ್ಯ ಸಮಸ್ಯೆಗಳಿಂದ ದೂರವಿರಬಹುದು ಎಂದು ಬೆಂಗಳೂರು ಶ್ರೀ ಶಿರಡಿ ಸಾಯಿ ಭಿಕ್ಷಾ ಕೇಂದ್ರದ ಸಂಸ್ಥಾಪಕ ಲಕ್ಷ್ಮೀ ಶ್ರೀನಿವಾಸ ಗುರೂಜಿ ಅಭಿಪ್ರಾಯಪಟ್ಟಿದ್ದಾರೆ.

ಮೈಸೂರಿನ ಜಗನ್ಮೋಹನ ಅರಮನೆ ಸಭಾಂಗಣದಲ್ಲಿ ಭಾನುವಾರ ನಡೆದ ವಿಶ್ವ ಮಾನವ ಯೋಗ ಶಿಕ್ಷಣ ಸಂಸ್ಥೆಯ ರಜತ ಮಹೋತ್ಸವ, ರಾಷ್ಟ್ರೀಯ ಯೋಗಾಸನ ಕ್ರೀಡಾ ಚಾಂಪಿಯನ್‌ಶಿಪ್ ಸ್ಪರ್ಧೆಗೆ ಚಾಲನೆ ನೀಡಿ ಮಾತನಾಡಿದ ಅವರು, ಯೋಗ ಮಾಡುವುದಕ್ಕೆ ಯಾವುದೇ ಖರ್ಚು ಮಾಡಬೇಕಾಗಿಲ್ಲ. ಹಣ ವ್ಯಯ ಮಾಡದೇ ಯೋಗ ಮತ್ತು ಪ್ರಾಣಾಯಾಮ ಮಾಡಬಹುದು. ಮಾನವರನ್ನು ಕಾಡುವ ಅನೇಕ ರೋಗಗಳಿಂದ ಪಾರಾಗಲು ಯೋಗ ಪ್ರಮುಖ ಅಸ್ತ್ರವಂತೆ ಇದೆ ಎಂದರು.

ಈ ಹಿಂದೆ ಜನರನ್ನು ಕಾಲರಾ, ದಡಾರ, ಸಿಡುಬು ಹಾಗೂ ಇನ್ನಿತರ ರೋಗಗಳು ಕಾಡುತ್ತಿದ್ದವು. ಆಗ ಸಾಮಾನ್ಯವಾಗಿ ಪೂಜೆ ಮಾಡಿದರೆ ಹೋಗುತ್ತದೆ ಎಂದು ಹೇಳುತ್ತಿದ್ದರು. ಇನ್ನೂ ಕೆಲವರು ಆಗಲೂ ಯೋಗ ಮಾಡಿ, ದೈಹಿಕ ಕಸರತ್ತು ಮಾಡಿ ಎಂದು ಸೂಚಿಸುತ್ತಿದ್ದರು. ಆದರೆ ಈಗ ಯೋಗ ಮಾಡಿದರೆ ರೋಗಗಳಿಂದ ದೂರ ಇರಬಹುದು. ಆಸ್ಪತ್ರೆಗಳಿಗೆ ಲಕ್ಷಾಂತರ ರೂ. ಕಟ್ಟುವುದನ್ನು ತಡೆಯಬಹುದು ಎಂದು ತಿಳಿಸಿದರು.

ಮೈಸೂರಿನಲ್ಲಿ ರಾಜರ ಕಾಲದಿಂದಲೂ ಯೋಗಕ್ಕೆ ಪ್ರೋತ್ಸಾಹ ಸಿಗುತ್ತಿದೆ. ಬಿಕೆಎಸ್ ಅಯ್ಯಂಗಾರ್, ಕೃಷ್ಣಮಾಚಾರ್ ಹಾಗೂ ಇನ್ನಿತರರು ಯೋಗವನ್ನು ಬೆಳೆಸಿದರು. ವಿದೇಶಗಳಲ್ಲೂ ಯೋಗಕ್ಕೆ ಬೇಡಿಕೆ ಬಂದಿದೆ. ನಮ್ಮಲ್ಲಿ ಯೋಗ ಮರೆಯುತ್ತಿದ್ದಾರೆ. ಪ್ರತಿಯೊಂದು ಮನೆಯಲ್ಲೂ ಒಬ್ಬ ಯೋಗಪಟು ಇರಬೇಕು. ಅದಕ್ಕಾಗಿ ವ್ಯಾಪಕ ಯೋಗ ಪ್ರಚಾರ ಮಾಡಬೇಕು ಎಂದು ಸಲಹೆ ನೀಡಿದರು.

ಹಿರಿಯ ಪತ್ರಕರ್ತ ಅಂಶಿ ಪ್ರಸನ್ನ ಕುಮಾರ್ ಮಾತನಾಡಿ, ಮೈಸೂರು ಯೋಗಕ್ಕೆ ಹೆಸರುವಾಸಿ. ಇದೀಗ ಅಂತಾರಾಷ್ಟ್ರೀಯ ಯೋಗ ದಿನ ಆಚರಿಸುವುದರೊಂದಿಗೆ ವಿದೇಶಗಳಲ್ಲೂ ಜನಪ್ರಿಯವಾಗಿದೆ ಎಂದರು. ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಉದ್ಯಮಿ ಗೋವಿಂದೇಗೌಡ ಮಾತನಾಡಿ, ತಮಗೆ ಯೋಗದಿಂದ ಮಧುಮೇಹ ನಿಯಂತ್ರಣಕ್ಕೆ ಬಂದಿದೆ. ಆದ್ದರಿಂದ ಪ್ರತಿಯೊಬ್ಬರೂ ಯೋಗಾಭ್ಯಾಸ ಮಾಡಬೇಕು ಎಂದು ಮನವಿ ಮಾಡಿದರು.

ಈ ಸಂದರ್ಭದಲ್ಲಿ ಜಿಎಸ್‌ಎಸ್ ಪ್ರತಿಷ್ಠಾನ ಸಂಸ್ಥಾಪಕ ಶ್ರೀಹರಿ ದ್ವಾರಕನಾಥ್, ಸಿಪಿಸಿ ಪಾಲಿಟೆಕ್ನಿಕ್ ನಿವೃತ್ತ ಪ್ರಾಂಶುಪಾಲ ಎಸ್.ಕೆ. ರಾಜೇಗೌಡ, ವಿವೇಕಾನಂದ ಯೋಗ ಶಿಕ್ಷಣ ಮತ್ತು ಸಂಶೋಧನಾ ಸಂಸ್ಥೆಯ ಅಧ್ಯಕ್ಷ ಪಿ.ಎನ್.ಗಣೇಶ್ ಕುಮಾರ್, ಮೈಸೂರು ಯೋಗ ಒಕ್ಕೂಟದ ಗೌರವಾಧ್ಯಕ್ಷ ಟಿ. ಜಲೇಂದ್ರಕುಮಾರ್, ಕಾರ್ಯಾಧ್ಯಕ್ಷ ಬಿ.ಪಿ. ಮೂರ್ತಿ ಗೋಪಾಲರಾಜು ಮುಖ್ಯ ಅತಿಥಿಗಳಾಗಿದ್ದರು. ಹಿಮಾಲಯ ಫೌಂಡೇಷನ್ ಅಧ್ಯಕ್ಷ ಎನ್.ಅನಂತ ಸೇರಿದಂತೆ ವಿವಿಧ ಯೋಗ ಸಂಸ್ಥೆಗಳ ಮುಖಂಡರು ಪಾಲ್ಗೊಂಡಿದ್ದರು. ಇದೇ ವೇಳೆ ವಿವೇಕಾನಂದ ಯೋಗ ಸಂಸ್ಥೆಯ ವಿದ್ಯಾರ್ಥಿಗಳು ಅದ್ಭುತವಾಗಿ ಯೋಗಾಸನದ ವಿವಿಧ ಭಂಗಿ ಹಾಗೂ ನೃತ್ಯ ಪ್ರದರ್ಶಿಸಿ, ಸಭಿಕರ ಮೆಚ್ಚುಗೆಗೆ ಪಾತ್ರರಾದರು.

ಅಪ್ರಾಪ್ತ ಬಾಲಕಿಯ ಅಪಹರಣ, ಅತ್ಯಾಚಾರ ಪ್ರಕರಣ

ಸ್ವಯಂಘೋಷಿತ 'ಹಠಯೋಗಿ' ಸ್ವಾಮಿಗೆ 35 ವರ್ಷ ಜೈಲು ಶಿಕ್ಷೆ; 1 ಲಕ್ಷ ದಂಡ



ಬೆಳಗಾವಿ: ಮಕ್ಕಳ ಮೇಲಿನ ಅಪರಾಧಗಳಿಗೆ ಶೂನ್ಯ ಸಹಿಷ್ಣುತೆಯನ್ನು ಒತ್ತಿ ಹೇಳುವ ಪ್ರಬಲ ತೀರ್ಪಿನಲ್ಲಿ, ಬೆಳಗಾವಿಯ ವಿಶೇಷ ಪೋಕ್ಸೋ ನ್ಯಾಯಾಲಯ ಆಧ್ಯಾತ್ಮಿಕ ವ್ಯಕ್ತಿ 'ಹಠಯೋಗಿ ಲೋಕೇಶ್ವರ ಮಹಾಸ್ವಾಮಿ' ಎಂದು ಹೇಳಿಕೊಂಡ 30 ವರ್ಷದ ವ್ಯಕ್ತಿಗೆ ಅಪ್ರಾಪ್ತ ಬಾಲಕಿಯ ಅಪಹರಣ ಮತ್ತು ಸರಣಿ ಅತ್ಯಾಚಾರಕ್ಕಾಗಿ 35 ವರ್ಷಗಳ ಕಠಿಣ ಜೈಲು ಶಿಕ್ಷೆಯನ್ನು ವಿಧಿಸಿದೆ. ಅಲ್ಲದೆ ಕೋರ್ಟ್, 1 ಲಕ್ಷ ದಂಡವನ್ನು ಸಹ ವಿಧಿಸಿದೆ.

ಕಲಬುರಗಿ ಜಿಲ್ಲೆಯ ಚಿತ್ತಾಪುರದ ಮೂಲದ ಲೋಕೇಶ್ವರ ಸಾಬಣ್ಣ ಜಂಬಗಿ (30) ಎಂಬಾತನನ್ನು ಲೈಂಗಿಕ ಅಪರಾಧಗಳಿಂದ ಮಕ್ಕಳ ರಕ್ಷಣೆ (ಪೋಕ್ಸೋ) ಕಾಯ್ದೆ ಮತ್ತು ಭಾರತೀಯ ದಂಡ ಸಂಹಿತೆ (ಐಪಿಸಿ)ಯ ಬಹು ಕಠಿಣ ವಿಭಾಗಗಳ ಅಡಿಯಲ್ಲಿ ತಪ್ಪಿತಸ್ಥನೆಂದು ಘೋಷಿಸಲಾಗಿದೆ.

ನ್ಯಾಯಾಧೀಶ ಸಿ.ಎಂ. ಪುಷ್ಪಲತಾ ನೇತೃತ್ವದ ಪೀಠ, ಸಂತ್ರಸ್ತೆ ಅಪ್ರಾಪ್ತ ವಯಸ್ಕಳೆಂದು ಸಂಪೂರ್ಣವಾಗಿ ತಿಳಿದಿದ್ದ ಆರೋಪಿ ಮೇ 13, 2025 ರಂದು ಅವಳನ್ನು ಮನೆಗೆ ಬಿಡುವ ಸುಳ್ಳು ನೆಪದಲ್ಲಿ ತನ್ನ ಕಾರಿನಲ್ಲಿ ಕರೆದುಕೊಂಡು ಹೋಗಿದ್ದಾನೆ ಎಂದು ಹೇಳಿದೆ. ಬದಲಾಗಿ, ಅವನು ಅವಳನ್ನು ಅಪಹರಿಸಿ, ಮಹಾಲಿಂಗಪುರದ ಮೂಲಕ ಬಾಗಲಕೋಟೆಗೆ ವಾಹನ ಚಲಾಯಿಸಿ ನಂತರ ಆಂಧ್ರಪ್ರದೇಶದ ಮಂತ್ರಾಲಯದಲ್ಲಿರುವ ಲಾಡ್ಜ್‌ಗೆ ಕರೆದೊಯ್ದಿದ್ದಾನೆ.

ಅಲ್ಲಿ, ಮೇ 14 ರಂದು, ಅವನು ಅವಳ ಮೇಲೆ ಲೈಂಗಿಕ ದೌರ್ಜನ್ಯ ಎಸಗಿದ್ದ. ಮೇ 16 ರಂದು ಹಿಂದಿರುಗಿದ ನಂತರ ಬಾಗಲಕೋಟೆ ಜಿಲ್ಲೆಯ ಮತ್ತೊಂದು ಲಾಡ್ಜ್‌ನಲ್ಲಿ ಅವನು ಅಪರಾಧವನ್ನು ಪುನರಾವರ್ತಿಸಿದ್ದ ಹುಡುಗಿಯನ್ನು ಮಹಾ ಲಿಂಗಪುರ ಬಸ್ ನಿಲ್ದಾಣದಲ್ಲಿ ಇಳಿಸಿ, ಯಾರಿಗಾದರೂ ಈ ಘಟನೆಯನ್ನು ಬಹಿರಂಗಪಡಿಸಿದರೆ ಕೊಲ್ಲುವುದಾಗಿ ಬೆದರಿಕೆ ಹಾಕಿದ್ದ.

ಈ ಬಳಿಕ ವ್ಯಕ್ತಿ ವಿರುದ್ಧ ದೂರು ದಾಖಲಾಗಿದ್ದು, ಆರಂಭದಲ್ಲಿ ಮೂಡಲಗಿ ಪೊಲೀಸ್ ಠಾಣೆಯಲ್ಲಿ ದಾಖಲಾಗಿದ್ದ ಪ್ರಕರಣವನ್ನು ಸಿಪಿಐ ಶ್ರೀಶೈಲ್ ಬ್ಯಾಕೋಡ್ ತನಿಖೆ ನಡೆಸಿದರು. ಅಪಹರಣವನ್ನು ಸೆರೆಹಿಡಿಯಲಾದ ಸಿಸಿಟಿವಿ ದೃಶ್ಯಾವಳಿಗಳು ಸೇರಿದಂತೆ ನಿರ್ಣಾಯಕ ಪುರಾವೆಗಳೊಂದಿಗೆ ತನಿಖೆಯು ಪ್ರಮುಖವಾಗಿದೆ. 8 ಸಾಕ್ಷಿಗಳ ಸಾಕ್ಷ್ಯಗಳು, 78 ದಾಖಲೆಗಳು ಮತ್ತು 9 ವಸ್ತುನಿಷ್ಠ ವಸ್ತುಗಳನ್ನು ಆಧರಿಸಿದ ಆರೋಪಪಟ್ಟಿಯನ್ನು ಬೆಳಗಾವಿಯ ಹೆಚ್ಚುವರಿ ಜಿಲ್ಲಾ ಮತ್ತು ಸೆಷನ್ಸ್ ನ್ಯಾಯಾಲಯದ (ವಿಶೇಷ ಫಾಸ್ಟ್ ಟ್ರ್ಯಾಕ್ ಪೋಕ್ಸೊ ನ್ಯಾಯಾಲಯ–01) ಮುಂದೆ ಸಲ್ಲಿಸಲಾಗಿತ್ತು.

ಶಬರಿಮಲೆ ಚಿನ್ನ ಕಳ್ಳತನ ಕೇಸ್: ಆರೋಪಿ ಮಾಸ್ಟರ್ ಪ್ಲ್ಯಾನ್‌ಗೆ ಎಸ್‌ಐಟಿ ಶಾಕ್



ಬಳ್ಳಾರಿ: ಶಬರಿಮಲೆಯ ಅಯ್ಯಪ್ಪ ಸ್ವಾಮಿ ದೇಗುಲದಲ್ಲಿ 4.5 ಕೆಜಿ ಚಿನ್ನ ದರೋಡೆ ಪ್ರಕರಣಕ್ಕೆ ಸಂಬಂಧಿಸಿದಂತೆ ಬಂಧಿತ ಆರೋಪಿ ಉನ್ನಿಕೃಷ್ಣನ್ ಮಾಡಿದ್ದ ಮಾಸ್ಟರ್ ಪ್ಲ್ಯಾನ್ ಕೇಳಿ ಕೇರಳ ಎಸ್‌ಐಟಿ ಅಧಿಕಾರಿಗಳೇ ಶಾಕ್ ಆಗಿದ್ದಾರೆ.

ಕೇರಳ ಎಸ್‌ಐಟಿ ನಡೆಸುತ್ತಿರುವ ತನಿಖೆ ವೇಳೆ ಸಿನಿಮೀಯ ರೀತಿಯ ದರೋಡೆಯ ಪ್ಲ್ಯಾನ್ ಬಯಲಾಗಿದೆ. ಪ್ರಕರಣದ ಪ್ರಮುಖ ಆರೋಪಿ ಉನ್ನಿಕೃಷ್ಣನ್ ಪ್ಲ್ಯಾನ್ ಕೇಳಿ ಸಿನಿಮಾ ನೋಡಿದ ಅನುಭವ ಆಯ್ತು ಎಂದು ಅಧಿಕಾರಿಗಳು ದಂಗಾಗಿದ್ದಾರೆ.

ಎಸ್‌ಐಟಿ ಮಾಹಿತಿ ಪ್ರಕಾರ, ದೇಗುಲ ಬಿಡೋದಕ್ಕೂ ಮೊದಲು 2019ರ ಜುಲೈನಲ್ಲಿ ಚಿನ್ನದ ತೂಕ ಮಾಡಿದಾಗ 42.8 ಕೆಜಿ ಇತ್ತು. ಆದರೆ ಅದು ಕೇರಳದಿಂದ ಚೆನ್ನೈನಲ್ಲಿರುವ ಸ್ಮಾರ್ಟ್ ಕ್ರಿಯೇಷನ್ಸ್ ತಲುಪಿದ ಬಳಿಕ ತೂಕ 38.25 ಕೆ.ಜಿ ಆಗಿತ್ತು. ಅಂದರೆ ಅಯ್ಯಪ್ಪನ ಗುಡಿ ಚಿನ್ನದ ಬಾಗಿಲು ಹಾಗೂ ದ್ವಾರಪಾಲಕರು ಕೇರಳದಿಂದ ಚೆನ್ನೈ ತಲುಪುವುದರೊಳಗೆ 39 ಕೆಜಿ ಆಗಿತ್ತಂತೆ. ಪ್ರಯಾಣದ ನಡುವೆ ಕೇರಳ, ಕರ್ನಾಟಕ, ಆಂಧ್ರದ ಕೆಲವು ಪ್ರಭಾವಿಗಳ ಮನೆಯಲ್ಲಿ ಪೂಜೆ ಮಾಡಿಸಲಾಗಿದೆ. ಈ ಗ್ಯಾಪ್‌ನಲ್ಲಿ ಚಿನ್ನ ಎಗರಿಸಿರುವ ಬಗ್ಗೆ ಆರೋಪಿ ಬಾಯ್ಬಿಟ್ಟಿದ್ದಾನೆ ಎಂದು ತಿಳಿಸಿದ್ದಾರೆ. 2019ರಲ್ಲಿ ಅಯ್ಯಪ್ಪ ಸ್ವಾಮಿಯ ದೇಗುಲದ ಎರಡು ಬಾಗಿಲು ಹಾಗೂ 2 ದ್ವಾರಪಾಲಕರಿಗೆ ಚಿನ್ನ ಮರು ಲೇಪನ ಮಾಡಲು ಯೋಜಿಸಲಾಗಿತ್ತು. ತಮಿಳುನಾಡು ಮೂಲದ ಸ್ಮಾರ್ಟ್ ಕ್ರಿಯೇಷನ್ಸ್ ಸಂಸ್ಥೆ ಉಚಿತವಾಗಿ ಚಿನ್ನ ಮರುಲೇಪನ ಮಾಡುವುದಾಗಿ ಮನವಿ ಮಾಡಿದ್ದರಿಂದ ಅದೇ ಕಂಪನಿಗೆ ಕೆಲಸ ಕೊಡಲಾಗಿತ್ತು.

ಮೈಸೂರಿನ ಜೆಎಲ್‌ಬಿ ರಸ್ತೆ, ಮಾನಂದವಾಡಿ ರಸ್ತೆ ಜಂಕ್ಷನ್‌ನಲ್ಲಿ ಸಿಗ್ನಲ್ ಲೈಟ್ ಅಳವಡಿಕೆ

ದಿನ ನಿತ್ಯದ ಅಪಘಾತ, ಟ್ರಾಫಿಕ್ ಜಾಮ್ ಗೋಳಾಟ ಇನ್ನಾದರೂ ತಪ್ಪುವುದೇ...



ಮೈಸೂರಿನ ನಂಜುಮಳಿಗೆ ಬಳಿಯ ಮಾನಂದವಾಡಿ ರಸ್ತೆಯಲ್ಲಿ ಹೊಸದಾಗಿ ಅಳವಡಿಸಿರುವ ಸಿಗ್ನಲ್ ಲೈಟ್

ಮೈಸೂರು, ಡಿ.21 (ಬಿಎಲ್‌ಯು)– ಆಕ್ಸಿಡೆಂಟ್ ಬ್ಲ್ಯಾಕ್ ಸ್ಪಾಟ್ ಆಗಿರುವ ಮೈಸೂರಿನ ನಂಜುಮಳಿಗೆ ಬಳಿಯ ಫೈವ್ ಲೈಟ್ ಸರ್ಕಲ್‌ನಲ್ಲಿ ಸಂಚಾರಿ ಪೊಲೀಸರು ಹೊಸದಾಗಿ ಸಿಗ್ನಲ್ ಲೈಟ್ ಅಳವಡಿಸಿದ್ದಾರೆ.

ಮೈಸೂರಿನ ನಂಜುಮಳಿಗೆ ಬಳಿಯ ಮಾನಂದವಾಡಿ ರಸ್ತೆ ಹಾಗೂ ಜೆಎಲ್‌ಬಿ ರಸ್ತೆ ಜಂಕ್ಷನ್‌ನಲ್ಲಿ ಅಪಘಾತ ಹಾಗೂ ಟ್ರಾಫಿಕ್ ಜಾಮ್ ದಿನ ನಿತ್ಯದ ಗೋಳಾಗಿತ್ತು. ಐದು ರಸ್ತೆಗಳು ಕೂಡುವ ಈ ವೃತ್ತವನ್ನು ದಾಟಿ ಹೋಗುವುದು ವಾಹನ ಸವಾರರಿಗೆ ದುಸ್ತರವಾಗಿತ್ತು.

ಮಾನಂದವಾಡಿ ರಸ್ತೆ, ನಂಜುಮಳಿಗೆ ರಸ್ತೆ, ಜೆಎಲ್‌ಬಿ ಪೂರ್ವ ಮತ್ತು ಪಶ್ಚಿಮ ರಸ್ತೆ, ಲಕ್ಷ್ಮಿಪುರಂ ರಸ್ತೆ, ಚಾಮುಂಡಿಪುರಂಗೆ ಹೋಗುವ ರಸ್ತೆಯ ಜಂಕ್ಷನ್ ಅನ್ನು ಫೈವ್ ಲೈಟ್ ಸರ್ಕಲ್ ಹೆಸರಿನಿಂದ ಕರೆಯಲಾಗುತ್ತದೆ. ಈ ವೃತ್ತದ ಪಕ್ಕದಲ್ಲೆ ತುಳಸಿದಾಸ್ ಮೋಹನ್ ದಾಸ್ ಹೆರಿಗೆ ಆಸ್ಪತ್ರೆ ಇದೆ.

ಸ್ಥಳೀಯ ಹಾಗೂ ಅಂತರರಾಜ್ಯ ಬಸ್, ಲಾರಿ, ಕಾರು ಸೇರಿದಂತೆ ಇತರೆ ಸಾವಿರಾರು ವಾಹನಗಳ ಈ ವೃತ್ತದ ಮೂಲಕ ಸಾಗುತ್ತವೆ. ಇದರಿಂದ ವಾಹನ ದಟ್ಟಣೆ ಹಾಗೂ ಜನ ಸಂದಣಿ ಇಲ್ಲಿ ಹೆಚ್ಚಾಗಿತ್ತು. ಐದು ಪ್ರಮುಖ ರಸ್ತೆಗಳು ಹಾಗೂ ಎರಡು ಕಿರಿದಾದ ರಸ್ತೆಗಳು ಈ ವೃತ್ತದಲ್ಲಿವೆ. ಐದು ರಸ್ತೆಯಿಂದಲೂ ವಾಹನ ದಟ್ಟಣೆ ಉಂಟಾಗಲಿದೆ. ಇದರಿಂದ ಈ ವೃತ್ತದಲ್ಲಿ ಅಪಘಾತ ಹಾಗೂ ಟ್ರಾಫಿಕ್ ಜಾಮ್ ಸಾಮಾನ್ಯವಾಗಿದೆ. ಅಲ್ಲದೆ, ಈ ವೃತ್ತದಲ್ಲಿ ಉದ್ದಕ್ಕೂ ಹಣ್ಣು ಹಾಗೂ ತರಕಾರಿ ಮಾರಾಟ ಮಾಡುವುದರಿಂದ ವಾಹನಗಳು ಸುಲಭವಾಗಿ ಸಾಗಲು ಅಡಚಣೆಯಾಗಿತ್ತು. ಈ ಹಿನ್ನೆಲೆಯಲ್ಲಿ ಸಂಚಾರಿ ಪೊಲೀಸರು ಈ ವೃತ್ತದಲ್ಲಿ ಹೊಸದಾಗಿ ಸಿಗ್ನಲ್ ಲೈಟ್ ಅಳವಡಿಸಿದ್ದು, ಶೀಘ್ರದಲ್ಲೆ ಚಾಲನೆಗೊಳಿಸಲು ಉದ್ದೇಶಿಸಿದ್ದಾರೆ. ಸಿಗ್ನಲ್ ಲೈಟ್‌ನಿಂದ ಸುಗಮ ವಾಹನ ಸಂಚಾರ ವ್ಯವಸ್ಥೆಯಾಗಿ ಅಪಘಾತ ಹಾಗೂ ಟ್ರಾಫಿಕ್ ಜಾಮ್ ಮುಕ್ತವಾಗಬೇಕೆಂಬುದು ಸ್ಥಳೀಯರ ಅಭಿಲಾಷೆಯಾಗಿದೆ.

ಕ್ಯಾನ್ಸರ್, ಪರಿಸರ ಸಂರಕ್ಷಣೆ ಕುರಿತು ಭಿತ್ತಿಪತ್ರ ಕಲಾ ಪ್ರದರ್ಶನ



ಶ್ರೀ ಕಲಾನಿಕೇತನ ದೃಶ್ಯಕಲಾ ಮಹಾವಿದ್ಯಾಲಯ ವಿದ್ಯಾರ್ಥಿಗಳು ಏರ್ಪಡಿಸಿದ್ದ ಭಿತ್ತಿಪತ್ರ ಕಲಾ ಪ್ರದರ್ಶನವನ್ನು ಅಲೆಯನ್ಸ್ ಕ್ಲಬ್ ಅಂತಾರಾಷ್ಟ್ರೀಯ ನಿರ್ದೇಶಕ ನಾಗರಾಜ ವಿ. ಬೈರಿ ಉದ್ಘಾಟಿಸಿದರು.

ಮೈಸೂರು, ಡಿ.21– ಶ್ರೀ ಕಲಾನಿಕೇತನ ದೃಶ್ಯ ಕಲಾ ಮಹಾವಿದ್ಯಾಲಯ ವತಿಯಿಂದ ಅಲೆಯನ್ಸ್ ಕ್ಲಬ್ ಪ್ರಾಂತ್ಯ ಸಮ್ಮೇಳನದಲ್ಲಿ ಕಲಾ ಪ್ರದರ್ಶನ ಏರ್ಪಡಿಸಲಾಗಿತ್ತು.

ಶ್ರೀ ಕಲಾನಿಕೇತನ ದೃಶ್ಯ ಕಲಾ ಮಹಾವಿದ್ಯಾಲಯದ ಅನ್ವಯ ಕಲಾ ವಿಭಾಗದ ಉಪನ್ಯಾಸಕ ಸಿ. ಚಿಕ್ಕಣ್ಣ ಹಾಗೂ 19 ಜನ ವಿದ್ಯಾರ್ಥಿಗಳಿಂದ 'ಕ್ಯಾನ್ಸರ್ ಹಾಗೂ ಪರಿಸರ ಸಂರಕ್ಷಣೆ' ಕುರಿತು ಅರಿವು ಮೂಡಿಸುವ ಉದ್ದೇಶದಿಂದ ಭಿತ್ತಿಪತ್ರ ಕಲಾ ಪ್ರದರ್ಶನವನ್ನು ಏರ್ಪಡಿಸಲಾಗಿತ್ತು.

ವಿದ್ಯಾರ್ಥಿಗಳಾದ ಎಂ. ನಂದಿತಾ, ದರ್ಶನ್ ರಾಜ್, ಎಂ.ಸಿ. ಜಯಂತ್, ಡಿ. ಜನ್ನಿಫರ್ ನೋಯಲ್, ವೈಭವ್ ಗೌಡ, ಎನ್. ಗೌರವ್, ಆರ್. ಗೌತಮ್, ಎಸ್.ವಿ. ಸಚಿನ್, ಆರ್. ಕುಮಾರ್,

ಸದಯ್ ಕುಮಾರ್, ಸಿ.ಎಲ್. ಧೀರಜ್ ಗೌಡ, ಎಂ. ಮಂಜು, ಎಸ್. ಸೌಂದರ್ಯ, ಡಿ.ಎಂ. ದೀಪು, ಪಿ. ಹರ್ಷ, ಎನ್. ಮಾನಸ, ವಿ.ಬಿ. ಸುಚಿತ್ರಾ, ಎಂ.ಎಂ. ನಿತನ್ ಹಾಗೂ ಎಂ.ಎಸ್, ಅಶ್ವಿನಿ ಅವರು.ಭಿತ್ತಿಪತ್ರ ಪ್ರದರ್ಶಿಸಿ, ಸಾರ್ವಜನಿಕರಿಗೆ ಅರಿವು ಮೂಡಿಸಿದರು. ಮರಗಳನ್ನು ಉಳಿಸಿ, ಪ್ಲಾಸ್ಟಿಕ್ ಬಳಕೆ ಕಡಿಮೆ ಮಾಡಿ ಎಂದು ಅವರು ಕೋರಿದರು. ಈ ಪ್ರದರ್ಶನವನ್ನು ಅಲೆಯನ್ಸ್ ಪ್ರಾಂತ್ಯ ಸಮ್ಮೇಳನಕ್ಕೆ ಬಂದಿದ್ದವರೆಲ್ಲಾ ವೀಕ್ಷಿಸಿ, ಮೆಚ್ಚುಗೆ ಸೂಚಿಸಿದರು. ಈ ವಿದ್ಯಾರ್ಥಿಗಳಿಗೆ ಸಮ್ಮೇಳನದಲ್ಲಿ ಪ್ರಮಾಣಪತ್ರ ವಿತರಿಸಲಾಯಿತು.

'ಅರಸು ಚುಟುಕು ಚಿತ್ತಾರಗಳು' ಕೃತಿ ಲೋಕಾರ್ಪಣೆ



'ಅರಸು ಚುಟುಕು ಚಿತ್ತಾರಗಳು' ಕೃತಿಯನ್ನು ಶುಕ್ರವಾರ ಲೋಕಾರ್ಪಣೆಗೊಳಿಸಲಾಯಿತು.

ಮೈಸೂರು, ಡಿ.21(ಎಂಕೆ)– ಲೇಖಕಿ ಸೀತಾಲಕ್ಷ್ಮಿ ಸಂಪಾದಿತ 'ಅರಸು ಚುಟುಕು ಚಿತ್ತಾರಗಳು' ಕೃತಿಯನ್ನು ಶುಕ್ರವಾರ ಲೋಕಾರ್ಪಣೆಗೊಳಿಸಲಾಯಿತು.


ಮೈಸೂರಿನ ಜೆಎಲ್‌ಬಿ ರಸ್ತೆಯಲ್ಲಿರುವ ಇನ್ಸ್‌ಟಿಟ್ಯೂಟ್ ಆಫ್ ಇಂಜಿನಿಯರ್ಸ್ ಸಭಾಂಗಣದಲ್ಲಿ ಅನ್ವೇಷಣಾ ಸೇವಾ ಟ್ರಸ್ಟ್ ವತಿಯಿಂದ ಆಯೋಜಿಸಿದ್ದ ಕಾರ್ಯ ಕ್ರಮದಲ್ಲಿ ಕರ್ನಾಟಕ ಸಂಸ್ಕೃತ ವಿವಿ ವಿಶ್ರಾಂತ ಕುಲಪತಿ ಡಾ.ಪದ್ಮ ಶೇಖರ್ ಕೃತಿ ಬಿಡುಗಡೆ ಮಾಡಿದರು. ಕಾರ್ಯಕ್ರಮ ಉದ್ಘಾಟಿಸಿದ ಮಾಜಿ ಸಚಿವೆ ರಾಣಿ ಸತೀಶ್ ಮಾತನಾಡಿ, ಚುಟುಕು ಸಾಹಿತ್ಯ ಜೀವನೋತ್ಸವ ನೀಡುವ ಸಾಹಿತ್ಯವಾಗಿದ್ದು, ಓದುಗರ ಮನಸ್ಸಿಗೆ ಉಲ್ಲಾಸ ನೀಡಲಿದೆ. ತ್ರಿವೇಣಿ, ಅನುಪಮಾ ನಿರಂಜನ ಇನ್ನಿತರೆ ಮಹಿಳಾ ಸಾಹಿತಿಗಳು ಚುಟುಕು ಸಾಹಿತ್ಯಕ್ಕೆ ಮಹತ್ವದ ಕೊಡುಗೆ ನೀಡಿದ್ದಾರೆ ಎಂದು ಸ್ಮರಿಸಿದರು.

ಅರಸು ಚುಟುಕು ಚಿತ್ತಾರ ಕೃತಿಯಲ್ಲಿ 20 ಮಂದಿ ಪ್ರಗತಿಪರ ಚಿಂತಕ ಮಹಿಳಾ ಬರಹಗಾರರು ಚುಟುಕುಗಳನ್ನು ವಿಶ್ಲೇಷಣೆ ಮಾಡಿರುವ ರೀತಿ ಆಕರ್ಷಕವಾಗಿದೆ. ಅದೇ ರೀತಿ ಚುಟುಕು ಸಾಹಿತ್ಯ ಮನಸ್ಸನ್ನು ಅರಳಿಸುವ ಸಾಹಿತ್ಯ ವಾಗಿದೆ ಎಂದು ಮೆಚ್ಚುಗೆ ವ್ಯಕ್ತಪಡಿಸಿದರು. ಶಿಕ್ಷಣ ತಜ್ಞೆ ಭ್ರಮರ ಬಹದ್ದೂರ್, ವಿಜಯಲಕ್ಷ್ಮಿ ಅರಸ್, ದೂರದರ್ಶನ ಮತ್ತು ಆಕಾಶವಾಣಿ ವಿಶ್ರಾಂತ ನಿರ್ದೇಶಕಿ ಡಾ.ನಿರ್ಮಲಾ ಸಿ.ಯಲಿಗಾರ್, ಚುಟುಕು ಸಾಹಿತಿ ಎಂಜಿಆರ್ ಅರಸ್ ಮತ್ತಿತರರಿದ್ದರು.

ಸಹಾಯಧನಕ್ಕೆ ಅರ್ಜಿ ಆಹ್ವಾನ

ಮೈಸೂರು, ಡಿ.21–ಕೈಗಾರಿಕೆ ಮತ್ತು ವಾಣಿಜ್ಯ ಇಲಾಖೆಯ ವತಿಯಿಂದ ಪ್ರಧಾನಮಂತ್ರಿಗಳ ಉದ್ಯೋಗ ಸೃಜನೆ ಯೋಜನೆಯಡಿ ಗ್ರಾಮೀಣ, ನಗರ ಪ್ರದೇಶದ ಯುವಕ, ಯುವತಿಯರು ಸ್ವ-ಉದ್ಯೋಗ ಪ್ರಾರಂಭಿಸಲು ಉತ್ಪಾದನಾ, ಸೇವಾ ಚಟುವಟಿಕೆ ಘಟಕಗಳನ್ನು ಪ್ರಾರಂಭಿಸಬಹುದಾಗಿದ್ದು, ಉತ್ಪಾದನಾ ಚಟುವಟಿಕೆಗೆ ಗರಿಷ್ಟ 50 ಲಕ್ಷ ಹಾಗೂ ಸೇವಾ ಚಟುವಟಿಕೆಗೆ ಗರಿಷ್ಟ 20 ಲಕ್ಷ ಸಾಲವನ್ನು ಬ್ಯಾಂಕ್ ಮೂಲಕ ಸಾಲವನ್ನು ಹಾಗೂ ಗ್ರಾಮೀಣ ಪ್ರದೇಶದ ಘಟಕಗಳಿಗೆ ಶೇ.35 ಹಾಗೂ ನಗರ ಪ್ರದೇಶದ ಘಟಕಗಳಿಗೆ ಶೇ.25 ರ ಸಹಾಯಧನ ವಿತರಿಸಲಾಗುವುದು. ಆಸಕ್ತರು ವೆಬ್‌ಸೈಟ್ kviconline. gov.in/pmegpportal ಮೂಲಕ ಅರ್ಜಿ ಸಲ್ಲಿಸಬಹುದಾಗಿದ್ದು, ಹೆಚ್ಚಿನ ಮಾಹಿತಿಗಾಗಿ ಜಿಲ್ಲಾ ಕೈಗಾರಿಕಾ ಕೇಂದ್ರ, ಸಿಟಿಐ ಕಟ್ಟಡ ಸಯ್ಯಾಜಿರಾವ್ ರಸ್ತೆ ಮೈಸೂರು ಕಚೇರಿಯ ದೂ.ಸಂ:0821–2520886 ನ್ನು ಸಂಪರ್ಕಿಸಬಹುದಾಗಿದೆ.


22ನೇ ವರ್ಷದ ಸವಿನೆನಪು



ಶ್ರೀ ಎಂ.ಬಿ ಕುಮಾರ್

ದುಃಖತಪ್ತರು: ಪತ್ನಿ ಶ್ರೀಮತಿ ಸಾವಿತ್ರಮ್ಮ ಮತ್ತು ಮಕ್ಕಳಾದ ರವಿಕುಮಾರ್ ಮತ್ತು ಮಗಳು ರೂಪ, ಮಂಜು ಹಾಗೂ ಮೊಮ್ಮಕ್ಕಳಾದ ಹರ್ಷ, ಅಂಜಲಿ ಮತ್ತು (ಲೇಟ್ ಮಿಷಿನ್ ಬೆಟ್ಟೇಗೌಡ ನರಸಮ್ಮ ಕುಟುಂಬವರ್ಗದವರು) ಮತ್ತು ಮಂಚೇಗೌಡನ ಕೊಪ್ಪಲ್ ಗ್ರಾಮಸ್ಥರು

ನಿಧನ



ಶ್ರೀಮತಿ ಶಾರದಮ್ಮ

(92 ವರ್ಷ) W/o. ಲೇ. ವಸಂತರಾಜಯ್ಯ

16.03.1934 to 21.12.2025

ದುಃಖತಪ್ತರು:

ಡಾ. ಹೆಚ್.ವಿ. ಪರಿಶ್ವನಾಥ್ & ಶ್ರೀಮತಿ ಸುಮಾ
ಡಾ. ಹೆಚ್.ವಿ. ಶ್ರೀಮಂದಿರ್ ಕುಮಾರ್ & ಶ್ರೀಮತಿ ಸೀತಾ
ಹೆಚ್.ವಿ. ಸತೀಶ್ & ಶ್ರೀಮತಿ ನಯನ
ಮೊಮ್ಮಕ್ಕಳು, ಕುಟುಂಬವರ್ಗ ಮತ್ತು ಸ್ನೇಹಿತರು

FOND REMEMBRANCE
In Loving Memory of



Words cannot express our feelings of losing you. We remember you each moment with utmost respect and love in our hearts. Time can never erase your presence in our lives.

SHRI. H. R. SRINIVAS MURTHY
1943 - 2015
Remembered by : Family Members

ಮೈಸೂರು ಮಿತ್ರ 46

ಓದುಗರ ಗಮನಕ್ಕೆ

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು



ದಿ ಮೈಸೂರು ಕೋ-ಆಪರೇಟಿವ್ ಬ್ಯಾಂಕ್ ನಿ.,

ಗಾಂಧಿಚೌಕ, ಮೈಸೂರು. ಶಾಖೆ: 0821–2563851

ಮುಖ್ಯ ಕಛೇರಿ: 0821–2521631

ಪ್ರಕಟಣೆ

ಗೌರವಾನ್ವಿತ ಸದಸ್ಯರುಗಳಿಗೆ ಅಂತಿಮ ಕಾಲಾವಕಾಶ

ತಾ: 14.09.2025 ರಂದು ನಡೆದ 119ನೇ ಸರ್ವ ಸದಸ್ಯರ ವಾರ್ಷಿಕ ಮಹಾಸಭೆಯ ತೀರ್ಮಾನದ ರೀತ್ಯಾ ತಹಲ್‌ವರೆವಿಗೂ ಬ್ಯಾಂಕಿನಲ್ಲಿ "ಮರಣ ನಿಧಿ ವಂತಿಗೆ" ರೂ.500/– ಗಳನ್ನು ಪಾವತಿಸದೆ ಇರುವ ಸದಸ್ಯರುಗಳಿಗೆ ಅಂತಿಮವಾಗಿ ತಾ: 31.12.2025 ರೊಳಗೆ ಪಾವತಿಸಲು ಈ ಮೂಲಕ ಕೋರಲಾಗಿದೆ (ಜೀವಿತಾವಧಿಯಲ್ಲಿ ಒಮ್ಮೆ ಮಾತ್ರ). ತಪ್ಪಿದಲ್ಲಿ ಸದಸ್ಯರುಗಳು ಮರಣ ಹೊಂದಿದಾಗ (ಪಾವತಿಸದೆ ಉಳಿದ ಸದಸ್ಯರುಗಳು) ನಾಮಿನಿ ಅಥವಾ ವಾರಸುದಾರರಿಗೆ ಬ್ಯಾಂಕಿನಿಂದ ನೀಡುವ ಮರಣ ಪರಿಹಾರ ನಿಧಿಯ ರೂ.10,000/–ಗಳನ್ನು ಕಡ್ಡಾಯವಾಗಿ ನಿಲ್ಲಿಸಲಾಗುವುದು.

ಪ್ರಕಟಣೆ: 10–07–2024 ರಿಂದ ರೂ 5ಲಕ್ಷ ಠೇವಣಿ ಮಾಡುವ ಠೇವಣಿದಾರರಿಗೆ ಬ್ಯಾಂಕಿನ ಸದಸ್ಯತ್ವ ಫಾರಂ ನೀಡಲಾಗುತ್ತಿದ್ದು, ಇದನ್ನು ತಾ॥ 20–12–2025 ರಿಂದ ನಿಲ್ಲಿಸಲಾಗುವುದು.

ಸೂಚನೆ:– ಈಗಾಗಲೇ ಪಾವತಿಸಿರುವವರಿಗೆ ಹಾಗೂ 2022ರಿಂದ ಈಚೆಗೆ ಸದಸ್ಯರಾಗಿರುವವರಿಗೆ ಅನ್ವಯಿಸುವುದಿಲ್ಲ.

ಆಡಳಿತ ಮಂಡಳಿಯ ಅಪ್ಪಣೆ ಮೇರೆಗೆ
ಸಹಿ/– ಮುಖ್ಯ ಕಾರ್ಯನಿರ್ವಾಹಕ
ಮೊ.9148037007

PUBLIC NOTICE

My clients have agreed to purchase, the below mentioned Schedule Property from SMT. DIVYA K.S @ DIVYA PRAKASH K, Wife of Sri. Vikrant P Vivek and daughter of Sri Shivaprakash K.P, aged about 35 years, residing at No. 307, Vriddhi', 1st Main, 3rd Block. Near Kalabhairaveshwara Temple, BEML 4th Stage, Rajarajeshwarinagar, Bengaluru-560 098 (referred as "Owner"). The Owner has represented that she is the absolute owner of the Schedule Property having absolute, clear, marketable right, title and interest therein and that there are no other person/s having any right, claim over the Schedule Property apart from her. The Owner has further represented that she has not mortgaged, created a lien, encumbered the Schedule Property or part thereof in any manner and that the Owner has not entered into any agreement for Sale/MoU/Power of Attorney with any person/s except with my clients in regard to the Schedule Property. Any person/s having any objection or claims shall with documentary evidence lodge their objections/claims within 15 (Fifteen) days from the date of this notice to my office at situated at No.69, FF102, 1 Cross, LIC Colony, 2nd Stage, Srirampura, Mysore 570 023, failing which my clients shall proceed with the above mentioned transaction, without any reference and regard to such purported claim, interest, which shall be deemed to be waived off for all claims and purposes.

SCHEDULE PROPERTY

All that piece and parcel of Agricultural Land bearing Survey No. 28/2, measuring an extent of 2 Acres 23 Guntas, situated at Mallupura Village, Biligere Hobli, Nanjangud Taluk, Mysore District, bounded on the:EAST BY: Road, WEST BY: Land bearing Sy. No. 29, NORTH BY:Land bearing Sy. No. 28/1, SOUTH BY: Land bearing Sy. No. 36

Sd/- ASHWINI K.A
Advocate,
Mob: 9743476614

Date:20.12.2025, Place: Mysore

PUBLIC NOTICE

The Public at large is hereby notified that my client Sri Pritish Chakravarty s/o Sri Prantosh Chakravarty aged about 35 years, R/at # 541, Vigyan Vihar, Sector 49A, Chandigarh 160047 is intending to purchase a flat known as Zuari Garden City-Kaveri Apartments, on fifth floor in F (tower/-block/building) No. F 506 (Building, Mysore which is more fully described in the schedule property below from its owner Sri Vasuki Rao s/o Sri Lakshman Rao B.H. aged about 39 years, R/ at # 2719, 3rd Main, 1st Cross, V.V.Mohalla, Mysore 570 020.If any person/persons has/have any right, title, interest or claim over the schedule property, they may lodge their claims/objections with the under signed advocate within 07 days from the date of this notification with supporting documents, failing which, our client will take it for granted that there are no claims/ objections over the schedule property and he will proceed to purchase the said property. Any claims/ objections received after the stipulated period of 07 days will not be considered.

SCHEDULE PROPERTY

Residential Apartment on fifth floor bearing No. F 506 along with one garage/Covered parking carved out of Sy.Nos. 5/1, 5/2, 5/3, 5/4, 5/5, 7, 8/1, 8/2, 9/1, 9/2, 9/3, 10/1, 10/2, 10/3, 11, 12, 104/1, 104/2, 105, 106/1, 106/2, 107/1, 107/2, 107/3, 107/4, 111/1A, 111/1B, 111/2, 121, 123, 124, 147, 150 and 151 situated at Hulikere Village, Belagola Hobli, Srirangapatna Taluk, Mandya District, bounded on the. East: By Flat No. F 501, West: By Flat No. F -505, North: Flat No. F-503 and South: open space

Sd/- B.K MOHAN B.A.L., LL.M.(I.P.R) A.C.S
**Advocate, #11/A, 2nd Main Paramahamsa Road, Yadavagiri, Mysore-570020
PH: 9880243114**

Date: 21.12.2025, Place: Mysore